ಶಿವರಾಮ ಕಾರಂತರ ಮರಳಿಮಣ್ಣಿಗೆ ಕಾದಂಬರಿಯ ಸನ್ನಿವೇಶಗಳು ಮತ್ತು ಪಾತ್ರಗಳ ಸಾಂಸ್ಕೃತಿಕ ಮುಖಾಮುಖಿ

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

2015–2016

ಸಂಶೋಧಕರು :
ನೋಂದಣಿ ಸಂಖ್ಯೆ: 151201030072

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–583276

ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ಸನ್ನಿವೇಶಗಳು ಮತ್ತು ಪಾತ್ರಗಳ ಸಾಂಸ್ಕೃತಿಕ ಮುಖಾಮುಖಿ

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

2015-2016

ಸಂಶೋಧಕರು :

ಶಿಲ್ಪ.ಕೆ.
ನೋಂದಣಿ ಸಂಖ್ಯೆ : 151201030072

ಮಾರ್ಗದರ್ಶಕರು :

ಡಾ. ಮ. ರಾಮಕೃಷ್ಣ
ಸಹ ಪ್ರಾಧ್ಯಾಪಕರು
ಭಾರತೀ ಕಾಲೇಜು
ಭಾರತೀನಗರ, ಕೆ.ಎಂ.ದೊಡ್ಡಿ, ಮಂಡ್ಯ ಜಿಲ್ಲೆ.

ಅಧ್ಯಯನ ಕೇಂದ್ರ
ಶ್ರೀ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,
ಕರ್ನಾಟಕ ಸಂಘ (ರಿ.), ಮಂಡ್ಯ.

ಕನ್ನಡ ವಿಭಾಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
ವಿದ್ಯಾರಣ್ಯ-583276

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಶ್ರೀಕಂಠೇಶಗೌಡ, ಸಂಶೋಧನಾ ಕೇಂದ್ರದಲ್ಲಿ 2015–16ರ ಸಾಲಿಗೆ ಕನ್ನಡ ಎಂ. ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ಸನ್ನಿವೇಶಗಳು ಮತ್ತು ಪಾತ್ರಗಳ ಸಾಂಸ್ಕೃತಿಕ ಮುಖಾಮುಖಿ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥ ಎಂ.ರಾಮಕೃಷ್ಣ ರವರ ಮಾರ್ಗದಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ. ಫಿಲ್(ಕನ್ನಡ) ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ: ಮಂಡ್ಯ

ದಿನಾಂಕ: 5/08/16

ಸಂಶೋಧನಾ ವಿದ್ಯಾರ್ಥಿ,

ರಿ.ನಂ: **151201030072**,

ಕರ್ನಾಟಕ ಸಂಘ(ರಿ.), ಮಂಡ್ಯ.

ಮಾರ್ಗದರ್ಶಕರ ದೃಢೀಕರಣ ಪತ್ರ

2015–16ನೇ ಸಾಲಿನಲ್ಲಿ ಶಿಲ್ಪ.ಕೆ ಎಂ.ಫಿಲ್ ವಿದ್ಯಾರ್ಥಿಯ ಈ ಪರೀಕ್ಷೆಯ ಅಂಗವಾಗಿ **""ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ಸನ್ನಿವೇಶಗಳು ಮತ್ತು ಪಾತ್ರಗಳ ಸಾಂಸ್ಕೃತಿಕ ಮುಖಾಮುಖಿ"** ಎಂಬ ವಿಷಯ ಕುರಿತು ತನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ ಇದನ್ನು ಇವರು ಮೊದಲು ಯಾವುದೇ ಪದವಿ, ಡಿಪ್ಲೋಮ ಅಧ್ಯಯನಕ್ಕಾಗಲಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ: ಮಂಡ್ಯ

ದಿನಾಂಕ: 05/08/16

ಮಾರ್ಗದರ್ಶಕರು

ಡಾ. ಎಂ. ರಾಮಕೃಷ್ಣ
ಸಹ ಪ್ರಾಧ್ಯಾಪಕ
ಭಾರತೀ ಪದವಿ ಕಾಲೇಜು
ಭಾರತೀನಗರ, ಮದ್ದೂರು ತಾ।।, ಮಂಡ್ಯ ಜಿಲ್ಲೆ.

ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ಸನ್ನಿವೇಶಗಳು ಮತ್ತು ಪಾತ್ರಗಳ ಸಾಂಸ್ಕೃತಿಕ ಮುಖಾಮುಖಿ

ಪರಿವಿಡಿ





ಅಧ್ಯಾಯ-1
ಅಧ್ಯಯನದ ಉದ್ದೇಶ

ಕನ್ನಡ ಎಂ.ಫಿಲ್ ಪದವಿಗಾಗಿ ನಡೆಸುತ್ತಿರುವ ಅಧ್ಯಯನದ ಅಂಗವಾಗಿ ರಚಿಸಲಾಗಿರುವ ಸಂಶೋಧನಾ ನಿಬಂಧಕ್ಕೆ ಕನ್ನಡ ಸಾಹಿತ್ಯ ಲೋಕ ಕಂಡ ಸೃಜನಶೀಲ ನವೋದಯ ಸಾಹಿತ್ಯದ ಅಪರೂಪದ ಲೇಖಕರಾದ ಶಿವರಾಮ ಕಾರಂತ ಅವರು ರಚಿಸಿರುವ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕನ್ನಡದ ನವೋದಯ ಸಾಹಿತ್ಯದ ಕೃತಿಗಳಲ್ಲಿ ಒಂದಾದ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಮೂರು ತಲೆ ಮಾರುಗಳ ಕಥೆಯನ್ನು ಕಾಣಬಹುದು. ಇದು ಸುಮಾರು ತೊಂಬತ್ತು ವರ್ಷದ ಸುಧೀರ್ಘ ಬದುಕಿನ ಕಥೆಯಾಗಿದೆ. ಈ ಮೂರು ತಲೆಮಾರುಗಳು ಕಂಡ ಬದುಕು, ರೀತಿ, ಗುಣ, ಮೌಲ್ಯ ಬದಲಾವಣೆ ಇವುಗಳನ್ನು ತಿಳಿಯಬಹುದು. ಮೊದಲನೇ ತಲೆ ಮಾರಿನಲ್ಲಿ ರಾಮೈತಾಳರ ನಂಬಿಕೆ, ಆಚಾರ ವಿಚಾರಗಳು, ಪೌರೋಹಿತ್ಯ, ಜೊತೆಗಿನ ಸಂಬಂಧ ಇವುಗಳನ್ನು ವಿಶ್ಲೇಷಿಸಲಾಗಿದೆ. ಈ ತಲೆ ಮಾರಿನಲ್ಲಿ ಪ್ರಮುಖವಾಗಿ ರಾಮಐತಾಳ, ಪಾರೋತಿ, ಸರಸೋತಿ, ಸತ್ಯಭಾಮೆ ಮುಂತಾದ ಪಾತ್ರ ಚಿತ್ರಣಗಳನ್ನು ವಿಶ್ಲೇಷಿಸಲಾಗಿದೆ. ರಾಮಐತಾಳರ ಮದುವೆಯ ವರ್ಣನೆ ಈ ತಲೆಮಾರಿನ ಜೀವನದಲ್ಲಿನ ದ್ವಂದ್ವತೆ, ಮಣ್ಣಿನ ಜೊತೆಗಿನ ಒಡನಾಟ, ಸಂಘರ್ಷ ಇದರಿಂದ ಈ ತಲೆ ಮಾರಿನಲ್ಲಿ ಉಂಟಾದ ಅಡ್ಡಿ–ಆತಂಕಗಳನ್ನು ಪರಿಹಾರ ಮಾಡಿಕೊಳ್ಳಲು ಕಂಡುಕೊಳ್ಳುವ ಉಪಾಯಗಳು ಮುಂತಾದವುಗಳ ಸುತ್ತ ಪಾತ್ರ ಚಿತ್ರಣಗಳನ್ನು ವಿಶ್ಲೇಷಣೆ ಮಾಡುವುದು ಅಧ್ಯಯನದ ಉದ್ದೇಶವಾಗಿದೆ.

ಎರಡನೇ ತಲೆ ಮಾರಿನಲ್ಲಿ ಪ್ರಮುಖವಾಗಿ ಲಚ್ಚಿ, ನಾಗವೇಣಿ ಪ್ರಮುಖ ಪಾತ್ರಗಳಾಗಿವೆ. ಇಲ್ಲಿ ಕಂಡು ಬರುವ ಆಧುನಿಕರಣ, ಇದರ ಪ್ರಭಾವದಿಂದ ಉಂಟಾದ ತೊಂದರೆಗಳು, *ಲಿಂಪಟತನ ಇವುಗಳನ್ನು ಪಾತ್ರಚಿತ್ರಣದ ಮೂಲಕ ವಿಶ್ಲೇಷಿಸಲಾಗಿದೆ. ಮೂರನೆ ತಲೆಮಾರಿನಲ್ಲಿ* ಮತ್ತೆ ಮಣ್ಣಿನ ಒಡನಾಟ, ಆಧುನಿಕರಣದಿಂದ ಒಳ್ಳೆ ಗುಣಗಳ ಬೆಳವಣಿಗೆ, ಭವಿಷ್ಯದಲ್ಲಿನ ನಂಬಿಕೆ ಇವುಗಳನ್ನು ಪಾತ್ರ ಚಿತ್ರಣದ ಮೂಲಕ ವಿಶ್ಲೇಷಿಸಲಾಗಿದೆ. ಮೂರನೆ ತಲೆಮಾರಿನ ಪ್ರಮುಖ ಪಾತ್ರಗಳು, ರಾಮ, ನಾಗವೇಣಿ.

ಈ ಪ್ರಬಂಧದಲ್ಲಿ ಅಧ್ಯಯನದ ಉದ್ದೇಶ ಮತ್ತು ಉಪಸಂಹಾರಗಳನ್ನು ಬಿಟ್ಟು ಒಟ್ಟು 5 ಅಧ್ಯಾಯಗಳಿವೆ, ಅವುಗಳೆಂದರೆ: ಕಾದಂಬರಿಕಾರರ 'ಜೀವನ ಮತ್ತು ಸಾಧನೆ, ವಸ್ತು ವಿವೇಚನೆ, ಸನ್ನಿವೇಶಗಳ ಚಿತ್ರಣ, ಪ್ರಮುಖ ಪಾತ್ರ ವಿಶ್ಲೇಷಣೆ, ಕಾದಂಬರಿಯ ಶೈಲಿ ಇವುಗಳನ್ನು ಕುರಿತು

ಸಾಹಿತ್ಯಿಕ ಅಧ್ಯಯನ ಮಾಡಲಾಗಿದೆ. ಬಡತನದ ಬಾಳ್ವೆಯ ಈ ಕಾದಂಬರಿಯ ಮೂಲ ವಸ್ತು. ಈ ಮೂರು ತಲೆ ಮಾರುಗಳಲ್ಲಿ ಎದುರಾಗುವ ಸಮಸ್ಯೆಗಳು ಸಂಘರ್ಷ, ಸಂಪ್ರದಾಯ, ನಂಬಿಕೆಗಳು ರೀತಿ, ಗುಣ, ನೆಲದೊಂದಿಗಿನ ಸಂಬಂಧ, ಪ್ರಕೃತಿಯೊಂದಿಗಿನ ಸಂಬಂಧ ಇವುಗಳು ಭಿನ್ನವಾಗಿವೆ. ಮನವನ ಮನಸ್ಸು ವಿಕಾಸವಾದಂತೆ ಪ್ರಕೃತಿ ಮತ್ತು ಮನವನಿಗೆ ಇರುವ ಸಂಬಂಧದ ಶೋಧನೆ ಮಾಡುವುದನ್ನು ತಿಳಿಯಬಹುದು. ಪೃಕೃತಿ ಮನುಷ್ಯನ ಬದುಕನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ಮುಖ್ಯವಾಗಿ ಮನುಷ್ಯನ ಜೀವನದ ಸಾರ್ಥಕತೆ ಪ್ರಕೃತಿಯಲ್ಲಿಯೇ ಕಂಡು ಬರುವಂಥದ್ದು, ಈ ಅಂಶವನ್ನು ಚರ್ಚಿಸಿ ವ್ಯಕ್ತಪಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಲೇಖಕರ ನಿಲುವುಗಳು, ತತ್ವ-ಚಿಂತನೆಗಳು, ವಸ್ತು ವಿವೇಚನೆ, ಪಾತ್ರ ಚಿತ್ರಣ, ಬದುಕಿನ ಸೂಕ್ಷ್ಮತೆ, ಮಾನವೀಯ ವಿಚಾರಗಳು ಮಾನವ ಬದುಕಿನ ಹೋರಾಟ, ಕೊನೆಯಲ್ಲಿ ತಿಳಿಯುವ ನಿಲುವು ಪ್ರಕೃತಿ ದರ್ಶನದ ಜೊತೆಗೆ ಅಂಟಿಕೊಂಡ ಮಾನವನ ಜೀವನ ದರ್ಶನವನ್ನು ವಿವರವಾಗಿ ನಿರೂಪಿಲಾಗಿದೆ. ಲೇಖಕರು ಬಳಸಿರುವ ಭಾಷೆ, ಶೈಲಿ, ತಂತ್ರ, ಕಥಾ-ನಿರೂಪಣೆ, ಸಮಾಜಕ್ಕೆ ಕೊಡಬಯಸುವ ಸಂದೇಶಗಳು, ಕಾದಂಬರಿಯ ಬೆಳವಣಿಗೆ ಪಡೆದಿಕೊಳ್ಳುವ ತಿರುವುಗಳು, ಆಧುನಿಕರಣ ಬದುಕಿನಲ್ಲಿ ಎಬ್ಬಿಸುವ ಸಮಸ್ಯೆಗಳು, ಸಂಧರ್ಭ, ಇವುಗಳ ಜೊತೆಗೆ ಪಾತ್ರಗಳು ಪ್ರಕೃತಿಯೊಂದಿಗೆ ನಡೆಸುವ ಹೋರಾಟ ಇವುಗಳನ್ನು ಸಾಹಿತ್ಯಕ ದೃಷ್ಟಿಕೋನದಿಂದ ಅಧ್ಯಯನ ಮಾಡಿ ಅದರಲ್ಲಿ ಇರುವಂತ ನಿಸರ್ಗ ಮತ್ತು ಮನುಷ್ಯ ಮುಖಾಮುಖಿಯ ಹಲವು ನೆಲೆಗಳ ಅಂಶಗಳನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ-2

ಕಾರಂತರ ಜೀವನ ಮತ್ತು ಸಾಹಿತ್ಯ

ಶಿವರಾಮ ಕಾರಂತರು ಕನ್ನಡ ಸಾಹಿತ್ಯದ ಮಹತ್ವದ ಲೇಖಕರು ಹಾಗೂ ಚಿಂತಕರು ಅವರದ್ದು ವಿಶಿಷ್ಟ ಸಾಂಸ್ಕೃತಿಕ ಪ್ರತಿಭೆ. ಕಾರಂತರು 1902 ಅಕ್ಟೋಬರ್ 10 ರಂದು ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಎಂಬ ಹಳ್ಳಿಯಲ್ಲಿ ಜನಿಸಿದರು ಇವರ ತಂದೆ ಶೇಷಾಕಾರಂತ ತಾಯಿ ಶ್ರೀಮತಿ ಲಕ್ಷ್ಮಿ.

ಕಾರಂತರು ವ್ಯಾಸಂಗದ ಅವಧಿಯಲ್ಲಿ ಗಾಂಧೀಜಿ ಯವರ ಆಂದೋಲನದಿಂದ ಪ್ರಭಾವಿತರಾಗಿ ಓದನೂ ಅರ್ಧಕ್ಕೆ ನಿಲ್ಲಿಸಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು.ಕಾರಂತರಿಗೆ ಬರವಣಿಗೆ ಮುಖ್ಯ ವ್ಯವಸಾಯವಾದರು ಪತ್ರಿಕೋದ್ಯಮ, ಸಮಾಜ ಸುಧಾರಣಾ ಕ್ರಾಂತಿ, ರಾಜಕೀಯ ಹೋರಾಟ ಪರಿಸರ ಸಂರಕ್ಷಣೆ ಹಾಗೆ ಕಾವ್ಯ ನಾಟಕ, ಗೀತನಾಟಕ, ಸಣ್ಣಕತೆ, ಕಾದಂಬರಿ, ವಿಡಂಬನೆ, ಮಕ್ಕಳ ಸಾಹಿತ್ಯ, ಯಕ್ಷಗಾನ, ಬಯಲಾಟ, ಪ್ರವಾಸ ಸಾಹಿತ್ಯ, ಜೀವನಚರಿತ್ರೆ, ವಿಚಾರ ಸಾಹಿತ್ಯ, ಚಲನಚಿತ್ರ ಹೀಗೆ ಪ್ರತಿಯಂದು ಕ್ಷೇತ್ರದಲ್ಲೂ ತಮನ್ನು ತೊಡಗಿಸಿಕೊಂಡರು. ಅವರ ಬರವಣಿಗೆಯು ಅವರ ಅಖಂಡ ವ್ಯಕ್ತಿತ್ವದ ಸಂಕೇತವು ಹಾಗು ಬದುಕಿನ ಬಹುಮುಖಿ ಅನ್ವೇಷಣೆಯೂ ಆಗಿ ಕಾಣಿಸುತ್ತದೆ.

ಕಾರಂತರು ಮೊದಲಿನಿಂದಲೂ ಪ್ರಯೋಗಶೀಲರು ಅವರು ನಡೆಸಿದ ಸ್ವಯಂ ಸೇವಕ ಶಿಬಿರ, ಬಾಲವನ, ದಸರಾಉತ್ಸವ, ಯಕ್ಷಗಾನ ತರಬೇತಿ ಇವೆಲ್ಲಾ ಇವರ ಪ್ರಯೋಗಶೀಲತೆಗೆ ಉದಾಹರಣೆಗಳಾಗಿವೆ.

"ವಿಷಯ, ವೈವಿಧ್ಯ, ಗಂಭೀರ ಪ್ರಜ್ಞೆ ಮತ್ತು ಕಲಾತ್ಮಕತೆ ಇವುಗಳಿಂದ ತುಂಬಿಕೊಂಡ ಕಾರಂತರ ಕೃತಿಗಳು ಹೊಸಗನ್ನಡ ಸಾಹಿತ್ಯದ ಪ್ರಮುಖ ಸುದ್ದಿಯಾಗಿದೆ"[1] ಭಾಲವನ ಕಾರಂತರ ಒಂದು ವಿಶಿಷ್ಟ ಪ್ರಯೋಗವಾಗಿತ್ತು. ಇದೊಂದು ಶಿಕ್ಷಣ ಕ್ಷೇತ್ರದ ಮಹತ್ವದ ಸಂಸ್ಥೆಯೇ ಆಗಿತ್ತು. 1934ರಲ್ಲಿ ಬಾಲವನ ಒಂದು ಮಾದರಿ ಶಾಲೆಯಾಗಿ ಸ್ಥಾಪನೆಗೊಂಡಿತು. ಆಟದ ಮೂಲಕ ಪಾಠವನ್ನು ಕಲಿಸುವ ಈ ಯೋಜನೆ ಆಗ ಹೊಸತು.ದುರಂತವೆಂದರೆ ಕರ್ನಾಟಕ ಸರ್ಕಾರ ಇಂಥ ಸಂಸ್ಥೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಯಿತು.

ಕಾರಂತರು 'ರಾಷ್ಟ್ರಗೀತೆ ಸುಧಾಕರ' ಹಾಗೂ ಸೀಳ್ಗವನಗಳು' ಎಂಬ ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ ಆದರೆ ಅವರು ಯಶಸ್ಸುಗಳಿಸಿದ್ದು ಗದ್ಯ ಸಾಹಿತ್ಯದಲ್ಲೇ ಚಾಲುಕ್ಯ ವಾಸ್ತು ಮತ್ತು ಶಿಲ್ಪ ಉಪನ್ಯಾಸಗಳ ಸಂಗ್ರಹವಾದ "ಚಿತ್ರಶಿಲ್ಪ ವಾಸ್ತು ಕಲೆಗಳು", ಯಕ್ಷಗಾನ,

---

1. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ, ಡಾ॥ ಎಂ ಎನ್ ನಂದೀಶ್ ಹಂಚಿ. ಪು.ಸಂ 68 ಮುದ್ರಣ 2014

ಬಯಲಾಟ, ಕರ್ನಾಟಕದಲ್ಲಿ ಚಿತ್ರಕಲೆ ಭಾರತೀಯ ಶಿಲ್ಪ ಜಾನಪದ ಗೀತೆಗಳು, ಕಲೆಯ ದರ್ಶನ, ಕಲಾ ಪ್ರಪಂಚ ಇವು ಕಾರಂತರ ಭಾರತೀಯ ಕಲೆ ಕುರಿತಾದ ಪುಸ್ತಕಗಳು.

ಮಕ್ಕಳ ವಿಶ್ವಕೋಶ(ಬಾಲಪ್ರಪಂಚ), ವಿಜ್ಞಾನ ವಿಶ್ವಕೋಶ (ವಿಜ್ಞಾನ ಪ್ರಪಂಚ 1,2,3,4) ಇವೆರಡೂ ಕಾರಂತರ ಗಮನಾರ್ಹ ಸಾಧನೆಗಳು, ಪ್ರಾಣಿಗಳನ್ನು ಕುರಿತು 'ಪ್ರಾಣಿಪ್ರಪಂಚ' ಎಂಬ ವಿಶ್ವಕೋಶ ಮಾದರಿ ಕೃತಿಯನ್ನು ರಚಿಸಿದ್ದಾರೆ. ಸಿರಿಗನ್ನಡ ಅರ್ಥಕೋಶ ಕಾರಂತರ ಸಂಪಾದಕತ್ವದಲ್ಲಿ ಬಂದ ಅಪೂರ್ವ ಕನ್ನಡದ ನಿಘಂಟು 'ಬಾಳ್ವೆಯೇ ಬೆಳಕು' ಕಾರಂತರ ಒಂದು ವಿಚಾರ ಪೂರ್ಣ ಹಾಗೂ ತಾತ್ವಕ ಕೃತಿ. ಕಾರಂತರಿಗೆ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಗಳೆಲ್ಲ ಬಂದಿರುವುದು ಅವರ ಕಾದಂಬರಿಗಳಿಗೆ ಮಾತ್ರ.ಅವರ 'ಮೂಕಜ್ಜಿಯ ಕನಸುಗಳು' ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ, 'ಅಳಿದ ಮೇಲೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಕಾರಂತರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೆಲಸ ಮಾಡಿದ್ದರೂ ಅವರನ್ನು ಕನ್ನಡ ಸಾಹಿತ್ಯಲೋಕ ಥಟ್ಟನೆ ಗುರುತಿಸುವುದು ಕಾದಂಬರಿಕಾರರೆಂದೆ. ಇದು ಕನ್ನಡ ಸಾಹಿತ್ಯದ ಸಂಸ್ಕೃತಿಯ ಅನನ್ಯತೆ. ಪ್ರತಿಯೊಬ್ಬ ಲೇಖಕನ ಸೃಜನಶೀಲ ಸಾಹಿತ್ಯ ಪ್ರತಿಭೆ ಯಾವುದಾದರೊಂದು ಸಾಹಿತ್ಯ ಪ್ರಕಾರದಲ್ಲಿ ತನ್ನ ಸಿದ್ದಿಯನ್ನು ಪಡೆದುಕೊಂಡಿರುತ್ತದೆ.

ಕಾರಂತರು ಕನ್ಯಾಬಲಿ, ಚೋಮನದುಡಿ, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಮೈಮನಗಳ ಸುಳಿಯಲ್ಲಿ, ಇಳೆಯೆಂಬ, ಹೆತ್ತಾಳ ತಾಯಿ, ಬತ್ತದ ತೊರೆ, ಧರ್ಮರಾಯನ ಸಂಸಾರ, ಸ್ವಪ್ನದ ಹೊಳೆ, ಕೇವಲ ಮುನಷ್ಯರು ಸೇರಿದಂತೆ 45 ಕಾದಂಬರಿಗಳನ್ನು ಬರೆದಿದ್ದಾರೆ. ಕಾರಂತರು ಹೆಚ್ಚು ಕಡಿಮೆ ಒಂದು ಶತಮಾನದ ಕಾಲ ಜೀವಿಸಿದ್ದವರು. ಅದರಲ್ಲೂ ಮುಖ್ಯವಾಗಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಅವಧಿಯ ಅರ್ಧ-ಅರ್ಧ ಶತಮಾನಗಳನ್ನು ಕಂಡುಂಡವರು. ಸಮಾಜದಲ್ಲಿನ ಸಮಕಾಲಿನ ವೈವಿಧ್ಯಮಯವಾದ ಬದುಕನ್ನು ವಿಸ್ತೃತವಾದ ಅನುಭವದ ನೆಲೆಗಟ್ಟಿನಲ್ಲಿ ತಮ್ಮ ಬರವಣಿಗೆಯಲ್ಲಿ ದಾಖಲಿಸುತ್ತಾ ಹಾಗೂ ಅದಕ್ಕೆ ಪ್ರತಿಕ್ರಿಯಿಸುತ್ತಾ ಬಂದವರು. 'ಚೋಮನದುಡಿ' ಈ ಕಾದಂಬರಿಯ ನಾಯಕನಾದ ಚೋಮ ಕೇವಲ ದೃಷ್ಟಿಕೋನಗಳಾಗಿ ಉಳಿಯದೆ ಸಂಪೂರ್ಣವಾದ ವ್ಯಕ್ತಿಯಾಗಿದ್ದಾನೆ. ಸಮಾಜದಲ್ಲಿನ ತಾರತಮ್ಯ ಅಸ್ಪೃಶ್ಯತೆ ಅರವತ್ತೈದು ವರ್ಷ ಸಂದ ಚೋಮನ ಅಪರ ಜೀವನದ ಚಿತ್ರಣವಿದೆ. "ಸರಸಮ್ಮನ ಸಮಾಧಿ" ದಾಂಪತ್ಯ ವಿರಸಗಳ ದೊಡ್ಡ ಸಮಸ್ಯೆಯನ್ನು ಕುರಿತು ತಮ್ಮ ಮನಸ್ಸು ವಿಚಾರಗ್ರಸ್ತವಾಗಲಿ ಎಂಬುದೇ ಈ ಕಾದಂಬರಿಯ ಉದ್ದೇಶ ಕಾದಂಬರಿಯ ಮೂಲ ದ್ರವ್ಯ ಸಾಮಾಜಿಕ ಸನ್ನಿವೇಶದಿಂದಲೇ ಹುಟ್ಟಿದ್ದು ಎನ್ನುವುದು ಸ್ಪಷ್ಟವಾಗಿದೆ. ಆದರೆ ಕಾದಂಬರಿ ಉಪಯೋಗಿಸುವ ಮುಖ್ಯತಂತ್ರ, ಕಾರಂತರೇ ಹೇಳಿದಂತೆ,

'ಕಾಲ್ಪನಿಕ' ಕಾಲ್ಪನಿಕವಾದ ಪ್ರೇತದ ಸಂಕೇತ ಕಾದಂಬರಿಯಲ್ಲಿ ಬರುವುದು ವಾಸ್ತವಕ್ಕೆ ದೂರವಾದ ಒಂದು ಆಯಾಮವನ್ನು ಸೃಷ್ಟಿಸುವುದಕ್ಕೆ ಸರಸಮ್ಮನ ಸಮಾಧಿಯಲ್ಲಿ ವಾಸ್ತವಿಕತೆ ಮತ್ತು ಭ್ರಮೆ ಇವುಗಳ ವಿಲಕ್ಷಣ ಕೂಡುವಿಕೆಯಿಂದಾಗಿ ಹೊಸ ಕಾದಂಬರಿ ರೂಪ ಸೃಷ್ಟಿಯಾಗಿದೆ.

'ಬೆಟ್ಟದ ಜೀವ' ಇದೊಂದು ಪ್ರಾದೇಶಿಕ ಕಾದಂಬರಿ ಎಂದು ಕಾರಂತರೆ ಕಾದಂಬರಿಯ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾರೆ. ನಾಡಿನ ಕಾಡುಗಳೊಡನೆ ಸೆಣಸಾಡಿ ಜೀವನದ ನೆಲೆಯನ್ನು ನಿಲ್ಲಿಸಿದ ಹಳೆಯ ವೀರರ ಕೆಚ್ಚನ್ನೇ ಇಲ್ಲಿ ಇಂದಿನ ಕಥಾನಯಕ ನಾಯಕಿಯರಲ್ಲಿ ಕಾಣಬಹುದು. ಕಾಡನ್ನೇ ನಾಡಾಗಿಸಿದ ಗೋಪಾಲಯ್ಯ ಶಂಕರಿ ಮೊದಲಾದ ಅಪೂರ್ವ ಪಾತ್ರಗಳ ಚಿತ್ರಣ ಈ ಕಾದಂಬರಿಯಲ್ಲಿದೆ. 'ಔದಾರ್ಯದ ಉರುಳಲ್ಲಿ' ಕಾರಂತರು ರಾಜಕೀಯ ಎಂದು ಕರೆಯಬಹುದಾದ ಏಳೆಂಟು ಕಾದಂಬರಿಗಳನ್ನು ಬರೆದಿದ್ದಾರೆ. ಅದರಲ್ಲಿ ಈ ಕಾದಂಬರಿಯು ಒಂದು. ನಮ್ಮ ರಾಜಕೀಯ ಕಾದಂಬರಿಗಳು ಐತಿಹಾಸಿಕ ಕಾದಂಬರಿಗಳೆ ಆಗಿವೆ.

'ಮಡಿದವರು' ಕಾದಂಬರಿಯು ಸಹ ಒಂದು ರಾಜಕೀಯ ಕಾದಂಬರಿ ಈ ಕಾದಂಬರಿಯಲ್ಲಿ ತ್ಯಾಗ, ಬಲಿದಾನ, ಉಜ್ವಲದೇಶಾಭಿಮಾನ ಇವುಗಳನ್ನು ಕಾಣಬಹುದು. 'ಮೂಕಜ್ಜಿಯ ಕನಸು' ಸಂಸ್ಕೃತಿಯನ್ನೇ ಪರೀಕ್ಷೆಗೆ ಒಳಪಡಿಸುವ ತಾತ್ತ್ವಿಕತೆ ವ್ಯಾಪಕವಾಗಿ ಕಾಣಿಸುತ್ತದೆ. 'ಮೈಮನಗಳ ಸುಳಿಯಲ್ಲಿ' ಲೈಂಗಿಕ ಸಮಸ್ಯೆಗಳಿಗೆ ಸೀಮಿತವಾಗಿದೆ. 'ಅಳಿದ ಮೇಲೆ' ಹೊರನೋಟಕ್ಕೆ ಜೀವನ ಚರಿತ್ರೆಯಂತೆ ಕಂಡುಬಂದರು. ಇದರ ನಿಜವಾದ ವಸ್ತು ಮನುಷ್ಯ ಮನುಷ್ಯನಾಗಿ ಸಾಧ್ಯತೆಗಳು. ಮಾನವ ಜೀವನಕ್ಕೆ ಮೂಲಭೂತವಾಗಿ ಸಂಬಂಧಿಸುವ ಈ ಪ್ರಶ್ನೆಯನ್ನು ಸಮಕಾಲಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ಪರೀಕ್ಷಿಸುವುದರ ಮೂಲಕ ಕಾದಂಬರಿ ತನ್ನ ವೈಶಿಷ್ಟ್ಯವನ್ನು ಪಡೆಯುತ್ತದೆ. ಈ ಕಾದಂಬರಿಗಳ ಕೇಂದ್ರ ವ್ಯಕ್ತಿಗಳು ಒಬ್ಬರಿಂದೊಬ್ಬರು ತೀರ ಭಿನ್ನರಾಗಿದ್ದಾರೂ ಅವರ ಬದುಕು ಕಾರಂತರ ತಾತ್ವಿಕ ನಿಲುವುಗಳನ್ನೇ ಪ್ರತಿಫಲಿಸುವುದರಿಂದ ಸಾಂಕೇತಿಕ ಸ್ವರೂಪ ಪಡೆದುಕೊಳ್ಳುತ್ತದೆ. ಈ ರೀತಿಯಾಗಿ ಕಾರಂತರು ವಿಭಿನ್ನ ವಿಶಿಷ್ಟವಾದಂತಹ ಕಾದಂಬರಿಗಳನ್ನು ಬರೆದು ಜನರ ಮನಸ್ಸನ್ನು ಸೆಳೆದಿದ್ದಾರೆ.

ಅಧ್ಯಾಯ-2

ಮರಳಿ ಮಣ್ಣಿಗೆ ಕಾದಂಬರಿಯ ವಸ್ತುವಿವೇಚನೆ

ಶಿವರಾಮ ಕಾರಂತರ 'ಮರಳಿಮಣ್ಣಿಗೆ' ಕಾದಂಬರಿಯು ನವೋದಯ ಅಪೂರ್ವವಾದ ಕಾದಂಬರಿಗಳಲಿ ಒಂದು 'ಮರಳಿ ಮಣ್ಣಿಗೆ' ಕಾದಂಬರಿಯು ಒಟ್ಟು 20 ಅಧ್ಯಾಯ ಮತ್ತು 415 ಪುಟಗಳನ್ನು ಹೊಂದಿರುವ ಬೃಹತ್ತಾದ ಕಾದಂಬರಿ ಸುಮಾರು 60 ವರ್ಷದ ಬರುಕಿನ ಸುದೀರ್ಘ ಕತೆ. 1850 ರ ಸುಮಾರಿಗೆ ತೊಡಗುವ ಈ ಕಥೆಯು 1940 ರಲ್ಲಿ ಮುಗಿಯುತ್ತದೆ. ಮೂರು ತಲೆಮಾರುಗಳ ಬಡತನದ ಬಾಳ್ವೆಯ ಹೋರಾಟವೇ ಈ ಕಾದಂಬರಿಯ ವಸ್ತುವಾಗಿದೆ.

ಮರಳಿ ಮಣ್ಣಿಗೆ' ವಸ್ತುವಿನ ವಿಕಾಸ ಕ್ರಮದಲ್ಲಿ ಮೂರು ಮೂರು ಅವಸ್ಥೆಗಳನ್ನು ನಾವು ಗುರ್ತಿಸಬಹುದು. "ಪ್ರಥಮ ಅವಸ್ಥೆಯಲ್ಲಿ ನಾವು ಕಾಣುವ ಗ್ರಾಮೀಣ ಸಮಾಜ ಗಟ್ಟಿಯಾಗಿ ಬೇರೂರಿದೆ. ನಿರ್ದಿಷ್ಟವಾದ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆ ಹೊಂದಿದೆ. ಶಾಶ್ವತ ಮೌಲ್ಯಗಳನ್ನು ನಂಬಿದ ಸಮಾಜ. ಪರಂಪರೆ ಸಂಪ್ರದಾಯ ಈ ಸಾಜದ ಜೀವಾಳ ಹಾಗೂ ಶಕ್ತಿ"[2]. ಒಂದನೆ ತಲೆಮಾರಿನಲ್ಲಿ ಬಾಳುವಂತಹ ವ್ಯಕ್ತಿಗಳು ರಾಮಐತಾಳ, ಸರಸೋತಿ, ಪಾರೋತಿ, ಸತ್ಯಭಾಮೆ ಶೀನೆ, ನಾರಾಯಣಯ್ಯ ಇತ್ಯಾದಿ ತಮ್ಮ ಪರಿಸರದೊಡನೆ ಹೊಂದಿಕೊಳ್ಳುವುದಲ್ಲಿಯೇ ಧನ್ಯತೆಯನ್ನು ಕಂಡುಕೊಳ್ಳುತ್ತಾರೆ. ಈ ಹೊಂದಾಣಿಕೆಯ ರೀತಿಯಲ್ಲಿ ತಾರತಮ್ಯವಿದೆಯಾದರು ಹೋರಾಟದ ಪ್ರಶ್ನೆಯೇ ಇಲ್ಲಿ ಏಳುವುದಿಲ್ಲ. "ವರುಣ ದೇವರ ಮುಂದೆ ಮನುಷ್ಯನ ಆಟವೆ"[1] (ಪು. 10) ಎಂದು ಪ್ರಕೃತಿಯ ಸ್ವಾಮಿತ್ವವನ್ನು ಒಪ್ಪಿಕೊಳ್ಳುವ ರೀತಿಯಲ್ಲಿಯೇ ಸಮಾಜದಲ್ಲಿ ಪರಂಪರಾಗತವಾದ ಮೌಲ್ಯಗಳ ಪ್ರಭುತ್ವವನ್ನು ಇಲ್ಲಿ ಎಲ್ಲರೂ ಸ್ವೀಕರಿಸುತ್ತಾರೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿನ ಕಾರಣದಿಂದ ಸಂಸಾರದಲ್ಲಿ ಉಂಟಾದ ಬಿರುಕಿನಿಂದ ಗಂಡು ಪಲಾಯನ ಮಾಡುತ್ತಾನೆ. ಅಂತಹ ಸಂದರ್ಭದಲ್ಲಿ ಸ್ತ್ರೀಯು ಆ ಕುಟುಂಬವನ್ನು ಹೇಗೆ ಮುನ್ನಡೆಸುತ್ತಾಳೆ ಇದು ಈ ಕಾದಂಬರಿಯ ವಸ್ತುವಾಗಿದೆ. ರಾಮ ಐತಾಳರು ಕೋಡಿಯ ವೈಧಿಕ ಬ್ರಾಹ್ಮಣರು ತಂದೆಗಳಿಸಿದ ಕೊಂಚ ಆಸ್ತಿ ಹೊರತು ಬೇರೇನು ಇಲ್ಲದವರು. ರಾಮ ಐತಾಳರ ತಂಗಿ ಸ್ವಂತ ಬೇಸಾಯ ದುಡಿಮೆಯಿಂದ ಮೂವರು ಬೆವರು ಸುರಿಸಿ ಬದುಕನ್ನು ಸಾಗಿಸುತ್ತಿದ್ದರು.

ಈ ವರ್ಷ ಗದ್ದೆಗೆ ಬಿತ್ತಿದ್ದ ಬೆಳೆ ಬಹಳ ಸೊಗಸಾಗಿ ಬಂದಿತ್ತು. ಬತ್ತವನ್ನು ಎಲ್ಲರು ಸೇರಿ ಬಡಿದು ಮನೆಗೆ ಸೇರಿಸಿದರು. ಸರಸೋತಿ, ಪಾರೋಪತಿಯರು "ಈ ವರ್ಷ ಹತ್ತು

2. ಕನ್ನಡ ಕಥನ ಸಾಹಿತ್ಯ ಕಾದಂಬರಿ ಜಿ.ಎಸ್ ಆಮೂರ್.ಪು.ಸಂ. 119 ಮುದ್ರಣ 1994

ಮುಡಿಯಾದರೂ ಬತ್ತ ಹೆಚ್ಚು ಬರಬೇಕು"2 (ಪು. 28) ಎಂದು ಮಾತನಾಡಿಕೊಳ್ಳುತ್ತಿದ್ದರು. ಇದನ್ನು ಕೇಳಿಸಿಕೊಂಡ ಐತಾಳರು ಇಬ್ಬರಿಗೂ ರೇಗಿ "ಹರಕು ಬಾಯಿ ನಿಮ್ಮದು ಬರಿಯ ಹತ್ತು ಮುಡಿ ಸಾಕೆ? ಒಂದು ಕೋರ್ಜಿಯೇ ಹೆಚ್ಚಲಿಕ್ಕಿಲ್ಲವೇ"3 (ಪು. 28) ಎಂದು ಬೈದರು. ಹೆಂಗಸರ ಬಾಯಿಯಲ್ಲಿ ವಿಷಯ ನಿಲ್ಲುವುದಿಲ್ಲ ಎಂದು ಜೊತೆಗೆ ಮನೆಯ ಯಜಮಾನಿಕೆಯ ವಿಷಯದಲ್ಲಿ ಸ್ತ್ರೀಯರು ತಲೆ ಹಾಕಬಾರದೆಂಬುದು ಅವರ ಅಭಿಪ್ರಾಯವಾಗಿತ್ತು. ಆದರಿಂದ ಇಬ್ಬರು ಹೆಂಗಸರಿಲ್ಲದ ವೇಳೆಯನ್ನು ನೋಡಿ ಭತತವನ್ನು ಅಳೆದು ನೋಡಿ ಅವರು ತಿರುಗಿ ಮನೆಗೆ ಬರುವಷ್ಟರಲ್ಲಿ ಅಳೆದು ಮುಗಿದಿತ್ತು.ಸರಸೋತಿ "ಹ್ಯಾಗೆ! ಕಳೆದ ವರ್ಷದಷ್ಟಾದರೂ ಇದೆಯೇ"4 (ಪು. 28) ಎಂದು ಕೇಳಿದಾಗ ಐತಾಳರು ಕೋಪಗೊಂಡು ನಿಮ್ಮ ಹರಕು ಬಾಯಿಂದ ಎರೆಡು ಕಳಸೆ ಕಡಿಮೆ ಬಂದಿದೆ ಎಂದು ಮನೆಯ ಯಜಮಾನಿಕೆಯಲ್ಲಿ ಹೆಂಗಸರು ತಲೆಹಾಕುವುದು ಸರಿ ಅಲ್ಲವೆಂದು ಬೈದರು.

ಪಾರೋತಿಗೆ ಮಕ್ಕಳಿಲ್ಲದ ಕಾರಣ ಐತಾಳರು ಮನೆಯ ಸದಸ್ಯರಾದ ಪಾರೋತಿ ಸರಸೋತಿಯರಿಗೆ ಯಾವುದೆ ಸುಳಿವಿಲ್ಲದೆ ಮರುಮದುವೆಯನ್ನು ನಿಶ್ಚಯ ಮಾಡಿಕೊಂಡು ಬರುತ್ತಾರೆ. ಐತಾಳರು ಶೀನನಿಗೆ "ನಮ್ಮ ಮನೆಯ ಪಂಚಾತಿಕೆ ನಿನಗೆ ಗೊತ್ತಿಲ್ಲ. ನಮ್ಮಲ್ಲಿ ಒಬ್ಬ ಯಜಮಾನ ಎಂದರೆ ಒಬ್ಬನೇ ಯಜಮಾನ ಗಂಡನು ಒಂದು ಹೇಳುವುದು ಹೆಂಡತಿ ಇನ್ನೊಂದು ಅಂಬುವುದೇ ಈ ವರೆಗೆ ನಡೆದಿದ್ದಿಲ್ಲ"5 (ಪು. 58) ಎಂದು ಐತಾಳರು ತಮ್ಮ ಮನೆಯಲ್ಲಿನ ಯಜಮಾನಿಕೆಯನ್ನು ತಿಳಿಸುತ್ತಾ ಮನೆಯ ಹೆಂಗಸರನ್ನು ಅಲ್ಲಗಳೆಯುತ್ತಾರೆ. ಐತಾಳರು ಸತ್ಯಭಾಮೆಯನ್ನು ಮದುವೆಯಾಗುತ್ತಾರೆ. ಮೊದಲನೆಯ ಹೆಂಡತಿ ಪಾರೋತಿಯು ಮದುವೆಯನ್ನು ವಿರೋಧಿಸುವುದಿಲ್ಲ. ತನಗೆ ದತ್ತು ಮಗು ಬೇಕೆಂದು ಹೇಳಿದ್ದಳು.ಆದರೆ ಗಂಡ ಇನ್ನೊಂದು ಮದುವೆಯನ್ನು ಮಾಡಿಕೊಂಡರು ಮನಸಿನಲ್ಲಿ ಬೇಜಾರಿದ್ದರು ಅದನ್ನು ತೋರಿಸಿಕೊಳ್ಳದೆ ಇಷ್ಟೆಜೀವನ ಎಂದು ಸವತಿಯನ್ನು ಆದರಿಸುತ್ತಾಳೆ. ಐತಾಳ ಮತ್ತು ಸತ್ಯಭಾಮೆಗೆ ಗಂಡುಮಗು ಮತ್ತು ಒಂದು ಹೆಣ್ಣುಮಗು ಜನಿಸುತ್ತದೆ. ಲಚ್ಚ (ಲಕ್ಷ್ಮೀನಾರಾಯಣ) ಮಗ ಸುಬ್ಬಿ ಮಗಳು.

ಐತಾಳರು ಕೋಡಿಯ ವೈದಿಕ ಬ್ರಾಹ್ಮಣನಾಗಿದ್ದರು ತನ್ನ ಮಗ ಸರ್ಕಾರಿ ಶಾಲೆಯಲ್ಲಿ ಓದಿ ಇಂಗ್ಲೀಷ್ ಶಿಕ್ಷಣವನ್ನು ಪಡೆದು ದೊಡ್ಡ ಕೆಲಸಕ್ಕೆ ಸೇರಬೇಕು ಎಂಬ ಆಸೆಯನ್ನು ಹೊತ್ತು ಮಗನನ್ನು ಶಾಲೆಗೆ ಸೇರಿಸುತ್ತಾರೆ.

ಪಟ್ಟಣವನ್ನು ಸೇರಿದ ಲಚ್ಚನು ವಿದ್ಯಾಭ್ಯಾಸದ ಜೊತೆಗೆ ಕೆಟ್ಟ ಚಟಗಳನ್ನು ಮೈಗೂಡಿಸಿಕೊಳ್ಳುತ್ತಾನೆ. ಇದನ್ನು ತಿಳಿದ ರಾಮ ಐತಾಳರಿಗೆ ಬೇಸರವಾಗುತ್ತದೆ. ಮನೆಯ ಹೆಂಗಸರ ಮಾತಿನಂತೆ ಮದುವೆ ಮಾಡಿದರೆ ಸರಿಹೋಗಬಹುದೆಂದು ನಿರ್ಧರಿಸಿ, ವಿದ್ಯಾಭ್ಯಾಸ

ಮುಗಿದ ನಂತರ ಮದುವೆ ಮಾಡುವುದಾಗಿ ನಿರ್ಧರಿಸುತ್ತಾರೆ. ಕೋಡಿಯ ಪಕ್ಕದ ಗ್ರಾಮವೆ ಐರೋಡಿ. ಈ ಊರಿನಲ್ಲಿ ವಾಸುದೇವಯ್ಯ ಎಂಬ ವಕೀಲರನ್ನು ಐತಾಳರು ತಮ್ಮ ಮಗನ ಮುಂದಿನ ವಿದ್ಯಾಭ್ಯಾಸವನ್ನು ಹೇಗೆ ಮಾಡಿಸುವುದೆಂದು ಕೇಳಲು ಹೋಗಿದ್ದರು.

ವಾಸುದೇವಯ್ಯನವರು ಲಚ್ಚನ ಇಂಗ್ಲೀಷ್ ಜ್ಞಾನವನ್ನು ನೋಡಿ ತಮ್ಮ ಮಗಳಿಗೆ ತಕ್ಕನಾದ ವರನೆಂದು ತಿಳಿದು ಲಚ್ಚನಿಗೆ ನಾಗವೇಣಿಯನ್ನು ಕೊಟ್ಟು ಮದುವೆ ಮಾಡುತ್ತಾರೆ. ಕೆಲವು ದಿನಗಳ ನಂತರ ಲಚ್ಚನು ಕೆಟ್ಟ ಚಟಗಳಿಗೆ ದಾಸನಾಗಿರುವುದು ತಿಳಿದು ವಾಸುದೇವಯ್ಯನವರು ಐತಾಳರಿಗೆ ನಿಮ್ಮ ಮಗನನ್ನು ನಿಮ್ಮ ಮನೆಯಲ್ಲಿಯೆ ಇರಿಸಿಕೊಳ್ಳಿ ಎಂದು ಕಾಗದವನ್ನು ಬರೆಯುತ್ತಾರೆ.ಗಾಬರಿಗೊಂಡ ಐತಾಳರು ವಿಷಯ ಏನೆಂದು ವಿಚಾರಿಸಿದಾಗ ಮಗನ ಸತ್ಯ ಸಂಗತಿಗಳು ತಿಳಿಯುತ್ತವೆ. ವಾಸುದೇವಯ್ಯನ ಅಣ್ಣ ನಾರಾಯಣಯ್ಯ "ಐತಾಳರೇ ನೀವು ನಿಮ್ಮ ಹುಡುಗನಿಗೆ ಬೇರೆಯೇ ಲಗ್ನವನ್ನು ಮಾಡಿಸಬಹುದು. ಅಣ್ಣನಿಗೆ ಅಳಿಯನ ಮೇಲಿನ ಆಸೆಯೇ ಹೊರಟುಹೋಗಿದೆ"6 (ಪು. 202)ಎಂದು ಐತಾಳರಿಗೆ ಲಚ್ಚನ ಕಲ್ಯಾಣ ಗುಣಗಳನ್ನು ತಿಳಿಸುತ್ತಾ ಇದರಿಂದ ನಾಗವೇಣಿಗೆ ಗರ್ಭಪಾತವಾಗಿ ಆಕೆಯು ನಿಮ್ಮ ಮಗ ಸಂಪಾದಿಸಿದ ರೋಗಗಳ ಫಲವಾಗಿ ಆಯುಷ್ಯದಲ್ಲಿ ನರಳುವಂತಾಗಿದೆ ಎಂದು ಐತಾಳರಿಗೆ ತಿಳಿಸಿದರು.

ಲಚ್ಚನು ಶೀನಮಯ್ಯರ ಬಳಿಯಲ್ಲಿ ಸಾಲವನ್ನು ಪಡೆದು ಮದರಾಸಿಗೆ ತೆರಳಿದನು.ಸಾಲದ ಹಣದಲ್ಲಿ ಮದ್ರಾಸಿನಲ್ಲಿ ಮೆರೆದಾಡತೊಡಗಿದನು. ಇತ್ತ ಐತಾಳರು ಮಗನ ಈ ವರ್ತನೆಯಿಂದ ಕುಸಿದು ಹೋದರು. ಐತಾಳರು ವಾಸುದೇವಯ್ಯನವರಿಗೆ ಪತ್ರವನ್ನು ಬರೆಯುತ್ತಾರೆ.ನನ್ನ ದುರ್ದೈವದಿಂದ ನಿಮ್ಮ ಮಗಳಿಗೆ ತೊಂದರೆಯಾಯಿತು. ಲಚ್ಚನನ್ನು ನಿಮ್ಮಿಂದಲು ದಾರಿಗೆ ತರಲು ಸಾಧ್ಯವಾಗಲಿಲ್ಲವೆ ಎಂದು ನೊಂದುಕೊಂಡು, ನನಗೆ ಇರುವ ಆಸ್ತಿಯಲ್ಲಿ ಮುಕ್ಕಾಲು ನನ್ನ ಸ್ವಯಾರ್ಜಿತ. ಅದನ್ನು ನಿಮ್ಮ ಮಗಳ ಹೆಸರಿಗೆ ಬರೆಯುತ್ತೇನೆ. ಉಳಿದ ಸ್ವಲ್ಪವನ್ನು ನನ್ನ ಮಗಳ ಹೆಸರಿಗೆ ಬರೆಯುತ್ತೇನೆ ಎಂದು, ನನ್ನ ಅಜ್ಜ ಬಿಟ್ಟ ಆಸ್ತಿಯನ್ನು ಒಂದು ಚೂರು ಮುಟ್ಟುವುದಿಲ್ಲ ಅದನ್ನು ಲಚ್ಚನು ಏನಾದರೂ ಮಾಡಲಿ. ಕೊನೆಯ ಕ್ಷಣದಲ್ಲಿ ಮಗನ ಮುಖ ನೋಡುವ ಯೋಗವು ತಪ್ಪಿತ್ತು. ಸೊಸೆಯ ಮುಖ ನೋಡುವ ಯೋಗವನ್ನಾದರು ಕೊಡುತ್ತೀರ ಎಂದು ಹೇಳಿ ರಾಮಐತಾಳರು ಪತ್ರವನ್ನು ಬರೆದರು.

ವಾಸುದೇವಯ್ಯನವರು ಪತ್ರವನ್ನು ಕಂಡು ಕೋಡಿಗೆ ಬರುತ್ತಾರೆ. ನಾಗವೇಣಿಯು ಸ್ವಲ್ಪದಿನ ಇಲ್ಲೆ ಇರುತ್ತೇನೆ ಎಂದು ಹೇಳುತ್ತಾಳೆ. ಕೆಲವು ದಿನಗಳ ನಂತರ ಐತಾಳರ ಜ್ವರದಿಂದ ಹಾಸಿಗೆಯನ್ನು ಹಿಡಿಯುತ್ತಾರೆ. ನಾಗವೇಣಿಯು ಲಚ್ಚನನ್ನು ಕೊನೆಯ ಕ್ಷಣದಲ್ಲಾದರು ಬಂದು ನೋಡಬಾರದೆ ಎಂದು ಬೇಡಿಕೊಳ್ಳುತ್ತಾಳೆ. ಲಚ್ಚ ಆಕೆಯ ಜೊತೆಯಲ್ಲಿ ಬರುತ್ತಾನೆ.

ಶೀನಮಯ್ಯನಿಗೆ ಇಷ್ಟುದಿನ ತಾನು ಮಾಡಿದ್ದು ತಪ್ಪೆನಿಸಿ ಲಚ್ಚನನ್ನು ತನ್ನ ತಂದೆಯ ಕಾಲಿಗೆ ಬೀಳುವ ಹಾಗೆ ಹೇಳುತ್ತಾನೆ. ಐತಾಳರು ಅಮವಾಸ್ಯೆಯ ತಿಥಿ ಪೂರ್ತಿಯಾಗುವುದರೊಳಗೆ ಮರಣ ಹೊಂದುತ್ತಾರೆ.

ರಾಮ ಐತಾಳರು ತೀರಿಕೊಂಡ ಬಳಿಕ ಮನೆಯಲ್ಲಿ ಆರ್ಥಿಕವಾಗಿ ಕಷ್ಟಗಳು ಪ್ರಾರಂಭಿಸಿದವು. ಲಚ್ಚನು ಬಿ.ಎ. ಓದಲು ಹೊರಟು ಹೋದನು, ನಂತರ ರಜೆಯಲ್ಲಿ ಊರಿಗೆ ಬಂದನು. ಬಿ.ಎ. ಪಾಸಾದ ಬಗ್ಗೆ ಹಿಗ್ಗಿದನು ಕೆಲಸ ಸಿಕ್ಕ ಮೇಲೆ ಎಲ್ಲರನ್ನು ಕರೆಸಿಕೊಳ್ಳುತ್ತೇನೆ ಎಂದು ಮನೆಯಿಂದ ಹೊರಟು ಹೋದನು ಕೆಲವು ವರ್ಷಗಳ ನಂತರ ಮರಳಿ ಮನೆಗೆ ಬರುತ್ತಾನೆ. ಸಿಕ್ಕ ನೌಕರಿಯನ್ನು ಕಳೆದುಕೊಂಡು ಮನೆಯ ಬಾಗಿಲಲ್ಲಿ ನಿಂತಿದ್ದಾನೆ. ನಂತರ ಊರಿನಲ್ಲಿಯೆ ಉಳಿದು ಎಲ್ಲರ ಪ್ರೀತಿಯನ್ನು ಗಳಿಸುತ್ತಾನೆ. ನಂತರ ನಾಗವೇಣಿಯ ಹೆಸರಿನಲ್ಲಿರುವ ಆಸ್ತಿಯನ್ನು ಯಾರಿಗೂ ತಿಳಿಯದಂತೆ ಗುಟ್ಟಾಗಿ ವರ್ಗಾಯಿಸಿಕೊಳ್ಳುತ್ತಾನೆ. ಆಸ್ತಿಯು ಕೈಸೇರಿದ ನಂತರ ಮನೆಯಿಂದ ಹೊರಗೆ ಹೋಗುತ್ತಾನೆ. ಹೋಗುವಾಗ ಆಸ್ತಿ ಎಲ್ಲವನ್ನು ಬೇರೆಯವರಿಗೆ ಮಾರಿ ಹಣವನ್ನು ಪಡೆದುಕೊಂಡು ಹೋಗಿರುತ್ತಾನೆ.

ವಿಷಯ ತಿಳಿದ ಸರೋಸತಿ, ಸತ್ಯಭಾಮೆ ನಾಗವೇಣಿಯರು ಕಂಗಾಲಾಗುತ್ತಾರೆ. ಮನೆಯಲ್ಲಿ ಹೇಳತೀರದ ಕಷ್ಟ. ಇದರ ನಡುವೆ ನಾಗವೇಣಿಗೆ ಗಂಡುಮಗುವಾಗುತ್ತದೆ. ಬಹಳ ಕಷ್ಟದಿಂದ ಮೂವರು ಹೆಂಗಸರು ಜೀವನವನ್ನು ನಡೆಸುತ್ತಿರುತ್ತಾರೆ. ನಾಗವೇಣಿಯ ಚಿಕ್ಕಪ್ಪ ಸಹಾಯವನ್ನು ಮಾಡುತ್ತಿರುತ್ತಾರೆ. ಸತ್ಯಭಾಮೆ ಮಗಳ ಮನೆಯಿಂದ ಹಾಗಾಗ ಮನೆಗೆ ಬೇಕಾದ ವಸ್ತುಗಳನ್ನು ತರುತ್ತಿರುತ್ತಾರೆ. ಹೀಗೆ ಈ ಮೂವರು ಹೆಂಗಸರು ಗಂಡೆ ಇಲ್ಲದ ಸಂಸಾರವನ್ನು ತೂಗಿಸಿಕೊಂಡು ಉಳಿದ ಸ್ವಲ್ಪ ಗದ್ದೆಯಲ್ಲಿ ಸಾಧ್ಯವಾದಷ್ಟು ಬೆಳೆಯುತ್ತಾ ಜೀವನವನ್ನು ನಡೆಸುತ್ತಿರುತ್ತಾರೆ. ಈ ಮನೆಯ ಗಂಡುಮಗನಾದ ಲಚ್ಚನಿಗೆ ಇವರ ಬಗ್ಗೆ ಯಾವ ಚಿಂತೆಯು ಇರುವುದಿಲ್ಲ.

ಕಾಲ ಕಳೆದಂತೆ ಸರಸೋತಿ, ಸತ್ಯಭಾಮೆಯರು ತೀರಿಕೊಳ್ಳುತ್ತಾರೆ. ನಾಗವೇಣಿಯು ತಂದೆಯ ಜೊತೆಯಲ್ಲಿ ತಂದೆಯ ಮನೆಗೆ ಹೋಗುತ್ತಾಳೆ. ಮಗನಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುವ ಸಲುವಾಗಿ ತಂದೆಯ ಜೊತೆ ಹೋಗುತ್ತಾಳೆ. ತಂದೆ ಬದುಕಿರುವವರೆಗೂ ಎಲ್ಲವು ಚೆನ್ನಾಗಿತ್ತು. ತಂದೆಯು ತೀರಿಹೋದ ನಂತರ ಮನೆಯ ವಾತಾವರಣವೆ ಬದಲಾಯಿತು. ಅತ್ತಿಗೆಯ ಚುಚ್ಚು ಮಾತುಗಳನ್ನು ಕೇಳಲಾರದೆ ನಾಗವೇಣಿಯು ನನ್ನ ತಾಯಿಯನ್ನು ಕರೆದುಕೊಂಡು ಮಗನ ಜೊತೆಯಲ್ಲಿ ಕೋಡಿಗೆ ಬರುತ್ತಾಳೆ.ಮುಂದೆ ಅಲ್ಲೆ ಉಳಿಯುವ ಆಲೋಚನೆ ಮಾಡುತ್ತಾಳೆ.

ರಾಮನಿಗೆ ಕೋಡಿಯ ಸಮುದ್ರದ ಜೊತೆಯಲ್ಲಿ ಬಹಳ ನಂಟು. ಆತನಿಗೆ ಬೇಸರವಾದಾಗ ಸಂತೋಷವಾದಾಗ ಆ ಕ್ಷಣಗಳನ್ನು ಸಮುದ್ರದ ಜೊತೆಗೆ ತಾಯಿಯೊಟ್ಟಿಗೆ ಸೇರಿ ಕಳೆಯುತ್ತಿದ್ದನು.

ಮರಳಿ ಊರಿಗೆ ಬಂದಿದ್ದು ರಾಮನಿಗೆ ಬಹಳ ಸಂತೋಷವಾಯಿತು. ರಾಮನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮದರಾಸಿಗೆ ಹೋದನು. ಅಲ್ಲಿ ತನ್ನ ಚಿಕ್ಕಮ್ಮನ ಮನೆಯಲ್ಲಿಯೆ ಉಳಿಯಬೇಕಾದ ಪ್ರಸಂಗ ಬಂದಿತ್ತು. ಆತನು ತನ್ನ ಊಟದ ಖರ್ಚನ್ನು ಕೊಟ್ಟು ಅಲ್ಲಿಯೇ ಉಳಿದ ರಾಮನು ವಿದ್ಯಾಭ್ಯಾಸದ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ. ಇದರ ಪರಿಣಾಮವಾಗಿ ಆತನು ಜೈಲು ಸೇರಿ ಬಿಡುಗಡೆಯಾದ ನಂತರ ಕೆಲವು ತಿಂಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಕೈಬಿಟ್ಟು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ತನ್ನ ಊರಿಗೆ ಮರಳಿದ. ತನ್ನ ತಾಯಿಯ ಕಷ್ಟವನ್ನು ನೋಡಿ ತಾನೊಂದು ಕೆಲಸಕ್ಕೆ ಸೇರುವುದಾಗಿ ಕೆಲಸವನ್ನು ಹುಡುಕಿಕೊಂಡು ಮುಂಬಯಿಗೆ ಬಂದ ಇಲ್ಲಿ ಕೆಲಸವನ್ನು ಹುಡುಕಿ ಹುಡುಕಿ ಸಾಕಾದ ತನಗೆ ಗೊತ್ತಿದ್ದ ಸಂಗೀತ ವಿದ್ಯೆಯನ್ನು ಹೇಳಿಕೊಡಲು ಕೆಲವು ಮನೆಗಳನ್ನು ಸಂಗೀತದ ಪಾಠಕ್ಕೆ ಆಯ್ಕೆ ಮಾಡಿಕೊಂಡ. ಅವು ಹೆಚ್ಚುಕಾಲ ಉಳಿಯಲಿಲ್ಲ. ರಾಮನು ಮುಂಬಯಿಯಂತ ದೊಡ್ಡ ಊರಲ್ಲಿ ಬಹಳ ಕಷ್ಟದಿಂದ ಜೀವನ ನಡೆಸುತ್ತಿದ್ದನು. ಇಷ್ಟುದಿನ ಕಷ್ಟದಲ್ಲಿ ನೊಂದಿರುವ ತಾಯಿಯನ್ನು ಹೇಗಾದರೂ ಸುಖವಾಗಿ ಇಡಬೇಕೆಂದು ಕನಸನ್ನು ಕಾಣುತ್ತಿದ್ದನು. ಕೋಡಿಯಲ್ಲಿ ತಾಯಿ ತನ್ನ ಮಗನ ಬರುವಿಗಾಗಿ ಕಾದಿದ್ದಳು. ನಾಗವೇಣಿಯು ಮಗನಿಗೆ ಕಾಗದವನ್ನು ಬರೆಯುವಾಗ ದೂರದ ಊರಿನಲ್ಲಿ ಏಕೆ ಕಷ್ಟ ಪಡುತ್ತೀಯೇ ಊರಿಗೆ ಬಂದುಬಿಡು ಇರುವಷ್ಟು ಜಾಗದಲ್ಲಿ ವ್ಯವಸಾಯ ಮಾಡಿ ಜೊತೆಯಲ್ಲಿ ಸುಖವಾಗಿರುವ ಎಂದು ಹೇಳಿ ಕಾಗದ ಬರೆಯುತ್ತಿದ್ದಳು. ನಾಗವೇಣಿಗೆ ಇತ್ತ ಗಂಡನು ಇಲ್ಲ ಇತ್ತ ಮಗನು ಕೆಲಸ ಹುಡುಕಿ ದೂರದ ಊರಿಗೆ ಹೋಗಿದ್ದಾನೆ. ಹೀಗೆ ಬಡತನದ ಹೋರಾಟದ ಬಾಳ್ವೆಯನ್ನು ನಡೆಸುತ್ತಾರೆ.

ಹೀಗೆ ಸಂಸಾರದ ಬಿರುಕಿನಿಂದ ಗಂಡು ಪಲಾಯನ ಮಾಡುತ್ತಾನೆ. ಸ್ತ್ರೀಯು ಹೇಗೆ ಕುಟುಂಬವನ್ನು ಮುನ್ನಡೆಸುತ್ತಾಳೆ, ಕಷ್ಟಗಳನ್ನು ಅನುಭವಿಸಿ ತನ್ನ ಕುಟುಂಬವನ್ನು ಯಥಾಸ್ಥಿತಿಗೆ ತರಲು ಹೇಗೆ ಪ್ರಯತ್ನಿಸುತ್ತಾಳೆ ಎಂಬುದು ಈ ಕಾದಂಬರಿಯ ವಸ್ತು ವಿನ್ಯಾಸವಾಗಿದೆ.

ನೆಲ ಮತ್ತು ಮನುಷ್ಯನ ಸಂಬಂಧವು ಕಾಲ ಬದಲಾದಂತೆ ಹೇಗೆ ಬದಲಾಗುತ್ತದೆ ಎಂಬುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಇದೊಂದು 'ಪ್ರಾದೇಶಿಕ ಕಾದಂಬರಿ' ಪಡು ಕರಾವಳಿಯ ಜನ ಜೀವನದ ಹೋರಾಟವನ್ನು ಪ್ರತಿನಿಧಿಸುತ್ತದೆ. ಆ ಜನರಿಗೆ ಪ್ರಾಕೃತಿಕ, ಸಾಮಾಜಿಕ, ಧಾರ್ಮಿಕ ಜೀವನದ ವಿವರಗಳನ್ನು ಒದಗಿದುತ್ತದೆ. ಆದರಿಂದ ಈ ಕಾದಂಬರಿಯು 'ಪ್ರಾದೇಶಿಕ ಕಾದಂಬರಿ'ಯಾಗಿದೆ.

ಅಧ್ಯಾಯ–3

ಪ್ರಮುಖ ಸನ್ನಿವೇಶಗಳು

ಯಾವುದೇ ಒಂದು ಸಾಹಿತ್ಯ ಕೃತಿಯ ಬೆಳವಣಿಗೆಗೆ ಸನ್ನಿವೇಶಗಳು ಕಾರಣವಾಗುತ್ತವೆ. ಒಂದು ಕೃತಿಯಲ್ಲಿ ಹತ್ತಾರು ಸನ್ನಿವೇಶಗಳು ಬರುತ್ತವೆ ಹಾಗೆಯೇ ಆಕಸ್ಮಿಕ ಘಟನೆಗಳು ಕೃತಿಯ ಬೆಳವಣಿಗೆಗೆ ಕಾರಣವಾಗುತ್ತದೆ. ಮರಳಿ ಮಣ್ಣಿಗೆಯ ಕಾದಂಬರಿಯಲ್ಲಿ ಹಲವಾರು ಘಟನೆಗಳು ಕಾದಂಬರಿಯ ಬೆಳವಣಿಗೆಗೆ ಕಾರಣವಾಗಿದೆ.ಕಾದಂಬರಿಕಾರರು ಇಂತಹ ಘಟನೆಗಳ ಮೂಲಕ ತಮ್ಮ ಕಾದಂಬರಿಯಲ್ಲಿ ಕೆಲವು ಘಟನೆಗಳು ಮುಖ್ಯವಾಗಿ ಕೃತಿಯ ಬೆಳವಣಿಗೆಯನ್ನು ಮುಂದುವರೆಸಿವೆ.

ಮೊದಲನೆ ತಲೆಮಾರಿನಲ್ಲಿ ಕಂಡು ಬರುವ ಪ್ರಮುಖ ಸನ್ನಿವೇಶಗಳು

ಐತಾಳರ ಮನೆಯ ಮುಂದಲಿನ ಅಂಗಳದಲ್ಲಿ ಚಪ್ಪರ ನಿರ್ಮಾಣ

ಚೈತ್ರ ಮಾಸ ಮುಗಿದು ವೈಶಾಖ ಬಂದ ಬಳಿಕ ಬಿಸಿಲಿನ ಜಳ ಜಾಸ್ತಿಯಾಗಿರುತ್ತದೆ. ಐತಾಳರು ಭತ್ತದ ಸಸಿಗಳನ್ನು ನೆಟೆ ಮಳೆಗಾಗಿ ಕಾಯುತ್ತಿದ್ದರು. ಮಳೆಯು ಸರಿಯಾಗಿ ಆಗದೆ ಸಸಿಗಳು ಹಸಿರು ಬಣ್ಣವನ್ನು ಕಳೆದುಕೊಂಡು ಕಂದು ಬಣ್ಣಕ್ಕೆ ತಿರುಗಿದ್ದವು. ಇಂಥ ಕಠಿಣ ದಿನಗಳಲ್ಲಿ ಒಮ್ಮಿಂದೊಂಮ್ಮೆಗೆ ರಾಮ ಐತಾಳರಿಗೆ ಮನೆಯ ಸುಧಾರಣೆಯ ಯೋಚನೆ ಹೊಳೆಯಿತು. ಆ ದಿನ ಎಲ್ಲೂ ಸಮಾರಾಧನೆ, ಶಾಂತಿ, ಊಟಗಳು ಇಲ್ಲದುದರಿಂದ ಮನೆಯ ಚಾವಡಿಯಲ್ಲಿ ಕುಳಿತು ಈ ದರಿದ್ರ ಸೆಕೆ ಸರಸೋತಿಗೆ ಈ ಗೇಣುದ್ದದ ಚಪ್ಪರ ಇದ್ದರೂ ಒಂದೆ ಇಲ್ಲದಿದ್ದರೂ ಒಂದೇ. ಅಂಗಳದ ತುಂಬ ಚಪ್ಪರವನ್ನು ಹಾಕಿ ಅಂಗಳದ ನೆಲವನ್ನು ಥಳಥಳ ಒರೆದು ಪಸಂದ ಮಾಡಬೇಕು ನೋಡು ಎಂದರು. ಸೆಕೆಗೆ ಅಂಗಳದಲ್ಲಿ ತೂಕಡಿಸುತ್ತಿದ್ದ ಸರಸೋತಿ ಅಣ್ಣ ನಿನಗೆ ಬೇರೆ ಕೆಲಸವಿಲ್ಲವೆ, ಮನೆಯಲ್ಲೇನು ಮುಂಜಿಯೋ, ಮದುವೆಯೋ ಕಳ ತುಂಬ ಚಪ್ಪರ ಹಾಕಲಿಕ್ಕೆ ಅಣ್ಣನಿಗೆ ಒಂದೊಂದೆ ಯೋಚನೆ ಹೊರಡುತ್ತವೆ ಎಂದಳು. ಸರಸೋತಿಯ ಮಾತು ಮುಗಿಯುವುದರೊಳಗೆ ಸೊಂಟಕ್ಕೆ ಪಂಚೆಯನ್ನು ಬಿಗಿದು, ತಲೆಗೆ ಒಂದು ಪಾಣಿ ಪಂಚೆಯ ಮುಂಡಾಸವನ್ನು ಸುತ್ತಿ ಮನೆಯ ಸುತ್ತಾಮುತ್ತಾ ಅಲೆದಾಡಿ, ಸಂದುಗೊಂದುಗಳನ್ನು ಅರಸಿ ಕಂಬ, ಎಲೆ ಬಿದಿರುಗಳನ್ನು ತಂದು ರಾಶಿ ಮಾಡಿದರು.

ಅಣ್ಣನ ದರ್ಬಾರು ಬಾಯಿಂದ ಕೈಯ್ಯಿಗೆ ಬಂದಿತೆಂದು ಆಗ ಸರಸೋತಿಗೆ ಅನಿಸಿತು. ಸರಸೋತಿಯು ಏನು? ಯಾಕೆ? ಎಂದು ಕೇಳುವುದರೊಳಗೆ ಸುಮ್ಮನೆ ಹೇಳಿದಕ್ಕೆ ಎದುರು ಮಾತನಾಡಬೇಡ ನಾಲ್ಕು ಭೂತ ಪರಂಗಿ ಹೆಡೆಯನ್ನು ಕಡಿದು ತಾ ನೋಡುವ ಎಂದರು ಅತ್ತಿಗೆ ನಾದಿನಿಯರಿಬ್ಬರು ಸಂಜೆಯ ವೇಳೆಗೆ ಪರಂಗಿ ಹೆಡೆಯನ್ನು ಕಡಿದು ತಂದರು. ಭತ್ತದ ಸಸಿಗಳಿಗೆ ನೀರನ್ನು ಮೊಗೆದು ಹಾಕಲು ಅತ್ತಿಗೆ ನಾದಿನಿಯರು ಹೊರಟು ಹೋದರು. ಅಂಗಳದಲ್ಲಿ ಚಪ್ಪರದ ನಿರ್ಮಾಣ ಕಾರ್ಯ ಸಾಂಗವಾಗಿ ನಡೆಯುತ್ತಿತ್ತು. ಚಪ್ಪರದ ಕಂಬಗಳನ್ನು ನಡುವ, ಅಡ್ಡ ಎಳಗಳನ್ನು ಹಾಕುವ, ಬಿದಿರ ಸಲಿಕೆಗಳನ್ನು ಪರಂಗಿ ನಾರಿನಿಂದ ಚಪ್ಪರದ ಅಡ್ಡಗಳಿಗೆ ಬಿಗಿಯುವ ಕೆಲಸ ಕ್ರಮವಾಗಿ ಸಾಗಿತ್ತು. ಸರಸೋತಿಯು ಮನೆಯಿಂದ ಹೊರಡುವಾಗ ಅನ್ನವನ್ನು ಬೇಯಿಸುವಂತೆ ಹೇಳಿ ಹೋಗಿದ್ದಳು. ಅತ್ತಿಗೆ ನಾದಿನಿಯರು ಇಬ್ಬರು ಮನೆಗೆ ಬರುವಷ್ಟರಲ್ಲಿ ಅನ್ನವು ಸುಟ್ಟು ಕರಕಲಾಗಿತ್ತು. ಐತಾಳರು ಚಪ್ಪರ ನಿರ್ಮಾಣ ಕಾಯಕದಲ್ಲಿ ತೊಡಗಿದ್ದರಿಂದ ಅಡುಗೆ ಮನೆಯ ಕಡೆ ಹೆಚ್ಚು ಗಮನವನ್ನು ಅರಿಸಲು ಸಾದ್ಯವಾಗಲಿಲ್ಲ. ಇದರಿಂದ ಸರಸೋತಿಗೆ ತುಂಬ ಕೋಪ ಬಂತು. ಕತ್ತಲಾದ್ದರಿಂದ ಐತಾಳರು ಚಪ್ಪರದ ಕೆಲಸವನ್ನು ಅಲ್ಲಿಗೆ ನಿಲ್ಲಿಸಿ ಆಯಾಸವನ್ನು ಕಳೆಯಲು ನದಿಗೆ ಹೋದಾಗ ಅಲ್ಲಗೆನೆ ಅನ್ನದ ಸುಟ್ಟ ವಾಸನೆಯು ಬರುತ್ತಿತ್ತು.ಮನೆಗೆ ಬಂದು ಹೆಂಗಸರ ಮೇಲೆ ಜೋರು ಮಾಡುತ್ತಿದ್ದರು. ಇದನ್ನು ಕೇಳಿಸಿಕೊಂಡ ಸರಸೋತಿಯು ನಾವು ಹೋಗುವಾಗ ನಿನಗೆ ಹೇಳಿ ಹೋಗಲ್ಲಿಲ್ಲವೆ ಓಲೆಯ ಮೇಲೆ ಅನ್ನ ಮಾಡಲು ಇಡಲಾಗಿದೆ ಗಮನವಿರಲಿ ಎಂದು ಚಪ್ಪರದ ಅಂಕರಿನಲ್ಲಿ ನಮ್ಮ ಮಾತು ಕೇಳಿಸಿಬೇಕೆ, ನಿನ್ನಗೆ ಚಪ್ಪರದ ಸಿರಿಯೇ ಹೆಚ್ಚಾಗಿದೆ ಎಂದು ಅಣ್ಣನಿಗೆ ಬೈದಳು.

ಅಣ್ಣನು ಮಗುವನ್ನು ದತ್ತು ತೆಗೆದುಕೊಳ್ಳುತ್ತಿರಬೇಕು ಅದಕ್ಕೇನೆ ಚಪ್ಪರದ ನಿರ್ಮಾಣವನ್ನು ಮಾಡುತ್ತಿದ್ದಾನೆ. ಮತ್ತೇನೂ ಶುಭ ಕಾರ್ಯಗಳು ಇಲ್ಲ ಎಂದು ರಾತ್ರಿಯಲ್ಲ ಯೋಚನೆ ಮಡುತ್ತಾ ಗರಿಗಳನ್ನು ಎಣೆದು ಮುಗಿಸಿದ್ದಳು. ಐತಾಳರು ಬೆಳಗಿನ ಜಾವ ಎದ್ದು ಎಣೆದ ಗರಿಗಳನ್ನು ನೋಡಿ ಈ ಗರಿಗಳು ಸಾಲವು ಎಂದು ತಿರ್ಮಾನಿಸಿ, ಅವರು ತಮ್ಮ ಒಕ್ಕಲು ಮನೆಗಳ ಮುಂದೆ ಹೋಗಿ ಸೂರ, ಬೆಳ, ತಾಳ, ಇವರುಗಳನ್ನು ಕರೆದು ಗರಿಯನ್ನು ತಂದುಕೊಟ್ಟರೆ ಕೊಚ್ಚು ಕೊಡುವುದಾಗಿ ಹೇಳಿದರು. ಶೂದ್ರರಿಗೆ ಬ್ರಾಹ್ಮಣರ ಸಮಾರಂಭಗಳೆಂದರೆ ಹೆಚ್ಚು ಸಂತಸ, ಬ್ರಾಹ್ಮಣರ ಮನೆಯ ಪಾಯಸ ಸಿಗುತ್ತದೆ ಎಂದು ಖುಷಿ. ಕಾಳ ಐತಾಳರಿಗೆ ಅಚ್ಚು ಗಿಚ್ಚು ಬೇಡ ಗಡದ್ದಾಗಿ ಪಾಯಸದ ಊಟ ಮಾಡಿಸಿ ಬಿಡಿ ಸಾಕು ಎಂದ. ಐತಾಳರು ಶೂದ್ರ ಮಕ್ಕಳ ಅಣೆಬರಹವೆ ಹಾಗೆ ಎಂದು ಹೇಳಿ ಅಲ್ಲಿಂದ ಹೊರಟರು. ಎಲ್ಲರೂ ಗರಿಗಳನ್ನು ತಂದರು ಚಪ್ಪರದ ಕಾರ್ಯ ಮುಗಿಯಿತು.

ಐತಾಳರು ಸರಸೋತಿಗೆ ಇನ್ನು ಮೂರು ದಿವಸ ನಾನು ಮನೆಯಲಿಲ್ಲ ಮನೆಯನ್ನು ನೋಡಿಕೊಂಡು ಬಿಡಿ. ಐತಾಳರು ಸರಸೋತಿಗೆ, ಪಾರೋತಿಗೆ, ಕಾಲು ಜಗಿತ ಎಂದೆಯ ಅವಳು ಮನೆಯಲ್ಲಿ ಒಂದು ಕಡೆ ಬಿದ್ದಿರಲಿ ನೀನು ಸೂರನ ಹೆಂಡತಿಯನ್ನೋ, ಕಾಳನ ಹೆಂಡತಿಯನ್ನೋ ಬರಲಿಕ್ಕೆ ಹೇಳು, ಸೊಪ್ಪನ್ನು ಹಾಕಿ ತಿಕ್ಕಿ ಅಂಗಳವನ್ನು ಪಸಂದು ಮಾಡುಬಿಡು ಎಂದು ಹೇಳಿ ಹೊರಟರು.

ಸರಸೋತಿಯು ನಮ್ಮ ಅಣ್ಣ ದತ್ತು ತೆಗೆದು ಕೊಳ್ಳುವುದಕ್ಕೆ ಚಪ್ಪರ ಹಾಕಿರುವುದು. ನಮ್ಮ ಮುಂದೆ ಹೇಳಲು ದಾಕ್ಷಿಣ್ಯ ಆಗುತ್ತಿರಬೇಕು. ಈ ಅಣ್ಣನಿಗೆ ಮನೆಯ ಹೆಂಗಸರೆಂದರೆ ಕಸಕ್ಕೆ ಸಮ.ಮನೆಯಲ್ಲಿ ನಡೆಯುವ ವಿಷಯವನ್ನು ಬೇರೆಯವರಿಂದ ತಿಳಿಯಬೇಕು ಎಂದು ಬೇಸರಗೊಂಡಳು. ಅಂಗಳದ ಕಾರ್ಯವನ್ನು ಪ್ರಾರಂಬಿಸಿದಳು. ಅಂಗಳ ನಿರ್ಮಾಣದಿಂದ ಮನೆಯಲ್ಲಿ ಶುಭಕಾರ್ಯ ನಡೆಯುತ್ತಿದೆ, ಜೊತೆಗೆ ಮನಸುಗಳ ನಡುವೆ ಬಿರುಕನ್ನು ಉಂಟುಮಾಡುತ್ತದೆ. ಈ ಸನ್ನಿವೇಶ ಕಾದಂಬರಿಯ ದಿಕ್ಕನೆ ಬದಲಿಸುತ್ತ ಕಾದಂಬರಿಗೆ ಹೊಸ ಆಯಾಮವನ್ನು ಕೊಡುತ್ತಾ ಹೋಗುತ್ತದೆ.

ಐತಾಳರ ಎರಡನೆಯ ಮದುವೆ

ಐತಾಳರು ಕೋಡಿಯ ವೈದಿಕ ಬ್ರಾಹ್ಮಣರು. ಪೌರೋಹಿತಿಕೆಯನ್ನು ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದರು. ಇವರ ಜಾತಕ ಫಲದ ಪ್ರಕಾರ ಇವರಿಗೆ ಮೂರು ಗಂಡು ಮಕ್ಕಳು ಆಗುತ್ತವೆ ಎಂದು ತಿಳಿದಿದ್ದರು.ಮದುವೆಯಾಗಿ ಹತ್ತು ವರ್ಷವಾದರು ಮಕ್ಕಳಾಗಲಿಲ್ಲ. ಪಾರೋತಿಯು ತನ್ನಲ್ಲಿರುವ ಪ್ರೀತಿ ಮಮತೆಯನ್ನು ತನ್ನ ನಾದಿನಿಯಾದ ಸರಸೋತಿಯ ಮೇಲೆ ತೋರಿಸುವಳು. ಜೊತೆಗೆ ಗೌಳಿ ಬಣ್ಣದ ಗೋಪಿ ಎಂಬ ಹಸುವಿನ ಮೇಲೆ ಪ್ರೀತಿ ತೋರಿಸುವಳು ಪಾರೋತಿಯ ದುಃಖವನ್ನು ನೋಡಲಾರದೆ ಸರಸೋತಿಯು ಮಕ್ಕಳಾಗದಿದ್ದರೇನು ದತ್ತು ಮಗುವನ್ನು ತೆಗೆದುಕೊಂಡರಾಯಿತು ಎಂದು ತನ್ನ ಅಣ್ಣನ ಬಳಿಯಲ್ಲಿ ಈ ವಿಚಾರವನ್ನು ತಿಳಿಸುತ್ತಾಳೆ. ಯಾರ-ಯಾರ ಮನೆಯ ಮಕ್ಕಳನ್ನು ತಮ್ಮ ಮನೆಯ ಮಗು ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಮನೆಯ ಮುಂದಿನ ಅಂಗಳವನ್ನು ಅಸಮಾಡಿ ಚಪ್ಪರ ಹಾಕಿಸುವಂತೆ ಸರೋಸತಿಗೆ ಹೇಳುತ್ತಾನೆ. ಯಾಕೆ? ಏನು? ಎಂದು ಕೇಳಿದರೆ ಐತಾಳರು ಹೇಳುವುದಿಲ್ಲ ಆದ್ದರಿಂದ ಸರಸೋತಿಗೆ ಬೇಜಾರು ಯಾವ ವಿಷಯವನ್ನು ಕೇಳಲು ಹೋಗುವುದಿಲ್ಲ. ನಮ್ಮ ಮನೆಯಲ್ಲಿ ಆಗುವ ಶುಭ ಸಮಾರಂಭಗಳು ನಮಗೆ ತಿಳಿಯುವುದಿಲ್ಲ.

ಬೇರೆಯವರಿಂದ ತಿಳಿದುಕೊಳ್ಳಬೇಕು ಈ ಅಣ್ಣನಿಗೆ ಕೆಲಸ ಮಾಡಲು ಮಾತ್ರ ಈ ಮನೆಯ ಹೆಂಗಸರು ಬೇಕು.ಆದರೆ ನಮ್ಮನ್ನು ಇಷ್ಟು ಕಡೆಗಾಣಿಸುವುದು ಸರಿಯಲ್ಲ ಎಂದು ಕೋಪದಲ್ಲಿ ಅಂಗಳ ಅಸಮಾಡಿಸಿ ಚಪ್ಪರ ಹಾಕಿಸಿ ತನ್ನ ಗಂಡನ ಮನೆಗೆ ಕೋಪ ಮಾಡಿಕೊಂಡು ಹೊರಟುಹೋಗುತ್ತಾಳೆ.

ಕೆಲಸದ ಮೇಲೆ ಮೂರು ದಿನದ ಮಟ್ಟಿಗೆ ಬೇರೆ ಊರಿಗೆ ಹೋಗಿದ ಐತಾಳರು ಮನೆಗೆ ಹಿಂದಿರುಗುತ್ತಾರೆ. ಮನೆಯ ಅಂಗಳದಲ್ಲಿ ಕಾಲನ್ನು ತೊಳೆಯುವಾಗ ಶೀನಮಯ್ಯನಿಗೆ ಶೀನ ನಮ್ಮ ಮನೆಯ ಪಂಚಾಯಿತಿಕೆ ನಿನಗೆ ತಿಳಿಯದು ಇಲ್ಲಿ ಒಬ್ಬನೆ ಯಜಮಾನ ಅವನ ಮಾತೆ ಅಂತಿಮ ಎಂದು ಮನೆಯಲ್ಲಿನ ತನ್ನ ಯಜಮಾನಿಕೆಯನ್ನು ಹೇಳುತ್ತಾನೆ. ಇದೆ ಹೊತ್ತಿಗೆ ಸರಿಯಾಗಿ ಐತಾಳರ ಧ್ವನಿಯನ್ನು ಕೇಳಿ ಪಾರೋತಿಯು ಬಾಗಿಲ ಬಳಿ ಬಂದು ನಿಲ್ಲುತ್ತಾಳೆ.

ಐತಾಳರ ಎರಡನೆ ಮದುವೆಗೆ ಹೆಣ್ಣನ್ನು ನೋಡಲು ಹೋಗಿದ್ದ ವಿಷಯದ ಬಗ್ಗೆ ಚರ್ಚೆ ನಡೆಸುತ್ತಿರುತ್ತಾರೆ. ಇದನ್ನು ಕೇಳಿದ ಪಾರೋತಿಗೆ ಸಂಕಟವಾಗುತ್ತದೆ. ಮನೆಯ ಮುಂದಿನ ಅಂಗಳದಲ್ಲಿ ಚಪ್ಪರವನ್ನು ಹಾಕಲು ಹೇಳಿದ್ದು ಮದುವೆಗೆ, ದತ್ತು ಮಗುವನ್ನು ಕೊಳ್ಳುವುದಕ್ಕಲ್ಲ ಎಂದು ತಿಳಿದು ಮರುಕ ಪಡುತ್ತಾಳೆ. ಈ ಕಾದಂಬರಿಯಲ್ಲಿ ಐತಾಳರ ಎರಡನೆಯ ಮದುವೆಯ ಪ್ರಮುಖವಾದ ಸಂದರ್ಭ. ಇದರಿಂದ ಕಾದಂಬರಿಯು ತಿರುವನ್ನು ಪಡೆಯುತ್ತಾ ಹೋಗುತ್ತದೆ.

ಪಾರೋತಿಯು ಯಾರಿಗು ಎದುರು ಉತ್ತರ ಕೊಡದ ಜೀವ. ಐತಾಳರು ಪಾರೋತಿಯ ವಿಷಯವನ್ನು ಕೇಳಿಸಿಕೊಂಡಳು ಎಂದು ಹೆಂಗಸರಿಗೆಲ್ಲ ಇದೊಂದು ಚಾಳಿ ಅಂಟಿಕೊಂಡಿದೆ ಗಂಡಸರು ಮಾತನಾಡುವಾಗ ಕದ್ದು ಕೇಳುವುದು ಎಂದು ಬೈಯುತ್ತ ಒಳಗೆ ಬರುತ್ತಾರೆ. ಸರಸೋತಿಯು ಐತಾಳರ ಮೇಲೆ ಕೋಪ ಮಾಡಿಕೊಂಡು ಆಕೆಯ ಗಂಡನ ಮನೆಗೆ ಹೋಗಿರುವ ವಿಷಯ ತಿಳಿಸುತ್ತಾಳೆ. ಅದೆ ತಕ್ಷಣ ಸರಸೋತಿಯ ಗಂಡನ ಮನೆಗೆ ಹೋಗಿ ಮದುವೆಯ ವಿಷಯ ತಿಳಿಸಿ ಬೆಳಗಾಗುವುದರೊಳಗೆ ಐರೋಡಿಗೆ ಬಂದು ಸೇರುತ್ತಾರೆ. ಮದುವೆಯ ಸಂದರ್ಭದಲ್ಲಿ ಪಾರೋತಿಯು, ಸತ್ಯಭಾಮೆ ತನ್ನ ಸವತಿ ಎಂದು ತಿಳಿದಿದ್ದರು ಆಕೆಯ ಮೇಲೆ ಯಾವ ತರಹದ ಕೋಪವನ್ನು ಮಾಡಿಕೊಳ್ಳದೆ ಮದುವೆಯ ಹೆಣ್ಣಿಗೆ ಗಂಡನ ಮನೆಯ ಒಡವೆಗಳನ್ನು ತೆಗೆದುಕೊಂಡು ಹೋಗಿಕೊಡುತ್ತಾಳೆ.

ಸ್ವಂತ ತಂಗಿಯ ಹಾಗೆ ನೋಡಿಕೊಳ್ಳುತ್ತಾಳೆ. ಈ ಕಾದಂಬರಿಯಲ್ಲಿ ಐತಾಳರ ಎರಡನೆಯ ಮದುವೆಯೆ ಒಂದು ಮಹತ್ವದ ತಿರುವು ಐತಾಳರ ಮದುವೆಯ ಸನ್ನಿವೇಶದಿಂದ ಕಾದಂಬರಿಯು ಮಹತ್ವದ ತಿರುವನ್ನು ಕೊಡುತ್ತದೆ. ಕಾದಂಬರಿಯ ಮುಂದಿನ ಕಥೆಯ ಬೆಳವಣಿಗೆಗೆ ಈ ಸನ್ನಿವೇಶವೆ ಪ್ರಮುಖ ಕಾರಣ. ಐತಾಳರ ಮನೆಗೆ ಹೊಸ ಸದಸ್ಯೆಯು ಸೇರಿದಂತಾಯಿತು.

ಐತಾಳರ ಮನೆಯಲ್ಲಿ ಮಕ್ಕಳು ಜನಿಸಿದ ಸಂಭ್ರಮ.

ಸುಮಾರು ಹತ್ತು ವರ್ಷವಾದರು ಪಾರೋತಿಗೆ ಮಕ್ಕಳಾಗದಿದ್ದಾಗ ಐತಾಳರು ಮನೆಯವರು ತಿಳಿಸಿದಂತೆ ದತ್ತು ಮಗುವನ್ನು ತೆಗೆದುಕೊಳ್ಳಲು ಒಪ್ಪುವುದಿಲ್ಲ. ಯಾರಿಗೂ ತಿಳಿಯದ ಹಾಗೆ ಎರಡನೆ ಮದುವೆಯನ್ನು ನಿಶ್ಚಯಿಸಿಕೊಂಡು ಬಂದಿರುತ್ತಾರೆ. ನಂತರ ಎಲ್ಲರಿಗೂ ತಿಳಿಯುತ್ತದೆ ಕೆಲವು ತಿಂಗಳ ಬಳಿಕ ಸತ್ಯಭಾಮೆ ಗಂಡು ಮಗುವಿಗೆ ಜನ್ಮವನ್ನು ಕೊಡುತ್ತಾಳೆ. ಈ ವಿಷಯವನ್ನು ಸತ್ಯಭಾಮೆಯ ಅಣ್ಣ ಬಂದು ಹೇಳಿದಾಗ ಐತಾಳರ ಮುಖದಲ್ಲಿ ಸಂತೋಷ, ಸಂಭ್ರಮವೆ ಹೆಚ್ಚಿತ್ತು. ಇಷ್ಟು ವರ್ಷ ಮಕ್ಕಳಿಲ್ಲದ ಮನೆಯಲ್ಲಿ ಸತ್ಯಭಾಮೆಯಿಂದ ಮಗುವಾದದ್ದನ್ನು ಕಂಡು ಐತಾಳರು ಸತ್ಯಭಾಮೆಗೆ ಉನ್ನತವಾದಂತಹ ಸ್ಥಾನವನ್ನು ಮನಸ್ಸಿನಲ್ಲಿ ಕೊಡುತ್ತಾರೆ. ಪಾರೋತಿ ಮತ್ತು ಸರಸೋತಿಯನ್ನು ಕೀಳಾಗಿ ನೋಡುತ್ತಾರೆ. ಐತಾಳರಿಗೆ ಮಗು ಜನಿಸಿದ ಈ ಸಂದರ್ಭ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಐತಾಳರಎರಡನೆಯ ತಲೆಮಾರು ಆ ಮಗು ವಂಶೋದ್ದಾರಕನನ್ನು ಸತ್ಯಭಾಮೆ ಎತ್ತಿಕೊಟ್ಟಳೆಂದು ಆಕೆಯನ್ನು ಕೊಂಡಾಡುತ್ತಾರೆ. ಮನೆಯ ವಾತಾವರಣವೆ ಬದಲಾಗುತ್ತ ಹೋಗುತ್ತದೆ. ಸತ್ಯಭಾಮೆ ಬಂದು ತನ್ನ ಜೀವನವನ್ನು ಬದಲಾಯಿಸಿದಳೆಂಬ ಭಾವನೆ ಐತಾಳರಲ್ಲಿರುತ್ತದೆ. ಜಾತ್ರೆಯ ಸಂದರ್ಭದಲ್ಲಿ ಹೊಸ ಬಟ್ಟೆಗಳನ್ನು ತೊಡುವುದು ಪ್ರತೀತಿ. ಐತಾಳರು ಮನೆಯ ಎಲ್ಲರಿಗು ಹೊಸ ಬಟ್ಟೆಗಳನ್ನು ತಂದಿದ್ದರು ಸತ್ಯಭಾಮೆಗೆ ಅದಕ್ಕಿಂತ ಹೆಚ್ಚಿನ ದುಡ್ಡು ಕೊಟ್ಟು ಸೀರೆಯನ್ನು ತಂದಿದ್ದರು.

ಸರಸೋತಿಯು ಇದನ್ನು ಸಹಿಸದೆ, ಅಣ್ಣ ನೀನು ಒಬ್ಬರನ್ನು ಮೇಲು ಇನ್ನೊಬ್ಬರನ್ನು ಕೀಳು ಮಟ್ಟದಲ್ಲಿ ನೋಡುವುದು ಸರಿಯಲ್ಲ ಎಂದು ಹೇಳುತ್ತಾಳೆ. ಪಾರೋತಿಗು ಅದೆ ತರಹದ ಸೀರೆಯನ್ನು ತರಬೇಕಿತ್ತು. ಇಬ್ಬರಲ್ಲಿ ಭೇದ-ಭಾವ ಮಾಡುವುದು ಸರಿಯಲ್ಲವೆಂದು ಹೇಳುತ್ತಾಳೆ. ಕೆಲವು ತಿಂಗಳುಗಳ ನಂತರ ಸತ್ಯಭಾಮೆಗೆ ಹೆಣ್ಣುಮಗುವು ಜನಿಸುತ್ತದೆ. ಐತಾಳರ ಖುಷಿ ಹೇಳತೀರದು ವಂಶೋದ್ದಾರಕನೆ ಇಲ್ಲವೆಂದು ಕೊರಗುತ್ತಿದ್ದವನಿಗೆ ಎರಡು ಮಕ್ಕಳು ಎಂದು ಸಂಭ್ರಮಿಸುತ್ತಾರೆ. ಮಗನಿಗೆ ಲಚ್ಚ ಎಂದು ನಾಮಕರಣ ಮಾಡುತ್ತಾರೆ ಲಚ್ಚನು ಬೆಳೆಯುತ್ತಾ ದೊಡ್ಡಮ್ಮನ್ನು ಹೆಚ್ಚು ಹಚ್ಚಿಕೊಳ್ಳುತ್ತಾನೆ. ಇದನ್ನು ಸತ್ಯಭಾಮೆಗೆ ಸಹಿಸಲು ಸಾಧ್ಯವಗುವುದಿಲ್ಲ. ಹೆರೋದಕ್ಕೆ ಮಾತ್ರ ನಾನು ಉಳಿದದ್ದಕ್ಕೆ ಅವರೆ ಬೇಕು ಎಂದು ಮನೆಯಲ್ಲಿ ಸಣ್ಣ-ಪುಟ್ಟ ವಿಷಯಗಳಿಗೆ ಜಗಳವನ್ನು ಮಾಡುವುದು. ಐತಾಳರು ಮನೆಗೆ ಬಂದಾಗ ಇವರುಗಳ ಮೇಲೆ

ಚಾಡಿಯನ್ನು ಹೇಳುವುದು. ಐತಾಳರು, ಸತ್ಯಭಾಮೆಯ ಪರವಾಗಿ ಮನೆಯಲ್ಲಿ ಮಾತನಾಡುತ್ತಿದ್ದರು. ಇದರಿಂದ ಎಲ್ಲರ ಮನಸ್ಸಿನಲ್ಲಿ ಮನಸ್ತಾಪಗಳಿದ್ದವು. ಐತಾಳರಿಗೆ ಮಗನಾದ ಸಂದರ್ಭವು ಈ ಕಾದಂಬರಿಗೆ ಬಹಳ ಮುಖ್ಯವಾದುದು. ಕಾದಂಬರಿಯ ಬೆಳವಣಿಗೆ ಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ತನ್ನ ಸ್ವಂತ ಮಗನಿಗಿಂದ ಐತಾಳರು ಬಾಯಿಗೆ ನೀರು ಬಿಡಿಸಿಕೊಂಡು ಸಾಯಬೇಕು ಆವಾಗ ಮೋಕ್ಷ ಸಿಗುತ್ತದೆ ಎಂದು ಹೇಳುತ್ತಿದ್ದರು. ಹಾಗೆಯೆ ಐತಾಳರು ಕೊನೆಯ ಗಳಿಗೆಯಲ್ಲಿ ಮಗನ ಕೈಯಿಂದ ನೀರು ಬಿಡಿಸಿಕೊಂಡು ಸಾಯುತ್ತಾರೆ. ಅವರ ಇಚ್ಚೆಯಂತೆ ಅವರ ಪಿಂಡವನ್ನು ಅವರ ಮಗನೆ ಬಿಡುತ್ತಾನೆ. ಕಾದಂಬರಿಯಬಹಳ ಪ್ರಮುಖವಾದ ಘಟ್ಟ ಇದು.

ಶೀನಮಯ್ಯನ ಮಗನ ಮುಂಜಿ.

ಶೀನಮಯ್ಯ ಐತಾಳರ ಮದುವೆಯ ಕಾರುಬಾರನ್ನು ವಹಿಸಿ ಮದುವೆಯಲ್ಲಿ ಹೆಚ್ಚಿನ ಓಡಾಟ ಮಾಡಿ ಐತಾಳರು ಮತ್ತು ಅವರ ಮನೆಯವರ ಪ್ರೀತಿಯನ್ನು ಸಂಪಾದಿಸಿದ. ಐತಾಳರು ಮದುವೆಯಾದ ನಂತರ ಶೀನಮಯ್ಯ ಹೆಚ್ಚು ಕಡಿಮೆ ಊಟ ಉಪಚಾರವೆಲ್ಲ ಇಲ್ಲಿಯೆ ನಡೆಯುತ್ತಿತ್ತು. ಸಮಯ ನೋಡಿಕೊಂಡು ಶೀನನು ಐತಾಳರ ಬಳಿಯಲ್ಲಿ 200 ರೂ ಸಾಲವನ್ನು ಕೇಳಿದ ಕೆಲವು ದಿನಗಳ ಮಟ್ಟಿಗೆ ಕೊಟ್ಟರೆ ಆಗಿತ್ತು ಬೇಗನೆ ಇಂದಿರುಗಿಸುತ್ತೇನೆ ಎಂದು ಹೇಳಿ ಐತಾಳರ ಬಳಿಯಿಂದ ಸಾಲವನ್ನು ಪಡೆದನು. ಕೋಡಿಯಲ್ಲಿ ಆ ಕಾಲಕ್ಕೆ ಮಾಡಿಗೆ ಓಡ್ಲು ಹಾಕಿದವರು ಯಾರು ಇರಲಿಲ್ಲ. ಶೀನಪ್ಪನಯ್ಯನಿಗೆ ತಾನು ಹೆಂಚಿನ ಮಾಡು ಹಾಕಿ ಮೆರೆಯಬೇಕೆಂಬ ಆಸೆ ಬಲವತ್ತರವಾಯಿತ್ತು. ಮನೆಯ ಮುಂಗಡೆ ಬಡಗು ಮುಖವಾಗಿ ಒಂದು ಹೆಬ್ಬಾಗಿಲು, ಚಾವಡಿ ಕಟ್ಟಿಸಬೇಕು. ಚಾವಡಿಯ ಪಂಚಾಂಗ, ಗೋಡೆಗಳು ಮಣ್ಣಿನವೆ ಆದರೂ ಕಂಬ, ಬಾಗಿಲುಗಳನ್ನು ಹಲಸಿನ ಮರದಿಂದ ಹನುಮಚಾರಿಯ ಕೈಯಿಂದಲೆ ಕೆತ್ತಿಸಿ, ಮೇಲೆ ಓಡ್ಲು ಹೋದೆಯಿಸಬೇಕು ಎಂಬ ಹಂಬಲವಾಯಿತು, ಹಾಗೆಯೇ ಶಿನಮಯ್ಯ ಕೆಲಸವನ್ನು ಮಾಡಿ ಮುಗಿಸಿದನು. ಐತಾಳರಿಗೆ ತಮ್ಮ ಕಡಲು ಕೆರೆಯಲ್ಲಿ ಒಂದು ಹೊಸ ಓಡ್ಲಿನ ಮಾಡು ಕಾಣಿಸಿತು. ಇದ್ಯಾರದೆಂದು ತಿಳಿಯುವ ಆತುರವಾಯಿತು.ಆದರೆ ಅವರ ಅಗೇಡಿಯ ಬಳಿ ನಾಲ್ಕು ದನಗಳು ಮೇಯುವುದನ್ನು ಕಂಡು ಅವುಗಳನ್ನು ಹೋಡಿಸಲು ಹೋದಾಗ ಅವರಿಗೆ ವಿಷಯ ಮರೆಯಿತು.

ಇದಾದ ಒಂದು ದಿವಸ ಐತಾಳರು ಸತ್ಯಭಾಮೆಯೊಂದಿಗೆ ಮಾತನಾಡುತ್ತಾ ಹಣವನ್ನು ತೆಗೆದುಕೊಂಡ ಬಳಿಕ ಶೀನಮಯ್ಯ ಕಾಣಿಸಿದ ಹಾಗೆ ಆಗಲಿಲ್ಲವಲ್ಲ ಎಂದು ಹೇಳುವಾಗ, ಅದೇ ತಕ್ಷಣಕ್ಕೆ ತೋಡಮೆಯನ್ನು ದಾಟಿಕೊಂಡು ಶೀನಮಯ್ಯನು ಐತಾಳರ ಮನೆಗೆ ಬಂದನು.ಐತಾಳರು

ಶೀನಮಯ್ಯನಿಗೆ ಆ ಹೊಸ ಮಾಡಿನ ಬಗ್ಗೆ ಮಾತಾಡಲು ಹೋದಾಗ ಅದು ಇದು ಹೇಳಿ ತಪ್ಪಿಸುತ್ತಿದ್ದ. ತನ್ನ ಮಗನಿಗೆ ಮುಂಜಿ ಕಾರ್ಯವನ್ನು ಇಟ್ಟುಕೊಂಡಿದ್ದು ಅದಕ್ಕೆ ಕರೆಯಲು ಬಂದೆ ಎಂದು ಹೇಳಿದ. ಉಪನಯನಕ್ಕೆ ಎಂದು ಐತಾಳರು ಶೀನನ ಮನೆಯ ಹತ್ತಿರ ಹೋಗುವಾಗ ಶೀನನು ಮನೆಗೆ ಹಂಚನ್ನು ಹೊದೆಯಿಸಿರುವುದು ತಿಳಿಯಿತು. ತನ್ನ ಬಳಿ ಸಾಲ ತಂದು ಅದರಿಂದ ಈ ಕೆಲಸ ಮಾಡಿದ್ದಾನೆ, ತನಗೆ ಒಂದು ಮಾತನ್ನು ತಿಳಿಸಲಿಲ್ಲ ಎಂದು ಬೇಸರ ಮಾಡಿಕೊಂಡರು. ಮುಂಜಿ ಕಾರ್ಯಕ್ಕೆ ಬಂದವರು ಶೀನಮಯ್ಯನನ್ನು ಕೊಂಡಾಡಿದರು.ಇದನೆಲ್ಲಾ ನೋಡುತ್ತಿದ್ದ ಐತಾಳರಿಗೆ ತಾನು ಮನೆಯ ಹೆಬ್ಬಾಗಿಲ ನಿರ್ಮಾಣ ಮಾಡಬೇಕೆಂಬ ಬಯಕೆ ಉಂಟಾಯಿತು. ಮುಂಜಿಯ ಸಂದರ್ಭದಲ್ಲಿ ಇಬ್ಬರ ಸ್ನೇಹವು ಹೊಡೆಯಿತು. ಸ್ನೇಹ ದ್ವೇಷವಾಗಿ ಬದಲಾಗುತ್ತಾ ಹೋಯಿತು. ಕಾದಂಬರಿಗೆ ತಿರುವನ್ನು ನೀಡುವಲ್ಲಿ ಈ ಸನ್ನಿವೇಶ ಬಹಳ ಮುಖ್ಯವಾದುದು.

ಐತಾಳ ಮತ್ತು ಶೀನಮಯ್ಯರ ನಡುವೆ ಉಂಟಾದ ಪೈಪೋಟಿ ಮತ್ತು ಬಿರುಕು

ಐತಾಳರ ಮದುವೆಯಲ್ಲಿ ಶೀನಮಯ್ಯ ಪ್ರಮುಖ ಪಾತ್ರ ವಹಿಸಿದವನು. ಶೀನಮಯ್ಯ ಐತಾಳರ ನೆರೆಯ ಮನೆಯವನು. ಐತಾಳರು ತಮ್ಮ ಎರಡನೆ ಮದುವೆಯ ಪೂರ್ಣ ಜವಾಬ್ದಾರಿಯನ್ನು ಶೀನಮಯ್ಯನಿಗೆ ವಹಿಸಿರುತ್ತಾನೆ. ಮದುವೆಯ ನಂತರ ಅವರ ಬಾಂಧವ್ಯ ಇನ್ನೂ ಹೆಚ್ಚುತ್ತದೆ. ಪ್ರತಿದಿನ ಶೀನಮಯ್ಯ ಐತಾಳರ ಮನೆಗೆ ಬರುವುದು ಮಾತನಾಡುವುದು ಹೋಗುವುದು ಹೀಗೆ ನಡೆಯುತ್ತಿರುತ್ತದೆ. ಈ ನಡುವೆ ಶೀನಮಯ್ಯ ಐತಾಳರನ್ನು ಪುಸಲಾಯಿಸಿ 200 ರೂಪಾಯಿ ಸಾಲವನ್ನು ಪಡೆಯುತ್ತಾನೆ. ಕೆಲವು ದಿನಗಳ ಬಳಿಕ ಶೀನನು ಈ ಸಾಲವನ್ನು ಕೊಡುವನೋ ಇಲವೋ ಎಂಬ ಅನುಮಾನ ಉಂಟಾಗಿ ಶೀನನ್ನು ಸಾಲ ವಾಪಸ್ ಕೊಡುವಂತೆ ಕೇಳುತ್ತಾನೆ. ಇವರಿಬ್ಬರ ನಡುವೆ ಸಣ್ಣ ಬಿರುಕು ಪ್ರಾರಂಭವಾಗುತ್ತದೆ. ಶೀನಮಯ್ಯ ತನ್ನ ಇಬ್ಬರು ಗಂಡು ಮಕ್ಕಳನ್ನು ಪೇಟೆಗೆ ಕಳುಹಿಸಿ ಅಲ್ಲಿ ಹೋಟೆಲ್ ಉದ್ಯಮದಲ್ಲಿ ತೊಡಗಿಸಿರುತ್ತಾನೆ. ಅದರಲ್ಲಿ ಬಂದ ಹಣದಿಂದ ತಮ್ಮ ಮನೆಯ ಹೆಬ್ಬಾಗಿಲು ನಿರ್ಮಾಣ ಮಾಡಿರುತ್ತಾನೆ. ಹಾಗೆ ಅಲ್ಲಿ ಇಲ್ಲಿ ಸ್ವಲ್ಪ ಆಸ್ತಿಯನ್ನು ಕೊಂಡುಕೊಂಡಿರುತ್ತಾನೆ. ಈ ವಿಷಯವು ಐತಾಳರಿಗೆ ತಿಳಿದ ಬಳಿಕ ಶೀನನ ಮೇಲಿನ ವಿಶ್ವಾಸವನ್ನು ಬಿಟ್ಟು ಬಿಡುತ್ತಾರೆ.

ಮನೆಯ ಹೆಬ್ಬಾಗಿಲು ನಿರ್ಮಾಣವನ್ನು ಶೀನನು ತನ್ನ ಹಣದಲ್ಲಿ ಮಾಡಿದ್ದು, ಆದರೆ ತನಗೆ ಒಂದು ಮಾತು ತಿಲಿಸಲಿಲ್ಲವಲ್ಲ ಎಂದು ಬೇಸರ ಮಾಡಿಕೊಳ್ಳುತ್ತಾರೆ. ಇವರಿಬ್ಬರ ಸ್ನೇಹ ಹೋಗಿ ಇವರಿಬ್ಬರ ನಡುವೆ ಬಿರುಕು ಪೈಪೋಟಿ ಕಾಣಿಸಿಕೊಳ್ಳುತ್ತದೆ. ಐತಾಳರು ತನ್ನ ಮನೆಯನ್ನು

ಮಾಡಿನ ಮನೆ ಮಾಡಬೇಕು ಎಂಬ ಬಯಕೆ ಪ್ರಾರಂಭವಾಗುತ್ತದೆ. ಯಾರೆ ಆಸ್ತಿ ಮಾರಿದರು ಅದು ಐತಾಳರಿಗೆ ಸೇರುತ್ತದೆ ಇಲ್ಲವಾದರೆ ಶೀನಮಯ್ಯನಿಗೆ ಸೇರುತ್ತದೆ. ಈ ಸನ್ನಿವೇಶವು ಕಾದಂಬರಿಯ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುತ್ತದೆ ಐತಾಳರು ಶೀನಮಯ್ಯ ಹೀಗೆ ಶ್ರೀಮಂತನಾಗುತ್ತಿರುವುದನ್ನು ನೋಡಿ ಅನ್ನ ಮಾರಿಕೊಂಡು ಬದುಕುವುದು ಒಂದು ಜೀವನವೆ ಎಂದು ಹೇಳುತ್ತಾರೆ. ಐತಾಳರ ಮನಸ್ಸಿನಲ್ಲಿ ತಾನು ಶೀನಮಯ್ಯನಿಗಿಂತ ಏನು ಕಡಿಮೆ ಮಕ್ಕಳು ಹಣ ಸಂಪಾದನೆ ಮಾಡುವುದಕ್ಕಿಂತ ಮುಂಚೆ ಶೀನ ಎಂದು ಊರಿನವರು ಕರೆಯುತ್ತಿದರು.ದುಡ್ಡು ಹೆಚ್ಚಾದಂತೆ ಶೀನ ಎಂದು ಕರೆಯುವವರು ಶೀನಮಯ್ಯ ಎಂದು ಕರೆಯತೊಡಗಿದರು. ಶೀನಮಯ್ಯನು ಅವಕಾಶ ಸಿಕ್ಕಾಗಲೆಲ್ಲ ಐತಾಳರನ್ನು ಅವಮಾನಿಸುತ್ತ ಹೋಗುತ್ತಾನೆ. ಐತಾಳರ ಮಗ ಲಚ್ಚನು ಅಡ್ಡದಾರಿಯಲ್ಲಿ ಹೋಗಲು ಈತನು ಸಹ ಕಾರಣನಾಗಿರುತ್ತಾನೆ. ಶೀನನ ಮೇಲಿನ ಹಠದಿಂದ ಐತಾಳರು ಮನೆಯನ್ನು ನಿರ್ಮಿಸುತ್ತಾರೆ. ಕೊನೆಯ ಕಾಲದಲ್ಲಿ ಆ ಮನೆಯಲ್ಲಿ ಸಾವನ್ನಪ್ಪುತ್ತಾರೆ.

ಐತಾಳರ ಸಾವು (ಶೀನಮಯ್ಯನನ್ನು ಬದಲಾಯಿಸಿದ ರೀತಿ)

ಐತಾಳ ಮತ್ತು ಶೀನಮಯ್ಯ ನವರು ಮೊದಲು ಸ್ನೇಹಿತರಾಗಿದ್ದರು. ಶೀನಮಯ್ಯ ಐತಾಳರ ಬಳಿ 200 ರೂ ಸಾಲ ಮಾಡಿ ಮಾಡಿನ ಮನೆ ಮತ್ತು ಹೆಬ್ಬಾಗಿಲನ್ನು ನಿರ್ಮಾಣ ಮಾಡಿದ್ದು ಈ ವಿಷಯವನ್ನು ಐತಾಳರಿಂದ ಮುಚ್ಚಿಟ್ಟದ್ದರಿಂದ ಐತಾಳರಿಗೆ ಶೀನನ ಮೇಲೆ ಯಾವುದೆ ವಿಶ್ವಾಸ ಉಳಿಯಲಿಲ್ಲ. ಇವರಿಬ್ಬರ ನಡುವೆ ಬಿರುಕು ಪ್ರಾರಂಭವಾಗುತ್ತಾ ಹೋಯಿತು. ಅದು ಎಲ್ಲಿಯವರೆಗೆ ಹೋಯಿತೆಂದರೆ ಇಬ್ಬರು ಪೈಪೋಟಿಗೆ ನಿಂತರು. ಶೀನಮಯ್ಯನ ಮಕ್ಕಳು ಹೋಟೆಲ್‌ನಿಂದ ಸಂಪಾದನೆ ಮಾಡುತ್ತಿದ್ದ ಹಣವನ್ನು ತಂದೆಯ ಕೈಗೆ ತಂದುಕೊಡುತ್ತಿದ್ದರು. ಇದರಿಂದ ಶೀನಮಯ್ಯ ಊರಿನಲ್ಲಿ ಸಾಲವನ್ನು ಕೊಡುತ್ತಿದ್ದನು. ಆಸ್ತಿಯನ್ನು ಕೊಂಡುಕೊಳ್ಳುತ್ತಿದ್ದನು. ಇದರಿಂದ ಐತಾಳರಿಗೆ ಕೋಪ ಬರುತ್ತಿತ್ತು. ಅನ್ನವನ್ನು ಮಾರಿ ಸಂಪಾದನೆ ಮಾಡುವುದು ಒಂದು ಸಂಪಾದನೆಯೆ ಎಂದು ಹೇಳಿ ಶೀನನನ್ನು ರೇಗಿಸುತ್ತಿದ್ದರು. ಐತಾಳರು ತಾವು ಸಂಪಾದನೆ ಮಾಡಿ ಉಳಿಸಿದ ಹಣದಿಂದ ತಾವು ಸಹ ಶೀನನಿಗಿಂತ ಏನು ಕಡಿಮೆ ಎಂದು ಆಸ್ತಿಯನ್ನು ಕೊಂಡುಕೊಳ್ಳಲು ನಿಂತರು. ಮೂರು ಸಾವಿರಕ್ಕೆ ಐತಾಳರು ತೆಂಗಿನ ತೋಟವನ್ನು ಕೊಂಡುಕೊಂಡಾಗ ಶೀನಮಯ್ಯನಿಗೆ ತಡೆಯಲಾಗಲಿಲ್ಲ. ಆಸ್ತಿಯನ್ನು ಮಾರಿದವನ ಬಳಿ ಹೋಗಿ ಯಾಕೆ ಅವರಿಗೆ ಮಾರಿದಿರಿ ನನ್ನ ಬಳಿ

ಬಂದಿದ್ದರೆ ನಾನು ಇನ್ನು ಹೆಚ್ಚು ಹಣವನ್ನು ಕೊಡುತ್ತಿದ್ದೆ ಎಂದು ಹೇಳಿದನು. ಹೀಗೆ ಐತಾಳ ಮತ್ತು ಶೀನಮಯ್ಯರ ನಡುವೆ ಪೈಪೋಟಿ ಇತ್ತು.

ಐತಾಳರು ಮಗನ ಯೋಚನೆಯನ್ನು ಮಾಡಿ ತನ್ನಿಂದಲೆ ತನ್ನ ಸೊಸೆಗೆ ಅನ್ಯಾಯವಾಯಿತೆಂದು, ತನ್ನ ಸೊಸೆಯನ್ನು ನೋಡುವ ಬಯಕೆಯಿಂದ ಕಾಗದವನ್ನು ಬರೆದನು ಮಗನಂತು ಹೋದ ಸೊಸೆಯನ್ನಾದರು ಸಾಯುವ ಕಾಲದಲ್ಲಿ ನೋಡುವಾಸೆಯಾಗಿದೆ ಎಂದು ಬರೆದರು. ಈ ಪತ್ರವನ್ನು ಕಂಡು ನಾಗವೇಣಿಯ ತಂದೆ ಆಕೆಯನ್ನು ಕರೆದುಕೊಂಡು ಐರೋಡಿಗೆ ಬರುತ್ತಾರೆ. ಜ್ವರ ಹಿಡಿದು ಹಾಸಿಗೆ ಹಿಡಿದಿದ್ದ ಐತಾಳರು ಸೊಸೆಯನ್ನು ನೋಡಿ ಕಣ್ಣೀರು ಹಾಕುತ್ತಾರೆ. ನಾನೇ ನಿನ್ನ ಜೀವನ ಹಾಳುಮಾಡಿದೆ ಎಂದು ಹೇಳುತ್ತಾರೆ. ನಾಗವೇಣಿಯು ಅಲ್ಲಿಯೆ ಸ್ವಲ್ಪ ದಿನ ಇರುವುದಾಗಿ ಹೇಳುತ್ತಾಳೆ. ಹಾಗೆಯೆ ಅಲ್ಲೆ ಉಳಿಯುತ್ತಾಳೆ. ಐತಾಳರು ಸೊಸೆಗೆ ಅನ್ಯಾಯವಾಗಬಾರದೆಂದು ಐತಾಳರು ತಾವು ಸಂಪಾದನೆ ಮಾಡಿದ ಆಸ್ತಿಯಲ್ಲಿ ಮುಕ್ಕಾಲು ಭಾಗ ಆಸ್ತಿಯನ್ನು ತನ್ನ ಸೊಸೆಯ ಹೆಸರಿಗೆ ಬರೆಯುತ್ತೇನೆ. ಉಳಿದ ಕಾಲು ಭಾಗ ಮಗಳಾದ ಸುಬ್ಬಿಗೆ ಬರೆಯುತ್ತೇನೆ. ಪೂರ್ವಜರ ಆಸ್ತಿಯನ್ನು ಲಚ್ಚ ಏನು ಬೇಕಾದರು ಮಾಡಿಕೊಳ್ಳಲಿ ಉಳಿಸಲಿ ಇಲ್ಲ ಮಾರಿಕೊಳ್ಳಲಿ ಎಂದು ಹೇಳುತ್ತಾರೆ. ಮಗನನ್ನು ನಂಬದೆ ಐತಾಳರು ಸೊಸೆಯ ಹೆಸರಿಗೆ ಆಸ್ತಿ ಬರೆಯುತ್ತಾರೆ. ಐತಾಳರ ಸಾವಿನ ಕ್ಷಣಗಳು ಹತ್ತಿರ ಬರುತ್ತಿರುವಾಗ ಲಚ್ಚನ ಮೇಲೆ ಎಷ್ಟೇ ಕೋಪವಿದ್ದರು ಮಗನನ್ನು ಕಾಣುವ ಹಂಬಲವಿತ್ತು. ಇದನ್ನು ಗಮನಿಸಿದ ನಾಗವೇಣಿಯು ಊರಿಗೆ ಬಂದಿರುವ ಲಚ್ಚನು ಶೀನಮಯ್ಯನ ಮನೆಯಲ್ಲಿ ಇರುತ್ತಾನೆ. ಲಚ್ಚನನ್ನು ಕರೆದುಕೊಂಡು ಬರಲು ಸ್ವತಹ ತಾನೆ ಹೋಗಿ ಹೇಳುತ್ತಾನೆ ಕೊನೆಯ ಕ್ಷಣದಲ್ಲಾದರು ತಂದೆಯ ಮುಖವನ್ನು ಒಮ್ಮೆಯಾದರು ನೋಡಬೇಡವೆ ಎಂದು ಹೇಳಿದಾಗ ಲಚ್ಚನು ಮಾತನಾಡದೆ ಅವಳ ಹಿಂದೆ ಬರುತ್ತಾನೆ.

ಲಚ್ಚನ ಹಿಂದೆ ಶೀನಮಯ್ಯನು ಬರುತ್ತಾನೆ. ಸಾಯುವ ಕ್ಷಣದಲ್ಲಿದ್ದ ಐತಾಳರು ಮಗನನ್ನು ನೊಡಿ ಇನ್ನಾದರು ಒಳ್ಳೆಯ ಮಾರ್ಗದಲ್ಲಿ ನಡೆ ಎಂದು ಹೇಳುತ್ತಾರೆ. ಆಸ್ತಿ ಎಲ್ಲವನ್ನು ನಾಗವೇಣಿಯ ಹೆಸರಿಗೆ ಬರೆದಿದ್ದೇನೆ ಎಂದು ತಿಳಿಸುತ್ತಾರೆ. ಇದರಿಂದ ಲಚ್ಚನಿಗೆ ಕೋಪವು ಅತಿರೇಕಕ್ಕೆ ಹೋಗುತ್ತದೆ. ಐತಾಳರ ಕೊನೆಯ ಕ್ಷಣಗಳನ್ನು ನೋಡಿದ ಶೀನಮಯ್ಯ ಲಚ್ಚನಿಗೆ ನಿಮ್ಮ ತಂದೆಯ ಕಾಲಿಗೆ ಬಿದ್ದು ಕ್ಷಮೆಯನ್ನು ಕೇಳು ಎಂದು ಹೇಳುತ್ತಾನೆ. ಶೀನಮಯ್ಯನು ಐತಾಳರಲ್ಲಿ ಕ್ಷಮೆಯನ್ನು ಕೇಳುತ್ತಾನೆ. ಆಕ್ಷಣದಲ್ಲಿ ಶೀನಮಯ್ಯನಿಗೆ ತಾನು ಇಷ್ಟು ದಿನ ಐತಾಳರ ವಿರುದ್ಧ ನಡೆದುಕೊಂಡ ರೀತಿಯ ಬಗ್ಗೆ ಅವರಿಗೆ ಬೇಜಾರಾಗುತ್ತದೆ. ಈ ಸನ್ನಿವೇಶವು ಕಾದಂಬರಿಯ

ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಶೀನಮಯ್ಯ ಅಂದಿನಿಂದ ಬದಲಾಗುತ್ತಾನೆ ಲಚ್ಚನಿಗೆ ಬುದ್ಧಿವಾದವನ್ನು ಹೇಳುತ್ತಾನೆ.

ಎರಡನೆ ತಲೆಮಾರಿನ ಪ್ರಮುಖ ಸನ್ನಿವೇಶಗಳು

ಲಚ್ಚನು ಶಾಲೆಗೆ ಸೇರಿದ ಸಮಯ

ಐತಾಳರಿಗೆ ಮಕ್ಕಳೆ ಹಾಗುವುದಿಲ್ಲ ಎಂದುಕೊಂಡಾಗ ಎರಡನೆ ಮದುವೆಯಿಂದ ಐತಾಳರಿಗೆ ಮಕ್ಕಳ ಭಾಗ್ಯ ಲಬಿಸಿತು. ಗಂಡು ಮಗುವಿಗೆ ತನ್ನಂತೆ ಪೌರೋಹಿತ್ಯವನ್ನು ಕಲಿಸದೆ ಆತನನ್ನು ಶಾಲೆಗೆ ಸೇರಿಸಬೇಕೆಂದು ಆಲೋಚಿಸಿದರು. ಕೋಡಿಯಲ್ಲಿ ಮಠದ ಶಾಲೆ ಇತ್ತು, ಅದಕ್ಕೆ ಕಡಿಮೆ ಮಕ್ಕಳು ಹೋಗುತ್ತಿದ್ದರು. ಆ ಮಠದ ಶಾಲೆಯ ಶಿಕ್ಷಕರು ಪ್ರತಿ ದಿನ ಐತಾಳರ ಮನೆಗೆ ತಿರುಗುತ್ತಿದ್ದರು. ಅವರು ಹೊಟ್ಟೆ ಪಾಡಿಗಾಗಿ ಈ ಕೆಲಸವನ್ನು ಮಾಡಲೆ ಬೇಕಾಗಿತ್ತು. ವಿದ್ಯಾರ್ಥಿಗಳು ಹೆಚ್ಚು-ಹೆಚ್ಚು ಸೇರಿದಾಗ ಅವರ ಮನೆಗೆ ದವಸ, ಧಾನ್ಯಗಳು ಸೇರುತ್ತಿದ್ದವು. ಐತಾಳರಿಗೆ ಮತ್ತು ಸತ್ಯಭಾಮೆರಿಗೆ ಲಚ್ಚನನ್ನು ಮಠದ ಶಾಲೆಯಲ್ಲಿ ಓದಿಸಲು ಇಷ್ಟವಿರಲಿಲ್ಲ. ಆದರೆ ಸರಸೋತಿಗೆ ಲಚ್ಚನನ್ನು ಪಟ್ಟಣದ ಶಾಲೆಯಲ್ಲಿ ಓದಿಸಲು ಇಷ್ಟವಿರಲಿಲ್ಲ. ಮಠದ ಶಿಕ್ಷಕರಿಗೆ ಸರಸೋತಿಯು ಅವರ ಮಕ್ಕಳು ಅವರ ಇಷ್ಟ ಏನು ಬೇಕಾದರೂ ಮಾಡಿಕೊಳ್ಳಲಿ, ನೀವು ನಮ್ಮ ಅಣ್ಣನ ಬಳಿಯೆ ಮಾತನಾಡಿ ಎಂದು ಹೇಳಿದಳು. ಐತಾಳರಿಗೆ ತಮ್ಮ ಮಗ ತಮ್ಮಂತೆ ಪೌರೋಹಿತಿಕೆಯನ್ನು ಮಾಡಿ ಬದುಕುವುದು ಇಷ್ಟವಿರಲಿಲ್ಲ.

ಪೌರೋಹಿತಿಕೆಗೆ ಯಾರು ಮರ್ಯಾದೆ ಕೊಡುವುದಿಲ್ಲ, ಚೆನ್ನಾಗಿ ಓದಿ ಆಫೀಸರ್ ಆದರೆ ಜನರು ಕೈಕಟ್ಟಿ ಮರ್ಯಾದೆಯಿಂದ ಕಾಣುತ್ತಾರೆ. ಇದರ ಅನುಭವ ಶೀನಮಯ್ಯನವರ ಮಗನ ಮುಂಜಿಯಲ್ಲಿ ಐತಾಳರಿಗೆ ಆಗಿತ್ತು. ಶೀನಮಯ್ಯನ್ನಲ್ಲಿ ಹಣ ಇದ್ದುದರಿಂದ ಎಲ್ಲಾರು ಅವನಿಗೆ ಮರ್ಯಾದೆ ಕೊಡುವುತ್ತಿರುವುದು ಅನುಭವಕ್ಕೆ ಬಂದಿತು. ಮಠದ ಶಿಕ್ಷಕರು ಐತಾಳರ ಮನ ಒಲಿಸಲು ಬಹಳ ಪ್ರಯತ್ನ ಮಾಡಿದರು. ಪಟ್ಟಣದಲ್ಲಿ ಎಲ್ಲಾ ಜಾತಿಯವರನ್ನು ಒಟ್ಟಾಗಿ ಕೂರಿಸುತ್ತಾರೆ, ಆಚಾರ ವಿಚಾರಗಳೆ ಪಟ್ಟಣದ ಶಾಲೆಗಳಿಗೆ ಇರುವುದಿಲ್ಲ. ಆದರೆ ನಮ್ಮ ಮಠದ ಶಾಲೆಯಲ್ಲಿ ಬರಿ ಬ್ರಾಹ್ಮಣರಿಗೆ ಮಾತ್ರ ಪಾಠವನ್ನು ಹೇಳಿ ಕೊಡಲಾಗುತ್ತದೆ. ಇದರಿಂದ ಆಚಾರ ವಿಚಾರದಲ್ಲಿ ಯಾವುದೇ ತೊಂದರೆಯಾಗುದಿಲ್ಲ ಎಂದರು.ಐತಾಳರು ವಿರೋಧಗಳ ನಡುವೆಯೆ ಮಗನಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡಿಸಲು ಪಟ್ಟಣದ ಶಾಲೆಗೆ ಸೇರಿಸಿದರು. ಇದರಿಂದ ಆಧುನೀಕರಣ ನಿಧಾನವಾಗಿ ಹರಡತೊಡಗುತ್ತದೆ. ಇದು ಕಾದಂಬರಿಯ ದಿಕ್ಕನ್ನು ಬದಲಾಯಿಸುತ್ತದೆ. ಕಾದಂಬರಿಯ ಬೆಳವಣಿಗೆಗೆ ಸಹಕಾರಿಯಾಗಿದೆ.

ಲಚ್ಚ ವಿದ್ಯಭ್ಯಾಸ ಮರೆತು ಅಡ್ಡದಾರಿ ಹಿಡಿದ ಪ್ರಸಂಗ

ಐತಾಳರ ಮನೆಯಲ್ಲಿ ಮಕ್ಕಳಿಲ್ಲದಾಗ ಲಚ್ಚನು ಜನಿಸಿದ. ಲಚ್ಚನನ್ನು ಕಂಡರೆ ಮನೆಯಲ್ಲಿ ಎಲ್ಲರಿಗೂ ಪ್ರೀತಿ, ವಾತ್ಸಲ್ಯ ಹೆಚ್ಚು. ಲಚ್ಚನು ಆ ಪ್ರೀತಿ, ವಾತ್ಸಲ್ಯವನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಅವರ ಭಾವನೆಗಳ ಜೊತೆ ಆಟವಾಡುತ್ತಾನೆ. ಐತಾಳರು ಲಚ್ಚನನ್ನು ತಮ್ಮಂತೆ ಪೌರೋಹಿತಿಕೆಯನ್ನು ಮಾಡಿಸದೆ ಮಗನಿಗೆ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಕೊಡಿಸಲು ಮುಂದಾಗುತ್ತಾರೆ. ಅದೆ ರೀತಿ ಮನೆಯಲ್ಲಿ ಎಲ್ಲರ ವಿರೋಧವನ್ನು ಕಟ್ಟಿಕೊಂಡು ಲಚ್ಚನನ್ನು ಊರಿನ ಮಠದ ಶಾಲೆಗೆ ಸೇರಿಸದೆ ಇಂಗ್ಲೀಷ್ ಶಾಲೆಗೆ ಸೇರಿಸುತ್ತಾರೆ. ಐತಾಳರ ನಂಬಿಕೆಯಂತೆ ಲಚ್ಚನನ್ನು ದೊಡ್ಡ ಆಫೀಸರ್ ಮಾಡಬೇಕೆಂಬ ಕನಸು ಇನ್ನು ಹೆಚ್ಚುತ್ತದೆ. ಲಚ್ಚನು ಹಾಗೆಯೆ ಬೆಳೆಯುತ್ತಾ ಚೆನ್ನಾಗಿ ಓದುತ್ತಾ ಹೋಗುತ್ತಾನೆ. ಬಾಲ್ಯಾವಸ್ಥೆಯು ಕಳೆಯುತ್ತಿದ್ದಂತೆ ಆತನಿಗೆ ಆಕರ್ಷಣೆಗಳು ಹೆಚ್ಚುತ್ತಾ ಹೋಗುತ್ತವೆ. ಮುಂದಿನ ವಿದ್ಯಾಭ್ಯಾಸಕ್ಕೆ ಲಚ್ಚನು ಪಟ್ಟಣವನ್ನು ಸೇರುತ್ತಾನೆ. ಆತನಿಗೆ ಅಲ್ಲಿ ಸಿಗುವ ಸ್ನೇಹಿತರು ಆತನನ್ನು ದಾರಿ ತಪ್ಪಿಸುತ್ತಾರೆ. ಲಚ್ಚನು ಪಟ್ಟಣದ ಕಾಫಿ, ತಿಂಡಿ, ಇಸ್ಪೀಟು ಹುಡುಗಿಯ ವ್ಯಾಮೋಹಗಳಿಗೆ ಮಾರು ಹೋಗುತ್ತಾನೆ. ಇದರಿಂದ ಅಭ್ಯಾಸದಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುತ್ತಾನೆ. ಆ ವರ್ಷ ಲಚ್ಚ ಫೇಲಾಗುತ್ತಾನೆ. ಲಚ್ಚನು ತನ್ನ ಮೋಹಗಳನ್ನು ತೀರಿಸಿಕೊಳ್ಳಲು ಸಾಲ ಮಾಡುವುದಕ್ಕು ಹಿಂದೆ ಮುಂದೆ ಯೋಚನೆ ಮಾಡುವುದಿಲ್ಲ.

ಲಚ್ಚನು ಫೇಲಾದಾಗ ಅದರ ಬಗ್ಗೆ ಐತಾಳರು ವಿಚಾರಿಸಿದಾಗ ಲಚ್ಚನು ಆತನ ಸ್ನೇಹಿತರಿಂದ ಹಾಳಾಗಿರುವುದು ಐತಾಳರಿಗೆ ತಿಳಿಯುತ್ತದೆ. ಐತಾಳರು ಲಚ್ಚನಿಗೆ ಬುದ್ಧಿಮಾತನ್ನು ಹೇಳುತ್ತಾ ಐರೋಡಿಯವನು ಹೋಟೆಲ್ ನಡೆಸುತ್ತಿರುತ್ತಾನೆ. ಅವನ ಹೋಟೆಲಿನಲ್ಲಿ ಲಚ್ಚನನ್ನು ಉಳಿಯುವಂತೆ ಐತಾಳರು ಮಾಡುತ್ತಾರೆ. ಲಚ್ಚನನ್ನು ಸ್ನೇಹಿತರಿಂದ ದೂರ ಮಾಡುತ್ತಾರೆ. ಲಚ್ಚನು ಆ ವರ್ಷ ಪರೀಕ್ಷೆಯಲ್ಲಿ ಪಾಸಾಗುತ್ತಾನೆ. ಲಚ್ಚನು ಎಲ್ಲೆ ಇದ್ದರು ಸರಿಯೇ ಆತನ ಕೆಟ್ಟ ಬುದ್ದಿಗಳನ್ನು ಬಿಡುವುದಿಲ್ಲ. ಆ ಹೋಟೆಲಿನ ಯಜಮಾನಿಯಾದ ಜಲಜಾಕ್ಷಿಯನ್ನು ಮೋಹಿಸುತ್ತಾನೆ. ಆಕೆಯನ್ನು ಸುಮ್ಮನೆ ಮಾತನಾಡಿಸುವುದು ತಮಾಷೆ ಮಾಡಿಸುವುದು ಹೀಗೆ ಆಕೆಯ ವಿಶ್ವಾಸವನ್ನು ಸಂಪಾದನೆ ಮಾಡುತ್ತಾನೆ. ಈ ವಿಷಯವು ಜಲಜಾಕ್ಷಿಯ ಗಂಡನಿಗೆ ತಿಳಿಯುತ್ತದೆ ಇದನೆಲ್ಲ ಐತಾಳರಿಗೆ ಕಾಗದದಲ್ಲಿ ಬರೆದು ಕಳುಹಿಸುತ್ತಾನೆ. ಮಗನು ಇಷ್ಟು ಕೆಟ್ಟಿರುವುದನ್ನು ನೋಡಿ ಆತನ ಮೇಲಿನ ಆಸೆಯನ್ನು ಬಿಡುತ್ತಾರೆ. ಇವನು ತಂದೆ–ತಾಯಿಗೆ ಒಳ್ಳೆಯ ಹೆಸರನ್ನು ತಂದು ಕೊಡುವುದಿಲ್ಲ ಎಂದು ಆತನ ಮೇಲೆ ಸಿಟ್ಟನ್ನು ಮಾಡಿಕೊಳ್ಳುತ್ತಾರೆ.

ಐತಾಳರಿಗೆ ಮಗನನ್ನು ದೊಡ್ಡ ಆಫೀಸರ್ ಮಾಡುವ ಕನಸನ್ನು ಹೊಂದಿದ್ದರು. ಲಚ್ಚನ ಈ ವರ್ತನೆಯಿಂದ ಅವರ ಕನಸ್ಸು ನುಚ್ಚು ನೂರಾಯಿತು.ಈ ಸನ್ನಿವೇಶ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಲಚ್ಚನ ಈ ದುರ್ವರ್ತನೆಯು ಎರಡನೆ ತಲೆಮಾರಿನ ಕಾದಂಬರಿಯ ಬೆಳವಣಿಗೆಗೆ ಕಾರಣವಾಗಿದೆ.

ಲಚ್ಚ ಮತ್ತು ನಾಗವೇಣಿಯ ಮದುವೆ

ಐತಾಳರು ಲಚ್ಚನಿಗೆ ಈಗಲೆ ಮದುವೆ ಮಾಡಿದರೆ ಆತನು ಓದುವುದನ್ನು ನಿಲ್ಲಿಸಿ ಸಂಸಾರದ ಜಂಜಾಟದಲ್ಲಿ ಸಿಲುಕುತ್ತಾನೆ. ಆತನನ್ನು ಆಫೀಸರ್ ಮಾಡಲು ಆಗುವುದಿಲ್ಲ ಲಚ್ಚನ ವಿದ್ಯಾಭ್ಯಾಸ ಮುಗಿದ ನಂತರ ಲಚ್ಚನ ಮದುವೆ ಮಾಡುವ ಎಂದು ನಿರ್ಧಾರವನ್ನು ಕೈಗೊಂಡಿರುತ್ತಾರೆ. ಲಚ್ಚನು ಹನ್ನೆರಡನೆ ತರಗತಿಯನ್ನು ಓದಿ ಮುಗಿಸಿದ ನಂತರ ಆತನನ್ನು ಮುಂದೆ ಏನು ಓದಿಸಬೇಕೆಂದು ಅವರ ಪಕ್ಕದ ಊರಿನ ವಾಸುದೇವಯ್ಯ ಎಂಬ ವಕೀಲರನ್ನು ಕೇಳಲು ಲಚ್ಚನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಲಚ್ಚನ ಇಂಗ್ಲೀಷ್ ಜ್ಞಾನವನ್ನು ತಿಳಿದ ವಾಸುದೇವಯ್ಯ ಬಿ.ಎ. ಓದಲಿ ನಂತರ ವಕೀಲರ ಓದನ್ನು ಓದಿದರೆ ಆಯಿತು ಎಂದು ತಿಳಿಸುತ್ತಾ ಅದರ ಜೊತೆಗೆ ನಿಮ್ಮ ಮಗನಿಗೆ ನಮ್ಮ ಮಗಳನ್ನುಮದುವೆ ಮಾಡಿದರೆ ಹೇಗಿರುತ್ತದೆ ನಮ್ಮ ಮಗಳಿಗೆ ಯೋಗ್ಯವಾದ ವರ ಸಿಕ್ಕಿದಂತಾಗುತ್ತದೆ ಎಂದು ವಾಸುದೇವಯ್ಯ ಮದುವೆಯ ಪ್ರಸ್ತಾಪವನ್ನು ಮಾಡುತ್ತಾರೆ. ಆಕಸ್ಮಿಕವಾಗಿ ಲಚ್ಚನ ಮದುವೆಯ ನಿರ್ಧಾರವಾಗುತ್ತದೆ. ಲಚ್ಚನ ವಿದ್ಯಾಭ್ಯಾಸವನ್ನು ವಕೀಲರು ತಾವು ನೋಡಿಕೊಳ್ಳುತ್ತೇವೆ ಎಂದು ತಿಳಿಸುತ್ತಾರೆ. ಐತಾಳರಿಗೆ ಬಯಸದ ಸಿರಿಯು ಸಿಕ್ಕಿದಂತಾಯಿತು. ಲಚ್ಚ ಮತ್ತು ನಾಗವೇಣಿಯರ ಮದುವೆಯು ನಡೆಯಿತು.

ಐತಾಳರಿಗೆ ಕೆಲವು ತಿಂಗಳ ನಂತರ ಲಚ್ಚನಿಂದ ಹಣಬೇಕೆಂದು ಕಾಗದ ಬರುತ್ತದೆ. ಅದನ್ನು ನಂಬದ ಐತಾಳರು ವಕೀಲರಿಗೆ ಕಾಗದವನ್ನು ಬರೆಯುತ್ತಾರೆ. ಆದರೆ ವಕೀಲರು ಯಾವುದೇ ಉತ್ತರವನ್ನು ಕೊಡುವುದಿಲ್ಲ. ಅನುಮಾನ ಬಂದು ಐತಾಳರು ವಾಸುದೇವಯ್ಯನವರ ತಮ್ಮನ ಬಳಿ ವಿಚಾರಿಸಿದಾ, ನಿಮ್ಮ ಮಗನಿಗೆ ಬೇರೆ ಮದುವೆಯನ್ನು ಮಾಡಬಹುದು ಎಂಬ ವಿಷಯವನ್ನು ಕೇಳಿದಾಗ ಐತಾಳರಿಗೆ ತುಂಬ ನೋವಾಗುತ್ತದೆ. ವಿಷಯ ಏನೆಂದು ವಿಚಾರಿಸಿದಾಗ ನಾಗವೇಣಿಯು ಗರ್ಬಿಣಿಯಾಗಿದ್ದು, ಲಚ್ಚನಕೆಟ್ಟ ಸಹವಾಸದಿಂದ ನಾಗವೇಣಿಯ ಮೇಲೆ ಪರಿಣಾಮ ಬೀರಿ ಗರ್ಭಪಾತವಾಗಿ ಕಾಯಿಲೆಗೆ ಗುರಿಯಾಗಿದ್ದಾಳೆ. ನಿಮ್ಮ ಮಗ ತನ್ನ ಕಾಯಿಲೆಯನ್ನು ನಾಗವೇಣಿಗೆ ಅಂಟಿಸಿದ್ದಾನೆ. ಇಂತಹವನ್ನು ನಮಗೆ ಬೇಡ ಎಂದು ವಕೀಲರು

ಸ್ಪಷ್ಟವಾಗಿ ತಿಳಿಸಿದರು. ಈ ಸನ್ನಿವೇಶವು ಕಾದಂಬರಿಯ ತೀರುವಿನಲ್ಲಿ ಬಹಳ ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಇದರಿಂದಾಚೆಗೆ ನಾಗವೇಣಿಯು ತುಂಬ ಕಷ್ಟಗಳನ್ನು ಅನುಭವಿಸುತ್ತಾಳೆ ಮಾವನು ಸಾಯುವ ಕ್ಷಣದಲ್ಲಿ ಅತ್ತಿರದಲ್ಲಿ ಉಳಿಯುತ್ತಾಳೆ. ಸತ್ತನಂತರ ಮನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾಳೆ. ಒಬ್ಬ ಗಂಡು ಮಗುವಿನಂತೆ ಮನೆಯನ್ನು ನಿಬಾಯಿಸುತ್ತಾಳೆ. ನಾಗವೇಣಿಯು ಲಚ್ಚನನ್ನು ನಿರ್ಲಕ್ಷಿಸುತ್ತಾಳಾದರೂ ಪ್ರಕೃತಿ ಸಹಜವಾಗಿ ಕಾಮಕ್ಕೆ ಸೋಲುತ್ತಾಳೆ. ಸೋಲುಗಳೆ ಅವಳ ಜೀವನ್ದ ದಿಕ್ಕನೆ ಬದಲಾಯಿಸುತ್ತವೆ. ಕಾದಂಬರಿಯ ಬೆಳವಣಿಗೆಗೆ ಈ ಸನ್ನಿವೇಶ ಬಹಳ ಮುಖ್ಯವಾದ ಅಂಶವಾಗಿದೆ. ನಾಗವೇಣಿಯು ಗಂಡನಿಂದ ಎಲ್ಲಾ ಸುಖ ಸಂತೋಷಗಳನ್ನು ಕಳೆದುಕೊಳ್ಳುತ್ತಾಳೆ. ಆದರೆ ಕೊನೆಯಲ್ಲಿ ಮಗನಿಂದ ನೆಮ್ಮದಿಯನ್ನೇ ಕಾಣುತ್ತಾಳೆ.

ಲಚ್ಚ ಮತ್ತು ನಾಗವೇಣಿಯರ ಪುನರ್ ಸಮಾಗಮ

ನಾಗವೇಣಿಯು ಸತ್ಯಭಾಮೆ ಮತ್ತು ಸರಸೋತಿಯನ್ನು ನೋಡಿಕೊಂಡು ಗಂಡನ ಮನೆಯಲ್ಲೆ ಇರಲು ನಿರ್ಧರಿಸುತ್ತಾಳೆ. ಸರಸೋತಿಗೆ ಸಾಯುವುದರೊಳಗಾಗಿ ಒಮ್ಮೆ ಕಾಶಿಗೆ ಹೋಗಿ ಬರಬೇಕೆಂಬ ಬಯಕೆಯನ್ನು ಹೊಂದಿರುತ್ತಾಳೆ. ಇದನ್ನು ತಿಳಿದ ನಾಗವೇಣಿಯು ತನ್ನ ತಂದೆಗೆ ವಿಷಯವನ್ನು ತಿಳಿಸಿ ಅವರ ಮೋಟರಿನಲ್ಲಿ ಹೋಗಲು ವ್ಯವಸ್ಥೆಯನ್ನು ಮಾಡಿಸುತ್ತಾಳೆ. ಹೋಗಿ ಬರುವ ವರೆಗು ತಾನೋಬ್ಬಳೆ ಮನೆಯಲ್ಲಿ ಇರುವುದಾಗಿ ತಿಳಿಸುತ್ತಾಳೆ. ಸರಸೋತಿ, ಪಾರೋತಿಯು ಬಚ್ಚನ ಹೆಂಡತಿಯನ್ನು ರಾತ್ರಿವೇಳೆ ಮನೆಯಲ್ಲಿ ಬಂದು ಮಲಗುವಂತೆ ಹೇಳು ಎಂದು ಹೇಳಿ ಎಲ್ಲರು ಕಾಶಿಗೆ ಹೊರಡುತ್ತಾರೆ. ಎಲ್ಲರನ್ನು ಹೊಳೆಯ ತನಕ ಬಿಟ್ಟು ಪುನಃ ಮನೆಗೆ ಬರುತ್ತಾಳೆ. ಯಾರೋ ಒಬ್ಬ ಅಪರಿಚಿತ ವ್ಯಕ್ತಿ ಹಳೆಯ ಅರಕುಬಟ್ಟೆ ಹಾಕಿಕೊಂಡು ಗಡ್ಡ, ತಲೆ ಕೂದಲನ್ನು ಬೆಳೆಸಿಕೊಂಡು ತಮ್ಮ ಮನೆಯ ಹತ್ತಿರ ಓಡಾಡುತ್ತಿರುವುದನ್ನು ನಾಗವೇಣಿ ನೋಡುತ್ತಾಳೆ ಅವರು ಯಾರೆಂದು ಅವಳಿಗೆ ಗುರುತ ಸಿಗದೆ ಇರುವ ಸ್ಥಿತಿಯಲ್ಲಿ ಅವಳ ಮುಂದೆ ಬಂದು ನಿಲ್ಲುತ್ತಾನೆ. ಆ ವ್ಯಕ್ತಿಯು ನಾಗವೇಣಿಯನ್ನು ನೋಡಿ ನಾನು ಯಾರೆಂದು ಗುರುತು ಸಿಗಲಿಲ್ಲವೆ ಎಂದು ಕೇಳಿದಾಗ ನಾಗವೇಣಿಯು ಧ್ವನಿಯಿಂದ ಆತ ಯಾರೆಂದು ಗುರುತಿಸುತ್ತಾಳೆ. ಆತ ತನ್ನ ಗಂಡನೆಂದು ತಿಳಿದು ಖುಷಿ ಪಡುತ್ತಾಳೆ. ಆತನ ಸ್ಥಿತಿಯನ್ನು ನೋಡಿ ಅಷ್ಟೇ ನೋವು ಆಗುತ್ತದೆ. ಲಚ್ಚನು ಇನ್ನು ಮುಂದೆ ಇಲ್ಲೆ ಇರುವುದಾಗಿ ತಿಳಿಸುತ್ತಾನೆ. ಮನೆಯಲ್ಲಿ ಪ್ರೀತಿಯಿಂದ ನಡೆದುಕೊಂಡು, ಗದ್ದೆಯಲ್ಲಿ ಕೆಲಸ ಮಾಡುತ್ತಾ ನಾಗವೇಣಿಯ ನಂಬಿಕೆ, ಪ್ರೀತಿಯನ್ನು ಗಳಿಸಲು ಮುಂದಾಗುತ್ತಾನೆ. "ಶರೀರದ

ಬಯಕೆಯು ಅವಳಿಗೆ ಹಲವು ದಿನಗಳ ಬಳಿಕ ಮರುಳು ಮಾಡಿತು"7 (ಪು. 234)ಪ್ರಕೃತಿಯ ಸಹಜ ಗುಣವಾದ ಸ್ಪರ್ಶಕ್ಕೆ, ಕಾಮಕ್ಕೆ ಸೋಲುತ್ತಾಳೆ.

ಮದುವೆಯ ಮೊದಲ ದಿನಗಳು ಮರಳಿ ಬಂದವೆಂದು ಸಂತೋಷ ಪಡುತ್ತಾಳೆ. ಮನಸ್ಸಿನಲ್ಲಿ ಅಂಜಿಕೆ ಇದ್ದರು ಗಂಡನಿಗೆ ಒಲಿಯುತ್ತಾಳೆ. ಆತನು ಸಹ ಈ ಕ್ಷಣಕ್ಕಾಗಿಯೇ ಕಾಯುತ್ತಾ ಕುಳಿತಿದ್ದ. ಇದರ ಫಲವಾಗಿ ನಾಗವೇಣಿಯು ಗರ್ಭಿಣಿಯಾಗುತ್ತಾಳೆ. ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಇದು ಲಚ್ಚ ಮತ್ತು ನಾಗವೇಣಿಯರ ಪುನರ್ ಸಮಾಗಮದ ಫಲ ಮಗುವಿಗೆ ತನ್ನ ಅಜ್ಜನ ಹೆಸರನ್ನೂ ನಾಮಕರಣ ಮಾಡಲಾಗುತ್ತದೆ. ಆದರೆ ಲಚ್ಚನಿಗೆ ಅದು ಇಷ್ಟವಿರಲಿಲ್ಲ. ಮಗುವಿಗೆ ನಾಮಕರಣ ಮಾಡಲು ಇಚ್ಚಿಸದೆ ಮುಂದೂಡುತ್ತಾ ಬರುತ್ತಾನೆ. ಕೊನೆಗೆ ನಾಗವೇಣಿಗೆ ಗಂಡನ ಆಸರೆ ತಪ್ಪಿದಾಗ ಈ ಮಗುವೆ ಆಸರೆಯಾಗಿ ನಿಲ್ಲುತ್ತದೆ. ಗಂಡನಿಂದ ಸಿದಗ ನೆಮ್ಮದಿ ಈ ಮಗುವಿನಿಂದ ದೊರೆಯುತ್ತದೆ. ಈ ಮಗುವಿನ ಜನನದಿಂದ ನಾಗವೇಣಿಯ ಜೀವನದ ದಿಕ್ಕುಗಳೆ ಬದಲಾಗುತ್ತದೆ.

ಲಚ್ಚನ ಹೆಸರಿಗೆ ಆಸ್ತಿಯ ವರ್ಗಾವಣೆ

ಐತಾಳರು ಪೌರೋಹಿತಿಕೆಯನ್ನು ಮಾಡಿಕೊಂಡು, ಪೂರ್ವಜರ ಆಸ್ತಿಯನ್ನು ಉಳಿಸಿಕೊಂಡು ತಾವು ಸಂಪಾದನೆ ಮಾಡಿದ ಹಣದಿಂದ ಆಸ್ತಿಯನ್ನು ಮಾಡಿದ್ದರು.ಆಸ್ತಿಯ ವಾರಸುದಾರ ಬೇಕು. ಜೊತೆಗೆವಂಶೋದ್ದಾರಕನು ಬೇಕು. ಗಂಡು ಮಕ್ಕಳಿಲ್ಲದ ಜೀವಕ್ಕೆ ಮೋಕ್ಷವಿಲ್ಲವೆಂದು ಐತಾಳರು ಮಕ್ಕಳಿಗಾಗಿ ಎರಡನೇ ಮದುವೆ ಮಾಡಿಕೊಳ್ಳುತ್ತಾರೆ.ಇದರ ಫಲವಾಗಿ ಲಚ್ಚನು ಜನಿಸುತ್ತಾನೆ. ಐತಾಳರು ಲಚ್ಚನ ಮೇಲೆ ಇಟ್ಟಿದ ನಂಬಿಕೆಯನ್ನು ಬೆಳೆಯುತ್ತಾ ಕಳೆದು ಕೊಳ್ಳುತ್ತಾನೆ. ಮದುವೆ ಆದ ಮೇಲೆ ಸರಿಯಾಗುತ್ತಾನೆ ಎಂದು ತಿಳಿದು ವಕೀಲರ ಮಗಳನ್ನು ತಂದು ವಿವಾಹ ಮಾಡುತ್ತಾರೆ. ಕೆಟ್ಟ ಚಟಗಳಿಗೆ ಬಲಿಯಾಗಿ ಹಾಳಾಗಿದ್ದ ಲಚ್ಚನು ಮದುವೆ ಮಾಡಿದರು ಸುದಾರಿಸಲಿಲ್ಲ. ನಾಗವೇಣಿಗೆ ಈತನಿಂದ ತೊಂದರೆಯ ಮೇಲೆ ತೊಂದರೆಯಾಗುತ್ತಿತ್ತು. ವಕೀಲರು ಲಚ್ಚನನ್ನು ತಮ್ಮ ಮಗಳಿಂದ ದೂರ ಇರಿಸಿದರು.ಈ ವಿಷಯ ತಿಳಿದ ಐತಾಳರು ಕಾರಣವನ್ನು ಹುಡುಕಿದಾಗ ಲಚ್ಚನ ದುರ್ವತನೆ ಇದಕ್ಕೆ ಕಾರಣವೆಂದು ತಿಳಿಯುತ್ತದೆ. ಕೊನೆಯ ದಿನಗಳಲ್ಲಿ ಐತಾಳರು ತಮ್ಮ ಸೊಸೆಯನ್ನು ನೋಡಬೇಕೆಂದು ತಿಳಿಸಿ ವಕೀಲರಿಗೆ ಕಾಗದ ಬರೆಯುತ್ತಾರೆ. ಅದರಂತೆಯೆ ನಾಗವೇಣಿ ಮಾವನನ್ನು ನೋಡಲು ತಂದೆಯ ಜೊತೆಯಲ್ಲಿ ಬರುತ್ತಾಳೆ. ಐತಾಳರು ಸೊಸೆಯನ್ನು ನೋಡಿ ತನ್ನಿಂದಲೆ ನಿನ್ನ ಜೀವನ ಹೀಗಾಯಿತು ಎಂದು ಹೇಳುತ್ತಾರೆ.

ಅದನ್ನು ತಾನೇ ಸರಿ ಪಡಿಸುತ್ತೇನೆ ಎಂದು ತಿಳಿಸಿ ಐತಾಳರು ತಮ್ಮ ಹೆಸರಿನಲ್ಲಿದ ಆಸ್ತಿಯಲ್ಲಿ ಮುಕ್ಕಾಲನ್ನು ನಾಗವೇಣಿಯ ಹೆಸರಿಗೆ ಬರೆಯುತ್ತಾರೆ, ಮಿಕ್ಕ ಕಾಲು ಭಾಗವನ್ನು ಮಗಳಾದ ಸುಬ್ಬಿಯ ಹೆಸರಿಗೆ ಬರೆಯುತ್ತಾರೆ. ಸೊಸೆಯ ಜೀವನಕ್ಕೆ ಮಗ ಆಧಾರವಾಗಿ ನಿಲ್ಲದಾಗ ಆಸ್ತಿಯಾದರು ಕೊನೆಗೆ ಸೊಸೆಗೆ ಆದಾರವಾಗಲೆಂದು, ತಮ್ಮ ಮಗನನ್ನು ನಂಬಿಬಂದ ನಾಗವೇಣಿಗೆ ಮೋಸವಾಗಬಾರದೆಂದು ಐತಾಳರು ಆಸ್ತಿಯನ್ನು ನಾಗವೇಣಿಯ ಹೆಸರಿಗೆ ಬರೆಯುತ್ತಾರೆ. ಈ ವಿಷಯ ತಿಳಿದ ಲಚ್ಚನು ತಂದೆಯ ಮೇಲೆ ಇನ್ನಷ್ಟು ದ್ವೇಷವನ್ನು ಬೆಳೆಸಿಕೊಳ್ಳುತ್ತಾನೆ. ಕಾಲಾನಂತರ ಐತಾಳರು ಕೊನೆಯುಸಿರೆಳೆಯುತ್ತಾರೆ. ಹಲವು ತಿಂಗಳ ನಂತರ ಲಚ್ಚ ಮರಳಿ ಮನೆಗೆ ಬರುತ್ತಾನೆ ತನ್ನಲ್ಲಿ ಬದಲಾವಣೆಯಾಗಿದೆ ಎಂದು ತೋರಿಸಿಕೊಳ್ಳಲು ಮನೆಯಲ್ಲಿ ಎಲ್ಲರ ಮೆಚ್ಚುಗೆ ಪಡೆಯಲು ಮುಂದಾಗುತ್ತಾನೆ. ಮನೆಯ ಜವಾಬ್ದಾರಿಯನ್ನು ತೆಗೆದುಕೊಂಡು ಆ ವರ್ಷ ವ್ಯವಸಾಯವನ್ನು ಚೆನ್ನಾಗಿ ಮಾಡುತ್ತಾನೆ. ಮನೆಯವರ ನಂಬಿಕೆ ವಿಶ್ವಾಸವನ್ನು ಗಳಿಸುತ್ತಾನೆ. ಮನೆಯವರೆಲ್ಲ ಆತನ ಬದಲಾವಣೆಯನ್ನು ನಿಜವೆಂದು ನಂಬುತ್ತಾರೆ. ಹಾಗೆಯೇ ನಾಗವೇಣಿಯು ನಂಬುತ್ತಾಳೆ. ಈ ಸಂಧರ್ಭವನ್ನು ಬಳಸಿಕೊಂಡು ಹೋಗಿ ಆಕೆಯ ಹೆಸರಿನಲ್ಲಿದ್ದ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾಹಿಸಿಕೊಳ್ಳುತ್ತಾನೆ. ಮನೆಯಲ್ಲಿ ಯಾರಿಗೂ ತಿಳಿಯಬಾರದೆಂದು ಹೇಳುತ್ತಾನೆ. ತನ್ನ ಗಂಡನ ಬದಲಾವಣೆಯನ್ನು ನೋಡಿ ಈಗಲಾದರು ಒಳ್ಳೆಯ ಬುದ್ದಿ ಬಂದಿತಲ್ಲ ಎಂದು ತಿಳಿದು ಆಸ್ತಿಯ ವರ್ಗಾವಣೆಯ ಬಗ್ಗೆ ಮನೆಯಲ್ಲಿ ತಿಳಿಸುವುದಿಲ್ಲ. ಕೆಲವು ದಿನಗಳ ನಂತರ ಪಟ್ಟಣಕ್ಕೆ ಹೋದ ಲಚ್ಚನ್ನು ಕೆಲವು ತಿಂಗಳಾದರು ಮನೆಗೆ ಬರುವುದಿಲ್ಲ.

ಲಚ್ಚನು ಊರಿಂದ ಹೊರಡುವಾಗ ಆಸ್ತಿ ಎಲ್ಲವನ್ನು ಉಡುಪಿಯ ಶ್ರೀಮಂತರಿಗೆ 8000ರಕ್ಕೆ ಮಾರಿ ಹೋಗಿರುತ್ತಾನೆ. ಐತಾಳರು ನಾಗವೇಣಿಯ ಹೆಸರಿಗೆ ಆಸ್ತಿಯನ್ನು ಬರೆದದ್ದು ಮಗನು ಆ ಆಸ್ತಿಯನ್ನು ಉಳಿಸಿಕೊಳ್ಳುವುದಿಲ್ಲ ಎಂಬ ಉದ್ದೇಶದಿಂದ ಆದರೆ ನಾಗವೇಣಿಯು ಗಂಡನ ಪ್ರೀತಿಯ ಮಾತಿಗೆ ಮರುಳಾಗಿ ಆಸ್ತಿಯನ್ನು ವರ್ಗಹಿಸುತ್ತಾಳೆ. ಆದರೆ ಲಚ್ಚನು ಯಾರ ನಂಬಿಕೆಯನ್ನು ಉಳಿಸಿಕೊಳ್ಳದೆ ಅವರ ನಂಬಿಕೆಗೆ ಮೋಸ ಮಾಡುತ್ತಾನೆ. ಈ ಆಸ್ತಿಯ ವರ್ಗಾವಣೆಯ ಸನ್ನಿವೇಶವು ಕಾದಂಬರಿಯ ಬೆಳವಣಿಗೆ ಸಹಕಾರಿಯಾಗಿದೆ. ಇದರಿಂದ ನಾಗವೇಣಿಯು ಕಡು ಬಡತನವನ್ನು ನೋಡುವ ಪರಿಸ್ಥಿತಿ ಉಂಟಾಗುತ್ತದೆ.

ನಾಗವೇಣಿಯ ಆತ್ಮಹತ್ಯೆಯ ಪ್ರಸಂಗ

ನಾಗವೇಣಿಯು ತನ್ನ ಹೆಸರಿನಲ್ಲಿದ ಆಸ್ತಿಯನ್ನು ಗಂಡನನ್ನು ನಂಬಿ ಆತನ ಹೆಸರಿಗೆ ಬರೆಯುತ್ತಾಳೆ ಒಳ್ಳೆಯವನಂತ ಮನೆಯ ಎಲ್ಲರ ಪ್ರೀತಿಯನ್ನು ಗಳಿಸಿದ್ದು ಆಸ್ತಿಯನ್ನು ಪುನಃ ತನ್ನ ಹೆಸರಿಗೆ ಬರುವಂತೆ ಮಾಡಲು ಲಚ್ಚನಿಗೆ ತಂದೆಯ ಬಗ್ಗೆ ಮೊದಲಿಂದಲು ಕೋಪ, ಇವನು ಕೇಳಿದಾಗಲೆಲ್ಲ ಯಾಕೆ? ಏನು? ಎಂದು ಪ್ರಶ್ನೆ ಮಾಡಿ ಅಗತ್ಯಕ್ಕೆ ಬೇಕಾದಷ್ಟು ಮಾತ್ರ ಹಣವನ್ನು ಕೊಡುತ್ತಿದ್ದರು. ಲಚ್ಚನಿಗೆ ಅಪ್ಪನ ಹಣ ಮೋಜು ಮಾಡಲು ಸಾಲದೆ ಅವರನ್ನು ದ್ವೇಷಿಸುತ್ತಿದ್ದ.ಈ ದ್ವೇಷಕ್ಕೆ ತುಪ್ಪ ಸುರಿಯುತ್ತಿದ್ದವರು ಶೀನಮಯ್ಯ ಐತಾಳರು ಆಸ್ತಿಯನ್ನು ತನ್ನ ಹೆಸರಿಗೆ ಬರೆಯದೆ ಸೊಸೆಯ ಹೆಸರಿಗೆ ಬರೆದಿದ್ದಾರೆಂದು ತಂದೆಯ ಬಗ್ಗೆ ದ್ವೇಷ ಕಾರುತ್ತಾನೆ.

ಲಚ್ಚನು ಈ ಆಸ್ತಿಯನ್ನು ಪುನಃ ಪಡೆಯಲು ಮನೆಯಲ್ಲಿ ನಂಬಿಕಸ್ತನಂತೆ ನಟಿಸುತ್ತಾನೆ ಇದರಿಂದ ಆಸ್ತಿಯು ಲಚ್ಚನ ಹೆಸರಿಗೆ ವರ್ಗವಾಗುತ್ತದೆ. ಆದರೆ ಆಸ್ತಿಯನ್ನು ಹೆಚ್ಚು ಸಮಯ ಉಳಿಸಿಕೊಳ್ಳುವುದಿಲ್ಲ. ಆಸ್ತಿಯ ವರ್ಗಾವಣೆಯ ವಿಷಯ ಮನೆಯಲ್ಲಿ ಯಾರಿಗೂ ತಿಳಿದಿರುವುದಿಲ್ಲ.

ಆಸ್ತಿಯ ಮಾಲಿಕರಿಂದ ಲಚ್ಚನು ಆಸ್ತಿಯನ್ನು ಮಾರಿರುವ ವಿಷಯ ಮನೆಯಲ್ಲಿರುವವರಿಗೆ ತಿಳಿಯುತ್ತದೆ. ಇದರಿಂದ ಬೇಸರಗೊಂಡ ಸರಸೋತಿ, ಸತ್ಯಭಾಮೆಯರು, ನಾಗವೇಣಿಯನ್ನು ದೊಡ್ಡವರಿಗೆ ಒಂದು ಮಾತನ್ನು ತಿಳಿಸದೆ ಆಸ್ತಿಯನ್ನು ಲಚ್ಚನ ಹೆಸರಿಗೆ ವರ್ಗಾಹಿಸಿದ್ದು ಸರಿಯಲ್ಲ ಎಂದು ಬೈಯುತ್ತಾರೆ. ಸರಸೋತಿಯು ನಮಗೆ ತಿಳಿಸದೆ ನೀನು ಈ ರೀತಿ ಮಾಡಿದ್ದು ಸರಿಯಲ್ಲ, ನೀನು ವಿದ್ಯಾವಂತೆಯಾಗಿ ನಡೆದುಕೊಂಡ ರೀತಿ ತಪ್ಪೆಂದು ಹೇಳುತ್ತಾಳೆ.

ನಿನ್ನ ದುಡುಕು ತನದಿಂದ ಎಲ್ಲವನ್ನು ಕಳೆದುಕೊಂಡು ಬೀದಿಗೆ ಬಿದ್ದೆವಲ್ಲ ಎಂದು ಸರಸೋತಿ ಕೊರಗುತ್ತಾಳೆ. ಆಗ ನಾಗವೇಣಿಗೆ ತಾನು ಎಷ್ಟೆ ಬುದ್ಧಿವಂತೆಯಾದರು ಪದೆ ಪದೆ ಸೋಲುತ್ತಿರುವುದ ಆಕೆಗೂ ನಾಚಿಕೆಯ ವಿಷಯವಾಗಿತ್ತು. ಮನೆಯವರ ಕಷ್ಟಕ್ಕೆ ತಾನೆ ಕಾರಣಳಾದನೆಂದು ಮಾವನ ನಂಬಿಕೆಯನ್ನು ಉಳಿಸಿಕೊಳ್ಳಲಾಗಲಿಲ್ಲವೆಂದು ಮರುಗುತ್ತಾಳೆ ಗಂಡನನ್ನು ನಂಬಿದಕ್ಕೆ ಕೊನೆಗೆ ತನಗೆ ಸಿಕ್ಕಿದ್ದು ಅವಮಾನ ಎಂದು ಯೋಚಿಸಿ ಒಂದು ನಿರ್ಧಾರಕ್ಕೆ ಬರುತ್ತಾಳೆ. ಮನೆಯಲ್ಲಿ ಎಲ್ಲರು ಮಲಗಿರುವಾಗ ನಾಗವೇಣಿ ತಾನು ಸಾಯುವುದೆ ಸಮಸ್ಯೆಗೆಲ್ಲಾ ಪರಿಹಾರ ಎಂದು ತಿಳಿದು ಸಾಯಲು ಮನೆಯಿಂದ ಹೊರಗಡೆ ನಡೆಯುತ್ತಾಳೆ.

ನಾಗವೇಣಿಯು ತನ್ನ ಪಯಣ ಇಲ್ಲಿಗೆ ಮುಗಿಯಿತುಎಂದು ಮನದಲ್ಲಿ ನೆನೆಯುತ್ತಾ ಅಳುವೆಯ ಮರಳ ದಂಡೆಯಮೇಲೆ ನಿಂತು ಎಲ್ಲವನ್ನೂ ನೆನೆಸಿಕೊಳ್ಳುತ್ತಾ ಇದ್ದಾಳೆ. ಒಂದು ಕ್ಷಣ ಮಗುವಿನ ಕಡೆ ಮನಸ್ಸು ಅರಿಯಿತು. ಮನೆಯಲ್ಲಿರುವ ವಯಸ್ಸಾದ ಸತ್ಯಭಾಮೆ, ಕಣ್ಣು ಸರಿಯಾಗಿ

ಕಾಣದ ಹಣ್ಣು ಮುದುಕಿಯಾಗಿರುವ ಸರಸೋತಿ ಇವರನ್ನೆಲ್ಲ ಒಮ್ಮೆ ಮನದಲ್ಲಿ ನೆನೆದು ಅಳುವೆಗೆ ಹಾರಲು ಸಿದ್ದಳಾಗಿ ನಿಂತಿದ್ದಳು. ಆ ಸಂಧರ್ಭದಲ್ಲಿ ನಾಯಿಯೊಂದು ಕೂಗುತ್ತಾ ಬರುತ್ತಿರುವುದು ಅವರ ಹಿಂದೆ ಯಾರೋ ಮನುಷ್ಯರು ಬರುತ್ತಿರುವುದು ತಿಳಿದ ನಾಗವೇಣಿ ಇನ್ನು ತಡಮಾಡದೆ ಅಳುವೆಗೆ ಹಾರಲು ನಿರ್ಧರಿಸಿ ನೀರಿಗೆ ನೆಗೆದಳು. ಇದನ್ನು ಕಂಡ ಆ ವ್ಯಕ್ತಿಗಳು ಅವಳನ್ನು ನೀರಿನಿಂದ ಮೇಲೆ ಎತ್ತಿದ್ದರು.ಆ ಸಮಯದಲ್ಲಿ ಅವರು ಏಡಿಗಳನ್ನು ಹಿಡಿಯಲು ಬರುತ್ತಿದ್ದರು.

ನಾಗವೇಣಿಯು ಆ ವ್ಯಕ್ತಿಗಳಿಂದಾಗಿ ಬದುಕುಳಿದಳು. ಅಲ್ಲೆ ಪಕ್ಕದಲ್ಲಿದ ಬೆಸ್ತರ ಮುದಕಿ ನಾಗವೇಣಿಯನ್ನು ಗುರುತಿಸಿದಳು. ನಾಗವೇಣಿಯು ತನನ್ನು ಅಲ್ಲೆ ತೆಗೆದುಕೊಂಡು ಹೋಗಿ ಹಾಕಿ ನಾನು ಸುಖವಾಗಿ ಸಾಯಬೇಕು, ನನ್ನನ್ನು ಏಕೆ? ಬದುಕಿಸಿದಿರಿ ಎಂದು ಬೊಬ್ಬಿರಿದು ಅತ್ತಳು ಮನೆಯವರಿಗೆ ಬೆಳಗಿನ ಜಾವದಲ್ಲಿ ಮಗು ಅಮ್ಮ ಎಂದು ಅತ್ತಾಗಲೆ ನಾಗವೇಣಿ ಮನೆಯಲ್ಲಿಲ್ಲ ಎಂದು ತಿಳಿಯಿತು. ನಂತರ ಆಕೆಯ ಆತ್ಮಹತ್ಯೆಯೆ ವಿಷಯವು ತಿಳಿಯಿತು. ಆತ್ಮಹತ್ಯೆಯಿಂದ ಪಾರಾದ ನಾಗವೇಣಿಯ ಜೀವನದ ಗುರಿಗಳೆ ಬದಲಾದವು. ಈ ಸನ್ನಿವೇಶ ಕಾದಂಬರಿಯ ಬೆಳವಣಿಗೆಗೆ ಸಹಕಾರಿಯಾಗಿದೆ.

ಸತ್ಯಭಾಮೆಯ ಸಾವು

ಸತಭಾಮೆಯು ಐತಾಳರ ಎರಡನೆಯ ಹೆಂಡತಿ ಐತಾಳರು ಸತ್ತ ನಂತರ ಮನೆಯ ಆರ್ಥಿಕ ಪರಿಸ್ಥಿತಿಯಲ್ಲಿ ಏರು-ಪೇರುಗಳಾದವು. ಮನೆಯ ಜವಾಬ್ದಾರಿಯನ್ನು ನಾಗವೇಣಿ ವಹಿಸಿಕೊಂಡು ಇಬ್ಬರ ಹೆಂಗಸರನ್ನು ಪ್ರೀತಿ ಆದರದಿಂದ ನೋಡಿಕೊಳ್ಳುತ್ತಿದ್ದಳು. ಸಾಲೀ ಗ್ರಾಮದ ಜಾತ್ರೆ ಬಂತು, ಅಲ್ಲಿಗೆ ಮನೆಯವರೆಲ್ಲ ಹೋಗಿ ಬಂದರು.ಆದರೆ ನಾಗವೇಣಿಗೆ ತಾನು ಗರ್ಬಿಣಿಯಾದಾಗ ಗಂಡನ ಜೊತೆಯಲ್ಲಿ ಹೋದ ನೆನಪು ಮರುಕಳಿಸಿತು. ಈ ಸಾರಿ ಜಾತ್ರೆಗೆ ತನ್ನ ಮಗ ಹಾಗೂ ಅತ್ತೆಯ ಜೊತೆ ಹೋಗಿ ಬಂದಳು. ಊರಿನ ಜಾತ್ರೆ ಆಯಿತು, ಜಾತ್ರೆ ಮುಗಿದರು ಅದರ ಮಾತು ಮುಗಿಯಲಿಲ್ಲ. ಜಾತ್ರೆಯ ಮಾತುಗಳು ಆಡಿ-ಆಡಿ ಮುಗಿದ ಮರುದಿನ ತದ್ವಿಪರೀತವಾದ ಮಾತೆ ಊರಿಗೆ ಶುದ್ದಿ ರೂಪದಲ್ಲಿ ಬರತೊಡಗಿತು. ಕೋಡಿ, ಐರೋಡಿ, ಮಾಣೂರು, ದೂರದ ಉಡುಪಿ ಹೀಗೆ ತಾವು ಕೇಳಿದ ಎಲ್ಲಾ ಊರುಗಳಿಂದಲೂ ಸಾವಿನ ಸುರಿ ಮಳೆಯೆ ಬಡಿಯುತ್ತಿದೆ ಎಂಬ ವಾರ್ತೆಯು ಕಿವಿಗೆ ಬರತೊಡಗಿತು. ಏನೋ ಒಂದು ಜ್ವರವಂತೆ, ಎಲ್ಲೋ ಏನೋ ಬಂದಿದೆಯಂತೆ, ಮನೆಗೆ ಮನೆಯನ್ನೆ ಕೊಂಡು ಹೋಗುತ್ತಿದೆಯಂತೆ ಊರಿನ ಜನರು ಮಾತನಾಡಿಕೊಳ್ಳುತ್ತಿದ್ದರು. ಎಲ್ಲಾರು ಒಬ್ಬರು ಇನ್ನೊಬ್ಬರನ್ನು ಕೇಳಿದರು. ಎಂಥಾ ಜ್ವರ?,

ಎಂಥಾ ಬೇನೆ? ಎಂದರೆ ಗಾಣ ಗುದ್ದಿಗೆಯಂತೆ ಎಂದರು. ನಾಗವೇಣಿಯು ಆ ತನಕ ಅಂತಹ ಬೇನೆಯ ಹೆಸರನ್ನು ಕೇಳಿದವಳಲ್ಲ. ಈ ವಿಷಯ ಕೇಳಿದ ಎರಡೆ ದಿನಗಳಲ್ಲಿ ಸೂರನು ಜ್ವರದಿಂದ ಹಾಸಿಗೆ ಹಿಡಿದದ್ದು ಕೆರೆಗೆ ಬಂದ ಅವನ ಸೊಸೆಯಿಂದ ತಿಳಿಯಿತು. ಸೂರನ ಮನೆಯಲ್ಲಿ ಎಲ್ಲರಿಗೂ ಜ್ವರ ಬಂದು ಸೂರನು ಸತ್ತು ಹೋದನು. ಈ ವಿಷಯವನ್ನು ತಿಳಿದ ಸತ್ಯಭಾಮೆ ಅಂಜಿ ಮನೆಗೆ ಹೋಡಿ ಬಂದಳು. ಆ ರಾತ್ರಿ ಬೆಳಗಾಗುವಾಗ ಸತ್ಯಭಾಮೆಯ ಮೈಯೆಲ್ಲ ಜ್ವರದಿಂದ ಕುದಿಯುತ್ತಿತ್ತು. ಆಗ ನಾಗವೇಣಿ ಕಂಗಾಲಾದಳು. ಮನೆಯ ಹಿತ್ತಲಿನ ಸೊಪ್ಪನ್ನು ಬೇಯಿಸಿ ಕಷಾಯವಿರಿಸಿದಳು. ಯಾರ ಮನೆಯಿಂದಲಾದರೂ ಮದ್ದನ್ನು ತರುವ ಎಂದರೆ ಎಲ್ಲರ ಮನೆಯಲ್ಲು ಜ್ವರದಿಂದ ನರಳುತ್ತಿರುವವರೆ. ಸಂಜೆ ಅವಳ ಮಗ ರಾಮನು ಜ್ವರದಿಂದ ಮಲಗಿದ, ಎರಡು ಹಾಸಿಗೆಗಳ ನಡುವೆ ಅವಳು ಜಾನಿಸುತ್ತಾ ಕುಳಿತಳು. ಮದ್ದು ಎಂದು ಮಜ್ಜಿಗೆ ಹುಲ್ಲಿನ ಕಷಾಯ ಮಾಡಿಕೊಟ್ಟಳು. ರಾತ್ರಿಯೆಲ್ಲ ಬೇನೆ ಹಿಡಿದವರ ಕಾವಲಿಗೆ ನಾಗವೇಣಿ ಕೂತರೆ ಅವಳ ಮೈ ಕೂಡ ಬೆಚ್ಚಗಾಯಿತು. ಅವಳು ಕೂಡ ಕಷಾಯ ಕುಡಿದು ಮಲಗಿದಳು. ಬೆಳಕು ಹರಿಯುವಾಗ ಒಬ್ಬರನೊಬ್ಬರು ಮತನಾಡಿಸುವಂತಿರಲಿಲ್ಲ. ರಾಮನಿಗೆ ಜ್ವರದಿಂದ ಸ್ಮೃತಿ ಇರಲಿಲ್ಲ, ಸತ್ಯಭಾಮೆಯ ಸೊಲ್ಲು ಕೇಳಿಸುತ್ತಿರಲಿಲ್ಲ. ನಾಗವೇಣಿಯು ಮಲಗಿದ್ದಲ್ಲೆ ಇದ್ದಳು.

ದಿನಗಳು ಹೇಗೆ ಕಳೆದವೋ, ಸಮಯ ಹೇಗೆ ಸಾಗಿತೋ ಎಂದು ಮಲಗಿದ್ದವರಿಗಿಂತು ತಿಳಿಯದು. ನಾಗವೇಣಿಯು ತನ್ನ ಅರಿವನ್ನು ತಾನು ತಿಳಿಯುವಾಗ ಎರಡು ದಿನ ಕಳೆದಿತ್ತು. ಮಗುವಿನ ಹಾಗೂ ಮನೆಯ ನೆನಪು ಇರಲಿಲ್ಲ. ಮೂರನೆ ದಿನ ಅವಳಿಗೆ ತಿಳಿವು ಬಂದಿತು. ನಾಲ್ಕುನೆ ದಿನ ಕಣ್ಣು ತೆರೆಯುವಾಗ ಜ್ವರ ಇಳಿದಿತ್ತು. ಅವಳ ಚಿಕ್ಕಪ್ಪ ಬಾಯಿಗೆ ಗಂಜಿ ಸುರಿಯುತ್ತಿದ್ದರು. ಚಿಕ್ಕಪ್ಪ ನಾನೆಲ್ಲಿದ್ದೇನೆ? ಎಂದು ಕೇಳಿದಳು. ನಾರಾಯಣಯ್ಯನವರು ನಿಮ್ಮ ಮನೆಯಲ್ಲಿಯೆ ಎಂದರು. ಮಗು ಮತ್ತೆ ಅತ್ತೆ ಬಗ್ಗೆ ವಿಚಾರಿಸಿದಳು. ಮಗು ನಮ್ಮ ಮನೆಯಲ್ಲಿ ಇದೆ ಎಂದರು. ಅತ್ತೆ ಎಲ್ಲಿ ಯಾರು ಕೊಂಡು ಹೋದರು ಎಂದು ಕೇಳಿದಳು. ನಾರಾಯಣಯ್ಯನವರು ದೇವರು ಕೊಂಡು ಹೋದರು ಎಂದರು. ನಾಗವೇಣಿಯ ರೋದನ ನಿಲ್ಲದಾಯಿತು. ಧಣಿವಾಗುತ್ತದೆ ಮಲಗು ಸ್ವಲ್ಪ, ಸತ್ತವರು ತಿರುಗಿ ಬರುತ್ತಾರೆಯೆ ಎಂದು ಚಿಕ್ಕಪ್ಪ ಎಲ್ಲಿಲ್ಲದ ಸಮಾಧಾನ ಹೇಳಬೇಕಾಯಿತು. ಸತ್ಯಭಾಮೆಯ ಸಾವಿನಿಂದ ಕಾದಂಬರಿಯು ತಿರುವನ್ನು ತೆಗೆದುಕೊಳ್ಳುತ್ತದೆ. ಕಾದಂಬರಿಯ ಬೆಳವಣಿಗೆಗೆ ಈ ಸನ್ನಿವೇಶ ಸಹಕಾರಿಯಾಗಿದೆ.

ನಾಗವೇಣಿಯ ತಂದೆಯ ಸಾವು

ನಾಗವೇಣಿಯ ಮಾವನು ತೀರಿದ ನಂತರ ಐರೋಡಿಯಲ್ಲೆ ಉಳಿಯಲು ಬಯಸುತ್ತಾಳೆ ಕೆಲವು ತಿಂಗಳ ನಂತರ ಸರಸೋತಿಯು ಸಾಯುತ್ತಾಳೆ. ಬಹಳ ಕಷ್ಟದಿಂದ ಜೀವನವನ್ನು ನಾಗವೇಣಿಯು ನಡೆಸುತ್ತಿರುತ್ತಾಳೆ. ಸತ್ಯಭಾಮೆಯು ನಾಗವೇಣಿಯುನ್ನು ಆಕೆಯ ತಂದೆಯ ಮನೆಗೆ ಹೋಗಲು ಎಷ್ಟು ಹೇಳಿದರು ನಿಮ್ಮೆಲ್ಲರನ್ನು ಬಿಟ್ಟು ಹೋಗುವುದಿಲ್ಲವೆಂದು ಹಠಮಾಡಿ ಇಲ್ಲೆ ಉಳಿಯುತ್ತಾಳೆ. ಹಲವು ತಿಂಗಳ ನಂತರ ಸತ್ಯಭಾಮೆಯು ಜ್ವರದಿಂದ ಸಾಯುತ್ತಾಳೆ. ನಂತರ ತನ್ನ ಮಗನಿಗೆ ವಿದ್ಯಾಭ್ಯಾಸ ಕೊಡಿಸುವ ಉದ್ದೇಶದಿಂದ ತಂದೆಯ ಮನೆಯನ್ನು ಸೇರುತ್ತಾಳೆ.

ಹೊಸತರಲ್ಲಿ ಎಲ್ಲವು ಚೆನ್ನಾಗಿತ್ತು, ತಂದೆಯು ಬದುಕಿರುವಷ್ಟು ದಿನ ಎಲ್ಲವು ಚೆನ್ನಾಗಿತ್ತು ಮಗನ ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತಿತ್ತು. ತಂದೆಯು ಸತ್ತ ನಂತರ ಅಣ್ಣಂದಿರ ಆಶ್ರಯದಲ್ಲಿ ಜೀವನ ನಡೆಸುತ್ತಿದ್ದಳು. ಅತ್ತಿಗೆಯರ ಚುಚ್ಚು ಮಾತಿನಿಂದ ಬಹಳ ಬೇಸರ ಮಾಡಿಕೊಂಡಿದ್ದಳು. ಅಣ್ಣಂದಿರು ಪ್ರೀತಿಯಿಂದ ನೋಡಿಕೊಂಡರು. ಅತ್ತಿಗೆಯರ ಪ್ರೀತಿಯಲ್ಲಿ ವೆತ್ಯಾಸವಾಗುತ್ತಿತ್ತು. ಮನಸ್ಸಿನ ಶಾಂತಿಗಾಗಿ ಚಿಕ್ಕಂದಿನಲ್ಲಿ ಕಲಿತು ಬಿಟ್ಟಿದ್ದ ಸಂಗೀತವನ್ನು ಪುನಃ ಪ್ರಾರಂಭಿಸಿದಳು. ಆದರು ಆಕೆಯ ಮನಸಿಗೆ ನೆಮ್ಮದಿಯು ಸಿಗುವುದಿಲ್ಲ. ಅದೆ ಸಮಯಕ್ಕೆ ನಾಗವೇಣಿಯ ಚಿಕ್ಕಪ್ಪನ ಮಗಳ ಮದುವೆಗೆಂದು ಐರೋಡಿಗೆ ತನ್ನ ತಾಯಿಯ ಜೊತೆ ಬಂದವಳು. ಪುನಃ ತನ್ನ ಅಣ್ಣಂದಿರ ಮನೆಗೆ ಹೋಗುವುದಿಲ್ಲ. ಬೇರೆಯವರ ಅಂಗಿನಲ್ಲಿರುವುದಕ್ಕಿಂತ ತನ್ನ ಮನೆಯಲ್ಲಿ ಸ್ವಾತಂತ್ರ್ಯವಾಗಿ ಇರಲು ನಾಗವೇಣಿಯು ಇಚ್ಚಿಸುತ್ತಾಳೆ. ನಾಗವೇಣಿಯ ತಂದೆಯ ಸಾವು ನಾಗವೇಣಿಯ ಜೀವನದ ಪಥವನ್ನು ಬದಲಾಯಿಸಿತು. ತಂದೆಯ ಮನೆಯಲ್ಲಿ ಊಟಕ್ಕೆ ಬಟ್ಟೆಗೆ ತೊಂದರೆ ಇರಲಿಲ್ಲ ಆದರೆ, ತಂದೆಯು ತೀರಿದ ಬಳಿಕ ನೆಮ್ಮದಿ, ಶಾಂತಿ ಉಳಿಯಲಿಲ್ಲ ಆದರೆ ಕೋಡಿಯ ಮನೆಯಲ್ಲಿ ಊಟಕ್ಕೆ ತೊಂದರೆ ಇದ್ದರು. ಮನಸ್ಸಿಗೆ ನೆಮ್ಮದಿ ಇತ್ತು. ನಾಗವೇಣಿಯ ತಂದೆಯ ಸಾವು ಆಕೆಯನ್ನು ಪುನಃ ಕೋಡಿಗೆ ಬರುವ ಹಾಗೆ ಮಾಡಿತು. ಈ ಘಟನೆಯ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ.

ಮೂರನೇ ತಲೆ ಮಾರಿನ ಪ್ರಮುಖ ಸನ್ನಿವೇಶಗಳು

ರಾಮನು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರ ಫಲ

ರಾಮನು ಹೆಚ್ಚಿನ ವಿದ್ಯಾಭ್ಯಾಸಕೆಂದು ಮುಂಬೈಗೆ ಹೋಗುತ್ತಾನೆ. ಅಲ್ಲಿ ಚಿಕ್ಕಮ್ಮನ ಮನೆಯಲ್ಲಿಯೇ ಉಳಿಯುತ್ತಾನೆ. ರಾಮನು ಚಿಕ್ಕಮ್ಮನ ಮನೆಯಲ್ಲಿ ಉಳಿಯಲು ಷರತ್ತುಗಳನ್ನು

ಹಾಕುತ್ತಾನೆ. ತಾನು ಇಲ್ಲಿ ಇರುವಷ್ಟು ದಿನ ಊಟ, ತಿಂಡಿಗೆ ಹಣವನ್ನು ಕೊಡುವುದಾಗಿ ಹೇಳುತ್ತಾನೆ. ಚಿಕ್ಕಮ್ಮ ಅದಕ್ಕೆ ಒಪ್ಪಿಕೊಳ್ಳುತ್ತಾಳೆ. ಮನಸ್ಸಿನಲ್ಲಿ ಇಷ್ಟವಿಲ್ಲದಿದ್ದರು ರಾಮನನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಒಪ್ಪಿಕೊಳ್ಳುತ್ತಾಳೆ. ರಾಮನು ವಿದ್ಯಾಭ್ಯಾಸದ ಜೊತೆಗೆ ಕೆಲವು ಮನೆಗಳನ್ನು ಮನೆ ಪಾಠಕ್ಕೆ ನೋಡಿಕೊಳ್ಳುತ್ತಾನೆ. ಅದರಿಂದ ಬಂದ ಹಣದಿಂದ ಊಟ ತಿಂಡಿಯ ಹಣವನ್ನು ಚಿಕ್ಕಮ್ಮನಿಗೆ ಕೊಡುತ್ತಿದ್ದ. ಚಿಕ್ಕಮ್ಮನು ಆ ಹಣವನ್ನು ರಾಮನಿಗೆ ತಿಳಿಯದ ಹಾಗೆ ನಾಗವೇಣಿಗೆ ಕಳುಹಿಸುತ್ತಿದ್ದಳು. ಮುಂಬೈಯಲ್ಲಿ ಸ್ವಾತಂತ್ರ್ಯದ ಕಾವು ಸ್ವಲ್ಪ ಸ್ವಲ್ಪ ಹೆಚ್ಚುತ್ತಿತ್ತು. ರಾಮನು ತನ್ನ ಸ್ನೇಹಿತ ರಾಜ ಮಣಿಯಿಂದ 'ಸಂಡರ್‌ಲೇಂಡನ' ಎಂಬ ಪುಸ್ತಕವನ್ನು ಓದಿದನ್ನು ತಲೆಯಲ್ಲಿ ಬಿ.ಎ. ಜೊತೆಗೆ ಭಾರತವೂ ನಲಿಯತೊಡಗಿತು. ಮಾತನಾಡುವ ಗೆಳೆಯರ ಜೊತೆ ಸೇರಿ ಪಾಲಿಟಿಕ್ಸ್‌ಗೆ ಕೈ ಹಾಕಿದ ಇಲ್ಲಿ ಸೇರುವ ಚಳುವಳಿ ಸಭೆಯಲ್ಲಿ ಪಾಲ್ಗೋಳ್ಳುತ್ತಿದ.

ಕಾಲೇಜಿನಲ್ಲಿ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಒಂದು ಕಡೆ ಸೇರಿಸಿ ಎಚ್ಚರದ ಮಾತುಗಳನ್ನು ಹಾಡಿದರು ರಾಜಕೀಯದ ಗದ್ದಲ ನಿಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ನಿಮ್ಮ ಕಾಲಿನ ಮೇಲೆ ನಿಂತು ಕಲಿತ ಮೇಲೆ ಹಿರಿಯರು ನಿಮ್ಮ ವಿದ್ಯೆಗೆ ಹಣ ಕೊಡುತ್ತಿರುವಾಗಲ್ಲ. ಇನ್ನೂ ಬೀಚು ಸಭೆಗಳಲ್ಲಿ ಯಾರು ಕಾಣಿಸಿಕೊಳ್ಳುತ್ತಾರೋ. ಅವರು ಸೆಲೆಕ್ಷನಿನ ಯೋಚನೆಯನ್ನು ಕೈಬಿಡಬೇಕಾಗುತ್ತದೆ ಎಂದು ಕಾಲೇಜಿನ ಅಧಿಕಾರಿಗಳು ಗದರಿಸಿದರು.ಮರುದಿನ ರಾಮನ ಮೆಚ್ಚಿನ ಪ್ರೋಫೆಸರ್ ಸಾಹೇಬರು ಅವನನ್ನು ಕರೆದು ನಿನ್ನಂಥ ಬುದ್ದಿವಂತ ವಿದ್ಯಾರ್ಥಿಗಳು ಹೀಗೆಲ್ಲ ರಾಜಕೀಯ ಭ್ರಮೆಗೆ ಬೀಳಬಾರದು ಎಂದು ಬುದ್ಧಿವಾದವನ್ನು ಹೇಳುತ್ತಾನೆ. ಆದರೆ ರಾಮನಿಗೆ ಚಳುವಳಿಯಲ್ಲಿ ಭಾಗವಹಿಸದೆ ಇರಲು ಸಾಧ್ಯವಾಗಲಿಲ್ಲ, ರಾಮನು ಕಾಲೇಜಿಗೆ ಹೋಗುವಾಗ ಪುಸ್ತಕಕ್ಕೆ ಕೈಕೊಡುವ ಬದಲು, ಉಪ್ಪಿಗೆ ಕೈಕೊಡುತ್ತಿದ್ದ. ಅವನಿಗೆ ಏನಾಯಿತೋ ಏನೋ ಆಗ, ಅದು ಅವನಿಗೂ ತಿಳಿಯದು, ನೂರಾರು ಜನರೊಡನೆ ಇವನು "'ಇಂಕಿಲಾಬ್ ಜಿಂದಾಬಾದ್' ಕೂಗಿದ, 'ಮಹಾತ್ಮ ಗಾಂಧಿಜೀಕಿ ಜೈ'" 8 (ಪು.334) ಎಂದ. ಅವನಿಗೆ ಎಚ್ಚರವಾಗುವಾಗ ಅವನ ತಲೆಗೆ ಬ್ಯಾಂಡೇಜನ್ನು ಕಟ್ಟಿದ್ದರು. ಆಸ್ಪತ್ರೆಯಲ್ಲಿ ಮಲಗಿದ್ದ. ಎರಡು ಮೂರು ದಿನಗಳಾದರು ರಾಮನ ಮನೆಗೆ ಬಾರದಿದ್ದಾಗ ಆತನ ಚಿಕ್ಕಮ್ಮನಿಗೆ ಚಿಂತೆಯಾಯಿತ್ತು.ಆತನ ಚಿಕ್ಕಪ್ಪ ಯಾರಿಂದಲೋ ರಾಮನು ಆಸ್ಪತ್ರೆಯಲ್ಲಿರುವ ವಿಷಯ ತಿಳಿದರು. ಆತನನ್ನು ಬೇಟಿ ಮಾಡಿದರು. ಈ ವಿಷಯ ನಿನ್ನ ತಾಯಿಗೆ ತಿಳಿದರೆ ಆಕೆಗೆ ಎಷ್ಟು ನೋವಾಗುತ್ತದೆ ಎಂದು ಬುದ್ದಿವಾದ ಹೇಳಿದರು.

ರಾಮನು ಚಳುವಳಿಯಲ್ಲಿ ಭಾಗವಹಿಸಿದರ ಫಲವಾಗಿ ರಾಮನು ಆರು ತಿಂಗಳು ಜೈಲು ಸೇರಿದನು.ನಂತರ ಆತನನ್ನು ಬಿಡುಗಡೆ ಮಾಡಲಾಯಿತು. ಬಿ.ಎ. ಓದು ಅರ್ಧಕ್ಕೆ ನಿಂತಿತ್ತು.

ರಾಮನು ತಾಯಿಯ ನೆನಪಾಗಿ ಆಕೆಯನ್ನು ನೋಡಲು ಹೊರಟ.ರಾಮನು ಸ್ವರಾಜ್ಯದ ಕನಸು ಕಂಡು ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಸಿಕ್ಕ ಫಲ ಜೈಲು ಶಿಕ್ಷೆ ಇದರಿಂದ ರಾಮನ ಮನಸ್ಸಿನಲ್ಲಿ ಸ್ವರಾಜ್ಯದ ಕನಸು ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಈ ಸನ್ನಿವೇಶ ರಾಮನ ಮೇಲೆ ದೊಡ್ಡ ಪರಿಣಾಮ ಉಂಟು ಮಾಡಿತು.ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ.

ರಾಮ ಕಡಲಿನೊಂದಿಗೆ ಹೊಂದಿರುವ ಸಂಬಂಧ

ರಾಮನು ಚಿಕ್ಕ ವಯಸ್ಸಿನಲ್ಲಿಯೇ ಕೋಡಿಯಲ್ಲಿನ ಕಡಲನ್ನು ಹೆಚ್ಚು ಪ್ರೀತಿಸುತ್ತಿದ್ದ. ಮನೆಯಲ್ಲಿ ಬಡತನವಿದ್ದುದರಿಂದ ನಾಗವೇಣಿ ರಾಮನ ಜೊತೆಯಲ್ಲಿ ಹೆಚ್ಚು ಮಾತನಾಡುತ್ತಿರಲ್ಲಿಲ್ಲ. ಯಾವಾಗಲೂ ನಾಗವೇಣಿಗೆ ಅವಳ ಜೀವನದ ಕುರಿತು ಯೋಚನೆ ಮಾಡುತ್ತಿದ್ದಳು, ಅವಳ ದುರಾದೃಷ್ಟವನ್ನು ನೆನದು ಕೊರಗುತ್ತಿದ್ದಳು. ಆ ಸಮಯದಲ್ಲಿ ರಾಮನನ್ನು ಸೆಳೆದುದು ಅವನೂರಿನ ಕಡಲು ಸತ್ಯಭಾಮೆಯ ಸಾವಿನ ನಂತರ ನಾಗವೇಣಿಯು ಒಂಟಿಯಾಗಿದ್ದಳು, ಸದಾ ಯೋಚನೆಯಲ್ಲಿ ತೊಡಗುತ್ತಿದ್ದಳು, ರಾಮನ ಬಗ್ಗೆ ಹೆಚ್ಚು ಗಮನವಹಿಸುತ್ತಿರಲಿಲ್ಲ. ರಾಮನಿಗೆ ಸಮುದ್ರವನ್ನು ನೋಡಿದರೆ ಒಂದು ರೀತೀಯ ಸಮಾದಾನ, ಪ್ರೀತಿ, ಮನಸ್ಸಿಗೆ ಶಾಂತತೆ ದೊರೆಯುತ್ತಿತ್ತು.

ಒಂದು ದಿನ ಸಂಜೆಯಾಗಿತ್ತು. ರಾಮನು ತಾಯಿಯನ್ನು ಅಮ್ಮ ಬೇಸರವಾಗುತ್ತಿದೆ ಸಮುದ್ರಕ್ಕೆ ಹೋಗೋಣವೆ ಎಂದನು. ನಾಗವೇಣಿಯು ಈಗ ಸಂಜೆಯಾಗುತ್ತಿದೆ. ಬೇಡ ಎಂದಳು.ಈಗಲೇ ಹೋಗುವ ನನಗೆ ಇಲ್ಲಿ ಬೇಸರವಾಗುತ್ತದೆ ನೀನು ನನ್ನ ಹತ್ತಿರ ಮಾತನಾಡುವುದಿಲ್ಲ ಎಂದನು.

"ಸಮುದ್ರದಲ್ಲಿ ಯಾರು ನಿನ್ನ ಹತ್ತಿರ ಮಾಡನಾಡುವರು?

'ಸಮುದ್ರ'

'ಅದು ಮಾತನಾಡುತ್ತದೆಯೋ ಅಣ್ಣ, ನಿನ್ನ ಹತ್ತಿರ?

ಹೌದು. ಅದಕ್ಕೂ ನನಗೂ ಪ್ರೀತಿ ನನ್ನ ಹತ್ತಿರ ಅದಕ್ಕೆ ತುಂಬ ಕೊಂಡಾಟ. ಬಾ"9 (ಪು. 271)

ನಾಗವೇಣಿಗೆ ಮಗುವಿಗೆ ಬೇಸರ ಹೋದರೆ ಸಾಕು ಎಂದು ಎನಿಸಿತ್ತು.ಮಗುವನ್ನು ಕರೆದುಕೊಂಡು ಸಮುದ್ರಕ್ಕೆ ಹೋಗುವಳು.ಮಗುವು ಸಮುದ್ರ ಅಲೆಗಳಲ್ಲಿ ಮೈ ಮರೆತು ಆಡುತ್ತಿರುತ್ತದೆ. ಅದರ ಆಟವನ್ನು ನೋಡಿ ನಾಗವೇಣಿ ತನ್ನ ಕಷ್ಟಗಳನ್ನು ಮರೆಯುತ್ತಿದ್ದಳು.

ರಾಮನು ಬೆಳೆಯುತ್ತಾ ದೊಡ್ಡವನಾದರೂ ಆತನಿಗೆ ಬೇಸರವಾದಾಗ ಆ ಸಮಯವನ್ನು ಕಡಲಿನ ಜೊತೆಯಲ್ಲಿ ಕಳೆಯುತ್ತಿದ್ದ.

ರಾಮನಿಗೆ ಮುಂಬೈಯಿಗೆ ವಿದ್ಯಾಭ್ಯಾಸಕ್ಕೆ ಹೋಗಿದ್ದಾಗ ಅಲ್ಲಿನ ಸಮುದ್ರದ ಮುಂದೆ ಕುಳಿತು ನನ್ನೂರಿನ ಸಮುದ್ರದ ಪ್ರಶಾಂತತೆ ಇಲ್ಲಿ ಸಿಗುವುದಿಲ್ಲ ಎಂದು ಹೇಳಿದನು.ರಾಮನಿಗೆ ಚಿಕ್ಕಂದಿನಿಂದಲು ಸಮುದ್ರವೆಂದರೆ ಒಂದು ರೀತಿಯ ಒಲುವು.ರಾಮನು ತನ್ನ ಬೇಸರವನ್ನು ಕಳೆಯಲು ಸಮುದ್ರದಕ್ಕೆ ಹೋಗುತ್ತಿದ್ದನು. ಅಲೆಗಳನ್ನು ನೊಡುತ್ತಾ ಬೇಸರವನ್ನು ಕಳೆಯುವನು ರಾಮನು ಕಡಲಿನೊಂದಿಗೆ ಹೊಂದಿರುವ ಸಂಬಂಧದಿಂದ ಕಾದಂಬರಿಯ ಬೆಳವಣಿಗೆಗೆ ಸಹಕಾರಿಯಾಗಿದೆ.

ರಾಮನು ತನ್ನ ತಂದೆಯನ್ನು ಕಂಡಾಗ ಆದ ಸಂತೋಷ ಮತ್ತು ನೋವು

ಬಿ.ಎ. ಮುಗಿಸಿ ಮನೆಗೆ ಮರಳಿದ ರಾಮನು ಏನು ಕೆಲಸ ಮಾಡುವುದೆಂದು ಯೋಚನೆ ಮಾಡುವಾಗ ಅದೆ ಊರಿನ ನರಸಿಂಹಮಯ್ಯ ರಾಮನ ಬಗ್ಗೆ ವಿಚಾರಿಸಿ ತನ್ನ ಮಗಳನ್ನು ರಾಮನಿಗೆ ಮದುವೆ ಮಾಡಿಕೊಟ್ಟರೆ ವಿದ್ಯಾವಂತ ಅಳಿಯ ಸಿಗುತ್ತಾನೆ ತಮ್ಮ ಹೋಟೆಲುಗಳನ್ನು ಸರಿಯಾಗಿ ತೂಗಿಸಿಕೊಂಡು ಹೋಗುತ್ತಾನೆ ಎಂದು ತಿಳಿದು ಈ ಪ್ರಸ್ತಾಪವನ್ನು ನಾಗವೇಣಿಯ ಮುಂದೆ ಇಡುತ್ತಾನೆ. ಆದರೆ ರಾಮನು ಇದಕ್ಕೆ ಒಪ್ಪುವುದಿಲ್ಲ. ನಾವೆ ಬಡತನದಲ್ಲಿ ಇರುವಾಗ ಮದುವೆಯಾಗಿ ಮನೆಗೆ ಬರುವ ಹೆಣ್ಣನ್ನು ಏಕೆ ನೋಯಿಸಬೇಕು ಮಾವನ ಅಂಗಿನಲ್ಲಿ ಉಳಿಯಲು ನನಗೆ ಇಷ್ಟವಿಲ್ಲವೆಂದ.

ಮನೆ ಬಡತನ ತಾಯಿಯ ಒತ್ತಾಯದಿಂದ ನರಸಿಂಹಯ್ಯರ ಹೋಟೆಲಿಗೆ ಕೆಲಸಕ್ಕೆ ಸೇರಿದ.ಕೆಲಸ ಕಷ್ಟದಾಗಿದ್ದರು ಬೇರೆ ಕೆಲಸ ಸಿಗುವವರಿಗೆ ಮಾಡುವ ಎಂದು ನಿಷ್ಠೆಯಿಂದ ಕೆಲಸವನ್ನು ಮಾಡುತ್ತಿದ್ದ. ರಾಮನ ಕೆಲಸವು ನರಸಿಂಹಯ್ಯರಿಗೆ ಇಷ್ಟವಾಯಿತು. ಓದಿರುವ ಹುಡುಗ ಇಂಗ್ಲೀಷ್ ಗೊತ್ತಿರುವ ಹುಡುಗ ಹೋಟೆಲಿನಲ್ಲಿ ಕೆಲಸ ಸಿಕ್ಕಿದರೆ ಹೋಟೆಲಿನ ಮರ್ಯಾದೆ ಹೆಚ್ಚಾಗುತ್ತದೆ ಎಂದು ಯೋಚಿಸುತ್ತಿದ್ದರು. ಇದೆ ಸಮಯದಲ್ಲಿ ಮೈಸೂರಿನ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಹೋಟೆಲಿನ ಹಣವನ್ನು ಯಜಮಾನರಿಗೆ ತಿಳಿಸದ ಹಾಗೆ ತನ್ನ ಸ್ವಂತಕ್ಕೆ ಖರ್ಚು ಮಾಡುತ್ತಿರುವ ವಿಷಯ ತಿಳಿಯಿತು. ಆಗ ನರಸಿಂಹಯ್ಯರು ಆ ಜಾಗಕ್ಕೆ ರಾಮನನ್ನು ಆಯ್ಕೆ ಮಾಡಿದರು. ಮೈಸೂರಿನ ಹೋಟೆಲಿನ ಎಲ್ಲಾ ಜವಾಬ್ದಾರಿಯನ್ನು ರಾಮನಿಗೆ ವಹಿಸಿದರು. ರಾಮನು ಇಷ್ಟವಿಲ್ಲದ ಮನಸ್ಸಿನಿಂದ ಮೈಸೂರಿಗೆ ಹೋದನು. ಮೈಸೂರಿನ ಹೋಟೆಲಿನಲ್ಲಿ

ರಾಮನಿಗೆ ಕೇಶವನ ಪರಿಚಯವಾಯಿತು. ಆತನು ಆ ಹೋಟೆಲಿನಲ್ಲಿಯೆ ಕೆಲಸ ಮಾಡುವವನು. ಕೇಶವನಿಂದ ರಾಮನಿಗೆ ಒರಟನ ಬಗ್ಗೆ ತಿಳಿಯಿತು. ಒರಟ ಇದ್ದ ಮೇಲೆ ತನ್ನ ತಂದೆಯ ಆತನ ಜೊತೆ ಇರುತ್ತಾನೆ ಎಂದು ರಾಮನು ಯೋಚಿಸಿದನು ಕೇಶವನಿಗೆ ಅವರು ಇರುವ ಜಾಗವನ್ನು ತೋರಿಸುವಂತೆ ಹೇಳಿದನು ಕೇಶವನು ಅವರಿರುವ ಜಾಗವನ್ನು ತೊರಿಸಿದನು. ರಾಮನಿಗೆ ತಂದೆಯನ್ನು ನೋಡಿದ ನೆನಪೆ ಇಲ್ಲ ತಂದೆಯನ್ನು ಕಾಣಲು ಹೋಗುತ್ತಿದ್ದೆನಲ್ಲ ಎಂದು ಮನಸ್ಸಿನಲ್ಲಿ ಖುಷಿ ಪಡುತ್ತಾನೆ. ಕೇಶವನು ರಾಮನನ್ನು ಮೈಸೂರಿನ ಶ್ರೀರಾಮಪೇಟೆಯಿಂದ ಕವಲೊಡೆಯುವ ಒಂದು ಸಂದಿಯಲ್ಲಿ ಇಳಿಮಾಡಿನ ಒಂದು ಮನೆಗೆ ಕರೆದುಕೊಂಡು ಹೋಗುತ್ತಾನೆ. ಮನೆಯ ಒಳಗೆ ಇದ್ದ ಜನರೆಂದರೆ ಇಬ್ಬರೆ ಗೋಡೆಗೆ ಒರಗಿ ತನ್ನ ನೋವಿನ ಕಾಲೊಂದನ್ನು ನೀಡಿಕೊಂಡು ಬಾಯಲ್ಲಿ ಬೀಡಿಯ ತುಂಡನ್ನು ಕಚ್ಚಿಕೊಂಡು ಒಂದೊಂದೇ ಇಸ್ಪೀಟು ಎಲೆ ಇಳಿಸುತ್ತಿದ್ದ ಅವನೆ ಲಚ್ಚ ಅವನೆದುರು ಇವನಂತೆಯೆ ಕುಳಿತಿದ್ದ ಒರಟ. ಇಬ್ಬರಿಗೂ ಸುಮಾರು 50 ವರ್ಷ ವಯಸ್ಸು ಆದರೆ ಎಪ್ಪತ್ತರಂತೆ ಕಾಣುತ್ತಿದ್ದರು. ನೆರೆದ ಕೂದಲು, ಹೊಳಪು ಕಳೆದುಕೊಂಡ ಕಣ್ಣುಗಳು, ಮೂರುದಿನಗಳಿಂದ ಗುಡಿಸದ ಕಸ, ಎಲೆ, ಅಡಿಕೆ ತುಣುಕುಗಳು, ಬಿಡಿಯತುಂಡುಗಳು ಇವೆಲ್ಲ ರಾಮನ ಕಣ್ಣಿಗೆ ಬಿದ್ದವು. ಅವರಿಬ್ಬರ ಇಸ್ಪೀಟ್ ಆಟವು ಜೋರಾಗಿ ಸಾಗಿತ್ತು.

ಕೇಶವ ಮತ್ತು ರಾಮ ಇಬ್ಬರು ಒಳಗೆ ಬಂದರು ಆಟ ಮುಗಿಯುವವರೆಗೂ ಇಬ್ಬರಿಗೂ ಬಂದವರನ್ನು ಮಾತನಾಡಿಸಬೇಕೆಂದು ಅನಿಸಲಿಲ್ಲ, ನಿಲ್ಲುವವರೆಗೂ ನಿಂತು ಕೇಶವನು ನನಗೆ ಬೇರೆ ಕೆಲಸವಿದೆ ಆಮೇಲೆ ಬರುನೆಂದು ಹೇಳಿ ಹೊರಟು ಹೋದನು.ರಾಮನಿಗೆ ನಿಂತು-ನಿಂತು ಸಾಕಾಯಿತು.ತಂದೆಯೆಂದ ಮೇಲೆ ಮಾತನಾಡದೆ ಹೋಗಕೂಡದೆಂದು ಅಲ್ಲೇ ಕುಳಿತನು. ಆಟ ಮುಗಿಯಿತು. ಲಚ್ಚನು "ಒರಟನ ಮೂಲಕ ಅವನು ಯಾವಾಗ ಇಲ್ಲಿಗೆ ಬಂದಿದ್ದಂತೆ? ಎಲ್ಲಿದ್ದಾನಂಥೆ"10 (ಪು.373) ಎಂದು ಮಾತನಾಡಿಸಿದನು. ರಾಮನಿಗೆ ತಂದೆಯು ತನ್ನೊಡನೆ ನೇರವಾಗಿ ಮಾತನಾಡಿಸಲಾರದ ಆ ದೊಡ್ಡಸ್ತಿಕೆಯು ಅವನಿಗೆ ಅಸಹ್ಯವಾಯಿತು. ತಕ್ಷಣ ರಾಮ ಅಲ್ಲಿಂದ ಹೊರಟುಹೋದನು. ರಾಮನಿಗೆ ತಂದೆಯನ್ನು ಕಾಣಲು ಬಂದ ಖುಷಿ ಸ್ವಲ್ಪ ಸಮಯವಷ್ಟು ಉಳಿಯಿತು. ರಾಮನಿಗೆ ಕೊನೆಗೆ ತಂದೆಯನ್ನು ಏಕೆ ಭೇಟಿ ಮಾಡಲು ಬಂದೆ ಎನಿಸುವಷ್ಟು ನೋವಾಯಿತು. ತಂದೆ ಮಗನ ಭೇಟಿಯು ಕಾದಂಬರಿಯ ತಿರುವನ್ನೆ ಬದಲಾಯಿಸಿತು. ಕಾದಂಬರಿಯ ಬೆಳವಣಿಗೆಗೆ ಈ ಸನ್ನಿವೇಶವು ಸಹಕಾರಿಯಾಗಿದೆ.

ಕೋಡಿಯ ಮನೆಯ ಗೋಡೆ ಬಿದ್ದು ಕರಡಿಕೆ ಸಿಕ್ಕಿದ್ದು

ರಾಮನು ಉದ್ಯೋಗವನ್ನು ಹುಡುಕಿಕೊಂಡು ಮುಂಬೈಯಿಗೆ ಹೋದನು ಅಲ್ಲಿ ಸ್ನೇಹಿತರ ರೂಮಿನಲ್ಲಿ ಉಳಿದನು. ಮೂರು ತಿಂಗಳು ಕಳೆದರು ಕೆಲಸ ಸಿಗಲಿಲ್ಲ. ರಾಮನ ಕಿಸೆಯು ಬರಿದಾಗಲು ಬಲು ದೂರವಿದ್ದಿರಲಿಲ್ಲ. ರಾಮನಿಗೆ ದುಡಿಮೆಯಿಲ್ಲದೆ ದರಿದ್ರ ಜೀವಿಯಾಗುವ ಪಾಡು ಬಂದೀತಲ್ಲಾ ಎಂದು ಮರುಗಿದನು. ಹೇಗಾದರು ಮಾಡಿ ಕೆಲಸವನ್ನು ಹುಡುಕಬೇಕೆಂದು ಪ್ರಯತ್ನ ಮಾಡುತ್ತಿದ್ದನು. ರಾಮನು ಸಂಗೀತವನ್ನು ಕಲಿತಿದ್ದನು ಕೆಲಸ ಸಿಗುವವರೆಗೂ ಸಣ್ಣ ಪುಟ್ಟ ಕೆಲಸ ಮಾಡುವನೆಂದು ನಿರ್ಧರಿಸಿದನು. ಕೆಲವು ಮನೆಗಳನ್ನು ಸಂಗೀತ ಪಾಠಕ್ಕೆ ಆಯ್ಕೆ ಮಾಡಿಕೊಂಡನು. ಇದರಿಂದ ಸ್ವಲ್ಪ ಸ್ವಲ್ಪ ಹಣವು ಸಿಗುತ್ತಿತ್ತು. ಆದರೆ ಆತನ ಓದಿಗೆ ತಕ್ಕನಾದ ಕೆಲಸವನ್ನು ಹುಡುಕುತ್ತಲೆ ಇದ್ದ. ಚಿತ್ರ ಪ್ರದರ್ಶನದಲ್ಲಿ ಚಿತ್ರಗಳನ್ನು ನೋಡಿ, ಚಿತ್ರ ಬಿಡಿಸುವುದನ್ನು ಕಲಿಯಲು ನೋವಳಾನ್ನು ಹುಡುಕಿಕೊಂಡು ಹೋದ.

ಸ್ವಲ್ಪ ದಿನದ ನಂತರ ಸಂಗೀತ ಹೇಳಿಕೊಡುತ್ತಿದ್ದ ಶಿಷ್ಯೆಗೆ ಮದುವೆ ಗೊತ್ತಾಯಿತು. ಸಂಗೀತದ ಪಾಠವನ್ನು ನಿಲ್ಲಿಸಿದರು. ಇದರಿಂದ ರಾಮನಿಗೆ ಹಣಕ್ಕೆ ತೊಂದರೆಯಾಯಿತು. ಎಷ್ಟೇ ಅಲೆದರು ಮುಂಬೈಯಿಯಂತ ದೊಡ್ಡ ನಗರದಲ್ಲಿ ರಾಮನ ಓದಿಗೆ ಕೆಲಸ ಸಿಗಲಿಲ್ಲ. ರಾಮನಿಗೆ ಇದರಿಂದ ಬಹಳ ನೋವಾಯಿತು. ತನ್ನ ತಾಯಿಗೆ ಪತ್ರದ ಮೂಲಕತಿಳಿಸುತ್ತಿದ್ದ. ನಾಗವೇಣಿಯು ರಾಮನಿಗೆ ಅಲ್ಲಿ ಕೆಲಸ ಸಿಗದಿದ್ದರೇನು ಇಲ್ಲೆ ಊರಿನಲ್ಲೆ ಹೊಲದಲ್ಲಿ ಕೆಲಸವನ್ನು ಮಾಡಿಕೊಂಡು ಜೊತೆಯಲ್ಲಿ ಇರುವ, ಇನ್ನು ಎಷ್ಟು ದಿನ ಅಂತ ದೂರ ದೂರದಲ್ಲಿ ಇರುವುದು ಎಂದು ನಾಗವೇಣಿಯು ಪತ್ರ ಬರೆಯುತ್ತಿದ್ದಳು. ರಾಮನು ಕೆಲಸವನ್ನು ಹುಡುಕಿ–ಹುಡುಕಿ ಬೇಸರಗೊಂಡು ಕೆಲಸದ ಕೊನೆಯ ಪ್ರಯತ್ನ ಇದು ಈಗ ಕೆಲಸ ಸಿಗದಿದ್ದರೆ ಊರಿಗೆ ಹೊರಡುವ ಎಂದು ನಿರ್ಧರಿಸಿದ್ದ.

ಊರಿಗೆ ಹೋಗಲು ಹಣವನ್ನು ಗಳಿಸಬೇಕು. ಸಾಧ್ಯವಾದರೆ ಹೆಚ್ಚು ಹಣವನ್ನು ಗಳಿಸಿ, ತಾಯಿ ಜೊತೆಯಲ್ಲಿ ಕಾಲ ಕಳೆಯಬೇಕೆಂದು ಎಣಿಸಿದನು. ಆದರೆ ಕೊನೆಯ ಯೋಚನೆ ಮಾತ್ರ ಕನಸು ಎಂದು ಅವನಿಗೆ ತಿಳಿದಿತ್ತು. ಇದರ ನಡುವೆ ಅವರ ತಾಯಿಯಿಂದ ಒಂದು ಕಾಗದ ಬಂದಿತು.ಜೋರು ಮಳೆಗೆ ತಮ್ಮ ದೇವರ ಮನೆಯ ಚಾವಡಿಯು ಕುಸಿಯಿತು. ಹಿರಿಯರ ಹಟ್ಟಿಗೂ ದೇವರ ಮನೆಗೂ ಹಂಚು ಹೊದೆಯಿಸಿದ್ದರೆ ಆಗಬಾರದಿತ್ತೆ ಎಂದು ಯೋಚಿಸುವ ಸಮಯದಲ್ಲಿ ಮಳೆಗೆ ಮಾಡು ಸೋರಿ ಸೋರಿ ಗೋಡೆಗಳು ಒದ್ದೆಯಾಗಿ ಅದು ಕುಸಿಯಿತೆಂದು ಬರೆದಿದ್ದಳು. ಈ

ಕಾಗದ ಬಂದ ಮರುದಿನ ಬೆಳಿಗ್ಗೆ ತಾಯಿಯಿಂದ ಬೇರೆ ಒಂದು ಕಾಗದ ಬಂದಿತು. ಆಕೆ ಹದಿನೈದು ದಿನಗಳಿಗೊಮ್ಮೆ ಬರೆಯುವವಳು ಮೂರೇ ದಿನದಲ್ಲಿ ಇನ್ನೊಂದು ಕಾಗದ ಬರೆದುದನ್ನು ಕಂಡು ಅವನಿಗೆ ವಿಸ್ಮಯವಾಯಿತು. ಆದರೆ ಈ ಪತ್ರವು ಹಿಂದಿನ ಪತ್ರದಂತಿರಲಿಲ್ಲ. ಅದರಲ್ಲಿ ಅವನ ಎಣಿಕೆಗೆ ಮೀರಿದ ಶುಭಸಮಾಚಾರ ಬಂದಿತ್ತು. ನಾಗವೇಣಿಯು ಬಿದ್ದ ಗೋಡೆಯ ಮಣ್ಣನ್ನು ತಾನೆ ಹಾರೆಯಿಂದ ಎಳೆದು ಹಾಕುವಾಗ, ಕಿರಿಯದೊ ಕರಡಿಗೆಯ ಗೋಡೆಯಲ್ಲಿ ಹೂತಿಟ್ಟುದು ದೊರೆಯಿತೆಂದೂ ಬಚ್ಚಿಯ ಮಾತು ಅಂದು ಸತ್ಯವಾಯಿತೆಂದು ಅವಳು ಬರೆದಿದ್ದಳು. ಆ ಕರಡಿಗೆಯಲ್ಲಿ ಮುವತ್ತು ರಾಣಿಯ ಪವನುಗಳು ತುಂಬಿದ್ದವು. ಇದು ಮಾವನ ಕಾರುಭಾರವಲ್ಲದೆ ಇನ್ನಾರದ್ದೂ ಅಲ್ಲ ಎಂದು ಬರೆದು ಇನ್ನೇಕೆ ಅಲ್ಲಿ ತೊಳೆಯುತ್ತೀ? ಗೇಣಿಗೆ ಸ್ವಲ್ಪ ಜಮೀನನ್ನು ಕೊಂಡು ಇಲ್ಲೇ ನಟ್ಟು, ಬಿತ್ತಿ, ಕೊಯ್ದು ಬದುಕನ್ನು ಕಳೆಯುವ ಎಂದು ಬರೆದಿದ್ದಳು.

ಆ ರಾತ್ರಿಯಲ್ಲಿ ರಾಮನಿಗೆ ಊರಿನ ಮನೆಯ ಎಲ್ಲಾ ಗೋಡೆಗಳನ್ನು ಬೀಳಿಸಿ ಅದರಿಂದ ಲಕ್ಷಾಂತರ ಹಣ ಸಿಕ್ಕಿರುವ ಹಾಗೆ ಕನಸು ಕಂಡನು. ರಾಮನು ಮುಂಬೈಯಿಂದ ಕೋಡಿಗೆ ಹೊರಟ. ಕರಡಿಗೆಯಲ್ಲಿ ಸಿಕ್ಕ ಹಣದಿಂದ ರಾಮನು ತನ್ನ ತಂದೆಯು ಕಳೆದಿದ್ದ ತಾತನ ಆಸ್ತಿಯನ್ನು ಪುನಹ ಪಡೆದನು. ಮತ್ತೆ ಒಳ್ಳೆಯ ಸ್ಥಿತಿಗೆ ಬಂದರು. ಹೊಲದಲ್ಲಿ ಬೆಳೆ ಬೆಳೆದರು ರಾಮನು ಅದೆ ಊರಿನ ಶಾಲೆಗೆ ಶಿಕ್ಷಕನಾಗಿ ಸೇರಿದ. ಶಿಕ್ಷಕನ ಕೆಲಸವನ್ನು ಮಾಡಿಕೊಂಡು ಜಮೀನಿನಲ್ಲಿ ತಾಯಿ ಮಗ ಇಬ್ಬರು ಸೇರಿ ಬೆಳೆಯತೊಡಗಿದರು. ಇವರ ಬಡತನದ ಜೀವನವು ಕಳೆಯಿತು.ಕರಡಿಗೆ ಸಿಕ್ಕಿದ್ದರಿಂದ ರಾಮನ ಜೀವನದ ದಾರಿ ಬದಲಾಯಿತು. ಇದರಿಂದ ರಾಮನು ಮರಳಿ ಊರಿಗೆ ಬಂದನು.

ಅಧ್ಯಾಯ–4

ಪಾತ್ರ ಚಿತ್ರಣ

'ಮರಳಿ ಮಣ್ಣಿಗೆ' ಕಾದಂಬರಿಯು ಮೂರು ತಲೆಮಾರುಗಳ ಕಥೆಯ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಕೋಡಿ ಗ್ರಾಮದಲ್ಲಿ ಕಾಣಬಹುದಾಗಿದೆ. ಮೂರು ತಲೆಮಾರುಗಳ ಪಾತ್ರ ಚಿತ್ರಣದಲ್ಲಿ ಕೆಲವು ಸಾಮ್ಯತೆಗಳು ಹಾಗೂ ಕೆಲವು ವಿರುದ್ಧ ಮನೋಧೋರಣೆಗಳು ಕಂಡು ಬರುತ್ತವೆ. ಪಾತ್ರಗಳಲ್ಲಿ ಕೆಲವು ಪ್ರಧಾನ ಪಾತ್ರಗಳು ಹಾಗೂ ಚಿಕ್ಕ ಪಾತ್ರಗಳು ಕಂಡುಬರುತ್ತವೆ. ಕಾದಂಬರಿಯಲ್ಲಿ ಬರುವ ಪಾತ್ರಗಳನ್ನು ಸೃಷ್ಟಿಸುವಲ್ಲಿ ಕೆಲವು ತಂತ್ರಗಳನ್ನು ಕಾದಂಬರಿಕಾರರು ಬಳಸಿಕೊಂಡಿದ್ದಾರೆ. ಯಾವುದಕ್ಕೂ ಪುರಸೊತ್ತಿಲ್ಲದೇ ದುಡಿಯುವ ಸ್ತ್ರೀ ಪಾತ್ರಗಳು ಸಾವು–ನೋವು ಯಾತನೆಯನ್ನು ಎದುರಿಸಿ ಬಂದದ್ದನ್ನು ಒಪ್ಪಿಕೊಳ್ಳುವ ಹೆಚ್ಚುಗಾರಿಕೆಯನ್ನು ಪ್ರತಿನಿಧಿಸುತ್ತಾ ನಯವಾಗಿ ಸ್ತ್ರೀ ಪಾತ್ರಗಳನ್ನು ಕಾದಂಬರಿಕಾರರು ಮೂಡಿಸಿದ್ದಾರೆ. "ಕಾರಂತರು ಚಿತ್ರಿಸಿರುವ ಮಹಿಳಾ ಪಾತ್ರಗಳು ಪುರಾತನ ಸ್ತ್ರೀಯರನ್ನು ಹೋಲುತ್ತವೆ."[3] ಉದಾಹರಣೆಗೆ ಪಾರೋತಿ, ಸರಸೋತಿಯರ ಪಾತ್ರದಲ್ಲಿ ಸಾಮ್ಯತೆಯನ್ನು ಕಾಣಬಹುದು. ತಮ್ಮ ಸುತ್ತಮುತ್ತಲಿನ ಬದುಕು ಯಾವ ರೀತಿ ವ್ಯತ್ಯಾಸಗೊಂಡಿತೆಂದು ತಿಳಿಯಬಹುದು. ಶೀನಮಯ್ಯ ಮತ್ತು ಲಚ್ಚರಂತಹ ವಿರುದ್ಧ ಪಾತ್ರಗಳನ್ನು ಕಾಣಬಹುದು. ಇಂತಹ ಪಾತ್ರಗಳ ಪರಿಚಯವನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಮುಖ ಪುರುಷ ಪಾತ್ರಗಳು

ರಾಮ ಐತಾಳ

ರಾಮ ಐತಾಳರು ಕೋಡಿಯ ವೈದಿಕ ಬ್ರಾಹ್ಮಣರು. ತಂದೆ ಗಳಿಸಿದ ಕೊಂಚ ಆಸ್ತಿ ಹೊರತು ಬೇರೇನು ಇಲ್ಲದವರು. ರಾಮ ಐತಾಳರ ಪತ್ನಿ ಪಾರೋತಿ, ಇವರ ತಂಗಿ ಸರಸೋತಿ, ಗಂಡನನ್ನು ಕಳೆದುಕೊಂಡು ಐತಾಳರ ಮನೆಯಲ್ಲೆ ಇದ್ದಾಳೆ. ಐತಾಳರು ಪೌರೋಹಿತಿಕೆ ಇದ್ದ ದಿನದಲ್ಲಿ ಗದ್ದೆಗಳ ಕೆಲಸಕ್ಕೆ ಹೋಗುತ್ತಿರಲಿಲ್ಲ. ಐತಾಳರು ಬಹಳ ಸಂಪ್ರದಾಯಸ್ತರಾಗಿದ್ದರು. ಗದ್ದೆ ಕೆಲಸದ ಬಗ್ಗೆ ಶ್ರದ್ದೆ, ಆಸಕ್ತಿಯನ್ನು ಹೊಂದಿದ್ದರು. "ಬಡತನ ಐತಾಳರನ್ನು ಒರಟು ಮನುಷ್ಯರನ್ನಾಗಿಸಿದೆ. ಇದರೊಡನೆ ಅವರು ಮಾಡುವ ಪೌರೋಹಿತಿಕೆ ಅವರಲ್ಲಿ ಗಾಢವಾದ ಧಾರ್ಮಿಕ ನಂಬಿಕೆಯನ್ನು ಉಂಟು ಮಾಡಿದೆ"[4]

ಹಿರಿಯರು ಕೊಟ್ಟ ಆಸ್ತಿಯನ್ನು ಕಳೆಯದೆ ತಾವು ಗಳಿಸಿದ ಪೌರೋಹಿತಿಕೆಯ ಹಣದಿಂದ ಅಷ್ಟೋ ಇಷ್ಟೋ ಗದ್ದೆ ಮಾಡಿದ್ದರು.ಐತಾಳರ ಮನೆಯಲ್ಲಿ ಇವರ ಯಜಮಾನರು ಗದ್ದೆಯಲ್ಲಿ

3,4 ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ, ಡಾ॥ ಎಂ ಎನ್ ನಂದೀಶ್ ಹಂಚಿ. ಪು.ಸಂ 76,72 ಮುದ್ರಣ 2014

ಬೆಳೆದಿದ್ದ ಭತ್ತವನ್ನು ಐತಾಳರು ಮನೆಯ ಹೆಂಗಸರು ಹೊರಗೆ ಹೋದನಂತರ ಅಳೆದು ತಿಳಿದುಕೊಂಡರು. ಈ ಹೆಂಗಸರಿಗೆ ಹರಕು ಬಾಯಿ ಅವರಿಗೆ ತಿಳಿಸಬಾರದೆಂದು ಯೋಚಿಸಿದರು. ಹೀಗೆ ಹೆಂಗಸರು ಕೆಲಸವನ್ನು ಮಾಡಿಕೊಂಡಿರಬೇಕು ಮನೆಯ ಯಜಮಾನಿಕೆಯಲ್ಲಿ ತಲೆಹಾಕಬಾರದೆಂದು ಪದೆಪದೆ ಹೇಳುತ್ತಿದ್ದರು. ಐತಾಳರು ಪಾರೋತಿಗೆ ಮಕ್ಕಳಾಗದಿದ್ದಾಗ ದತ್ತು ಮಕ್ಕಳನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾರೆ. "ಯಾವ ಯಾವ ಮನೆಯ ಕಾಗೆಮರಿಯನ್ನು ತಂದು ನಮ್ಮ ಮನೆ ಕೋಗಿಲೆಮರಿ ಮಾಡಬೇಕು ಅನ್ನುತ್ತೀಯೋ"11 (ಪು. 35) ಎಂದು ಸರಸೋತಿಗೆ ಹೇಳುತ್ತಾ ಅದು ಆಗದ ಮಾತು ಎಂದು ತಿಳಿಸುತ್ತಾರೆ. ಕೆಲವು ದಿನಗಳ ನಂತರ ಯಾರಿಗೂ ಸುಳಿವು ಕೊಡದ ಹಾಗೆ ಎರಡನೇ ಮದುವೆಯನ್ನು ನಿಶ್ಚಯಿಸಿಕೊಂಡು ಬರುತ್ತಾರೆ. ಶೀನನು ಈ ಮದುವೆಯ ಪಾರುಪತ್ಯ ವಹಿಸಿರುತ್ತಾನೆ.

ಐತಾಳರು ಶೀನನಿಗೆ ನಮ್ಮ ಮನೆಯ ವಿಷಯ ನಿನಗೆ ತಿಳಿಯದು ಒಬ್ಬನೆ ಯಜಮಾನ ಅವನದೆ ಅಂತಿಮ ತೀರ್ಮಾನ ಈ ತೀರ್ಮಾನವನ್ನು ಯಾರು ಪ್ರಶ್ನಿಸುವಂತಿಲ್ಲ ಎಂದು ಪುರುಷ ಪ್ರಾಧಾನ್ಯತೆಯನ್ನು ಸ್ಪಷ್ಟ ಪಡಿಸುತ್ತಾರೆ. ನಂತರ ಸತ್ಯಭಾಮ ಮತ್ತು ಐತಾಳರಿಗೆ ಲಚ್ಚ ಲಕ್ಷ್ಮಿನಾರಾಯಣ ಎಂಬ ಗಂಡುಮಗು ಹಾಗೂ ಸುಬ್ಬಿ ಎಂಬ ಹೆಣ್ಣುಮಗುವು ಜನಿಸುತ್ತಾರೆ.ಐತಾಳರು ಇದರಿಂದ ತುಂಬ ಸಂತೋಷ ಪಡುತ್ತಾರೆ.ಮಕ್ಕಳಿಲ್ಲದ ಮನೆಯಲ್ಲಿ ಮಕ್ಕಳನ್ನು ನೋಡಿ ಸಂಭ್ರಮಪಟ್ಟು ಇದಕ್ಕೆ ಕಾರಣಳಾದ ಸತ್ಯಭಾಮೆಯನ್ನು ಹೆಚ್ಚು ಪ್ರೀತಿ, ಅನುರಾಗದಿಂದ ಕಾಣುತ್ತಾರೆ. ಮೊದಲನೆ ಹೆಂಡತಿಯಾದ ಪಾರೋತಿಯನ್ನು ಕಡೆಗಣಿಸುತ್ತಾ ಹೋಗುತ್ತಾರೆ.ಈ ವಿಷಯ ಪಾರೋತಿಗೆ ತಿಳಿದರು ಸಹ ಸತ್ಯಭಾಮೆಯನ್ನು ಸವತಿ ಎಂದು ಕಾಣದೇ ತನ್ನ ಸ್ವಂತ ತಂಗಿಯ ತರಹ ನೋಡಿಕೊಳ್ಳುತ್ತಾಳೆ. ಸತ್ಯಭಾಮೆಯ ಮಕ್ಕಳು ತನ್ನ ಸ್ವಂತ ಮಕ್ಕಳೆಂದು ಕಂಡು ಹಾಗೆ ನೋಡಿಕೊಳ್ಳುತ್ತಾಳೆ.

ಐತಾಳರ ಸ್ನೇಹಿತನಾದ ಶೀನಮಯ್ಯನು ಐತಾಳರಿಂದ ಹಣವನ್ನು ಪಡೆದು ಅವರಿಗೆ ತಿಳಿಯದ ಹಾಗೆ ಮನೆಗೆ ಹೆಬ್ಬಾಗಿಲು ಮಾಡಿಸುತ್ತಾನೆ. ಇದರಿಂದ ಐತಾಳರು ಮತ್ತು ಶೀನಮಯ್ಯರ ನಡುವೆ ಬಿರುಕು ಕಾಣಿಸಿಕೊಳ್ಳುತ್ತದೆ. ಲಚ್ಚ ಬೆಳೆಯುತ್ತಿದ್ದಂತೆ ಐತಾಳರಿಗೆ ಲಚ್ಚನನ್ನು ದೊಡ್ಡ ಆಫೀಸರ್ ಮಾಡುವ ಕನಸನ್ನು ಹೊಂದಿರುತ್ತಾರೆ. ತಮ್ಮ ತಂಗಿಯ ವಿರೋಧವನ್ನು ಕಟ್ಟಿಕೊಂಡು ಲಚ್ಚನನ್ನು ಮಠದ ಶಾಲೆಗೆ ಕಳುಹಿಸದೆ ಇಂಗ್ಲೀಷ್ ಶಾಲೆಗೆ ಸೇರಿಸುತ್ತಾರೆ. ಸರಸೋತಿಯು ಲಚ್ಚನ ಇಂಗ್ಲೀಷ್ ವಿದ್ಯಾಭ್ಯಾಸದ ಬಗ್ಗೆ ಮಾತಾಡಿದಾಗ "ಇನ್ನಿನ್ನು ಈ ಯಕ್ಷಗಾನ ತಾಳಮದ್ದಳೆಯಿಂದ ಮಕ್ಕಳ ಆಯುಷ್ಯ ಸಾಗಲಿಕ್ಕಿಲ್ಲ. ನಾನು ವೈದಿಕನಾಗಿ ನನಗೆ ಸಿಗುವ ಮಾನ ಎಷ್ಟೆಂದು ನಿನಗೆ ಗೊತ್ತಿದೆ"12 (ಪು.130) ನಮ್ಮ ಮಕ್ಕಳ ಭವಿಷ್ಯ ಚೆನ್ನಾಗಿರಬೇಕು. ಲಚ್ಚನು ಇಂಗ್ಲೀಷ್ ಶಾಲೆಯಲ್ಲಿ

ಓದಬೇಕು ಆತ ದೊಡ್ಡ ಆಫೀಸರೋ ವಕೀಲನೋ ಆಗಬೇಕು ನನ್ನ ಹಾಗೆ ಆಗಬಾರದೆಂದು ತಿಳಿಸುತ್ತಾನೆ.

ಐತಾಳರು ಮಗನ ಬಗ್ಗೆ ಕಟ್ಟಿದ ಕನಸು ಹಂತ ಹಂತವಾಗಿ ನಾಶಹೊಂದುತ್ತ ಹೋಗುತ್ತದೆ. ಲಚ್ಚನು ಪಟ್ಟಣವನ್ನು ನೋಡಿ ಅದರ ವೈಭವಕ್ಕೆ ಬೆರಗಾಗಿ ಶಿಕ್ಷಣದ ಜೊತೆಗೆ ಕೆಟ್ಟ ಚಟಗಳನ್ನು ಮೈಗೂಡಿಸಿಕೊಳ್ಳುತ್ತಾನೆ. ಇದರಿಂದ ಐತಾಳರಿಗೆ ತಮ್ಮ ಮಗನ ಮೇಲಿದ್ದ ನಂಬಿಕೆಯು ಕಡಿಮೆಯಾಗುತ್ತಾ ಹೋಗುತ್ತದೆ. ಮದುವೆ ಮಾಡಿದರೆ ಸರಿಹೋದಾನೆಂದು ತಿಳಿದು ಐರೋಡಿಯ ವಕೀಲರಾದ ವಾಸುದೇವಯ್ಯನವರ ಮಗಳಾದ ನಾಗವೇಣಿಯ ಜೊತೆ ವಿವಾಹ ಮಾಡಿಸುತ್ತಾರೆ. ಆದರೆ ಲಚ್ಚನು ತನ್ನ ಚಟಗಳನ್ನು ಬಿಡುವುದಿಲ್ಲ. ಮನೆಯನ್ನು ಬಿಟ್ಟು ಪಟ್ಟಣವನ್ನು ಸೇರುತ್ತಾನೆ. ಐತಾಳರು ತಮ್ಮ ಮಗನ ಮೇಲಿನ ಆಸೆಯನ್ನು ಬಿಡುತ್ತಾರೆ. ತಮ್ಮ ಸೊಸೆಯನ್ನು ಮಗನೆಂದು ತಿಳಿದು ತನ್ನಿಂದ ಆದ ತಪ್ಪಿಗೆ ತಾನು ಸಂಪಾದಿಸಿದ ಆಸ್ತಿಯಲ್ಲಿ ಮುಕ್ಕಾಲು ಪಾಲನ್ನು ಸೊಸೆ ನಾಗವೇಣಿಗೆಬರೆಯುತ್ತಾನೆ. ಮಗನನ್ನು ನಂಬಿ ಬಂದ ಸೊಸೆಗೆ ಮೋಸವಾಗಬಾರದೆಂದು ಹೀಗೆ ಮಾಡುತ್ತಾರೆ. ಉಳಿದ ಕಾಲು ಭಾಗವನ್ನು ಮಗಳಿಗೆ ಬರೆಯುತ್ತಾರೆ. ಅಜ್ಜನ ಆಸ್ತಿಯನ್ನು ಆತನು ಏನು ಬೇಕಾದರು ಮಾಡಲಿ ಎಂದು ಐತಾಳರು ಬಹಳ ನೋವಿನಿಂದ ಹೇಳುತ್ತಾರೆ. ಲಚ್ಚನ ಚಿಂತೆಯು ಅವರ ಮನಸ್ಸಿನಲ್ಲಿ ಗಾಢವಾಗಿ ಕಾಡತೊಡಗುತ್ತದೆ. ಕೆಲವು ತಿಂಗಳಲ್ಲಿ ಐತಾಳರು ಜ್ವರದಿಂದ ಹಾಸಿಗೆ ಹಿಡಿಯುತ್ತಾರೆ. ಈ ವಿಷಯವನ್ನು ತಿಳಿದು ಶೀನಮಯ್ಯನ ಮನಸ್ಸು ಕರಗುತ್ತದೆ. ಸಾವು ಯಾರನ್ನು ಬಿಟ್ಟದಲ್ಲ ಎಂಬ ಸತ್ಯ ಅವರಿಗೆ ತಿಳಿದು ತಮ್ಮ ತಪ್ಪಿನ ಅರಿವಾಗಿ ಐತಾಳರಲ್ಲಿ ಕ್ಷಮೆಯನ್ನು ಬೇಡುತ್ತಾರೆ. ಕೊನೆಯ ದಿನಗಳಲ್ಲಿ ಲಚ್ಚನು ತಂದೆಯನ್ನು ನೋಡಲು ಬಂದಾಗ ಆಸ್ತಿಯ ಹಂಚಿಕೆಯ ವಿವರವನ್ನು ತಿಳಿಸಿ ಅಮಾವಾಸೆಯ ತಿಥಿ ಪೂರ್ಣಗೊಳ್ಳುವುದರೊಳಗೆ ಮರಣ ಹೊಂದಿದ್ದರು. ಐತಾಳರು ಸಂಪ್ರದಾಯಸ್ಥರು, ಆಚಾರ, ವಿಚಾರ, ನಂಬಿಕೆಗಳನ್ನು ಇಟ್ಟುಕೊಂಡು ಬದುಕಿದ ವ್ಯಕ್ತಿಯಾಗಿದ್ದರು.

ಶೀನಮಯ್ಯ

ಐತಾಳರ ನೆರೆಮನೆಯ ಶೀನಮಯ್ಯ ಈತ ಆರ್ಥಿಕವಾಗಿ ಸಾಮಾನ್ಯ ವರ್ಗಕ್ಕೆ ಸೇರಿದವನು ಆರಂಭದಲ್ಲಿ ಐತಾಳರ ಮರು ವಿವಾಹದ ಸಂದರ್ಭದಲ್ಲಿ ಇವರೀರ್ವರ ಸಂಬಂಧ ಬಹಳ ಗಟ್ಟಿಯಾಗಿರುತ್ತದೆ. ಶೀನಮಯ್ಯ ಐತಾಳರ ಮನೆಗೆ ಹೋಗುವುದು ಬರುವುದು ಹೀಗೆ ಪ್ರತಿದಿನ ನಡೆಯುತ್ತಿರುತ್ತದೆ. ಐತಾಳರ ಬಳಿ ಸಾಲವನ್ನು ಪಡೆದು ಅವರಿಗೂ ತಿಳಿಯದಂತೆ ಮನೆಯ

ಹೆಬ್ಬಾಗಿಲು ನಿರ್ಮಾಣ ಮಾಡಿರುತ್ತಾನೆ. ನಂತರ ಐತಾಳರಿಗೆ ಶೀನಮಯ್ಯ ತನ್ನ ಬಳಿ ಸಾಲ ಪಡೆದ ಹಣದಿಂದ ಹೆಬ್ಬಾಗಿಲು ನಿರ್ಮಿಸಿದ್ದಾನೆ ಎಂದು ತಿಳಿದು ಬೇಸರಗೊಂಡು ಶೀನಮಯ್ಯ ಮತ್ತು ಐತಾಳರ ನಡುವೆ ಬಿರುಕು ಮೂಡುತ್ತದೆ.ಒಬ್ಬರು ಬೆಳೆಯುವುದನ್ನು ನೋಡಿ ಮತ್ತೊಬ್ಬರು ಅಸೂಹೆ ಪಡುತ್ತಾರೆ.ಶೀನಮಯ್ಯ ತನ್ನ ಮಕ್ಕಳನ್ನು ಹೋಟೆಲ್ ಕೆಲಸಕ್ಕೆ ಕಳುಹಿಸಿ ಅದರಿಂದ ಬಂದ ಹಣದಿಂದ ಊರಿನಲ್ಲಿ ತೋಟ ಗದ್ದೆಗಳನ್ನು ಕೊಂಡುಕೊಳ್ಳುತ್ತಿರುತ್ತಾನೆ. ಇದನ್ನು ತಿಳಿದ ಐತಾಳರು ತಾವು ಸಹ ಆಸ್ತಿ ಮಾಡಲು ಮುಂದಾಗುತ್ತಾರೆ. ಶೀನಮಯ್ಯ ಐತಾಳರ ಮೇಲಿನ ಬೇಜಾರನ್ನು ಅವರ ಮಗ ಲಚ್ಚನನ್ನು ಮುಂದಿಟ್ಟುಕೊಂಡು ತೀರಿಸಿಕೊಳ್ಳುತ್ತಾನೆ. ಲಚ್ಚನು ಸಂಪೂರ್ಣವಾಗಿ ದಾರಿ ತಪ್ಪಲು ಶೀನಮಯ್ಯ ಮತ್ತು ಆತನ ಮಗ ಒರಟರೆ ಕಾರಣರಾಗಿರುತ್ತಾರೆ.

ಹಿರಿಯರಾದ ಶೀನಮಯ್ಯ ಲಚ್ಚನಿಗೆ ಬುದ್ದಿ ಹೇಳುವ ಬದಲಿಗೆ ಆತನನ್ನು ಐತಾಳರ ಮೇಲೆ ಸೇಡುತೀರಿಸಿಕೊಳ್ಳಲು ಬಳಸಿಕೊಳ್ಳುತ್ತಾನೆ. ಶೀನಮಯ್ಯ ಹಿಂದೆ ಶೀನಪ್ಪನಾಗಿದ್ದ. ಹಣವನ್ನು ಸಂಪಾದಿಸಿ ಆಸ್ತಿ, ಗದ್ದೆ, ತೋಟ ಎಂದು ಮಾಡಿದಾಗ, ಶೀನಮಯ್ಯ ಎಂದು ಗೌರವದಿಂದ ಕರೆಸಿಕೊಳ್ಳಲು ಪ್ರಾರಂಭಿಸುತ್ತಾನೆ. ಶೀನಮಯ್ಯನ ಗಂಡುಮಕ್ಕಳು ಪಟ್ಟಣವನ್ನು ಸೇರಿ ಹೋಟೆಲ್ ಉದ್ಯಮವನ್ನು ಮಾಡಿ ಹಣವನ್ನು ಸಂಪಾದಿಸಿ ಆ ಹಣವನ್ನು ಶೀನಮಯ್ಯನಿಗೆ ಕೊಡುತ್ತಾರೆ. ಇದರಿಂದ ಶೀನಮಯ್ಯ ಮಕ್ಕಳು ಕೊಟ್ಟ ಹಣದಿಂದ ಗದ್ದೆ ತೋಟವೆಂದು ಕೊಂಡುಕೊಂಡು ಆರ್ಥಿಕವಾಗಿ ಮುಂದುವರೆಯುತ್ತಾನೆ. ಊರಿನಲ್ಲಿ ಒಳ್ಳೆಯ ಹೆಸರನ್ನು ಮಾಡುತ್ತಾನೆ. ಸರಿಕಾರರ ಮದುವೆಗೆ ಹೋದಾಗ ಅವನು ಸಂಪಾದಿಸಿದ ಹಣದಿಂದ ಆತನಿಗೆ ಒಳ್ಳೆಯ ಮರ್ಯಾದೆ ಸಿಗುತ್ತದೆ. ಹೀಗೆ ಶೀನಮಯ್ಯ ಆರ್ಥಿಕವಾಗಿ ಸಾಮಾನ್ಯನಾಗಿದ್ದವನು ಮಕ್ಕಳಿಂದ ಹೆಚ್ಚು ಹೆಚ್ಚು ಹಣವನ್ನು ಸಂಪಾದಿಸಿ ಶ್ರೀಮಂತನಾದ. ಹಣ ಮತ್ತು ಆಸ್ತಿಯ ವಿಚಾರದಲ್ಲಿ ಶೀನಮಯ್ಯ ಮತ್ತು ಐತಾಳರ ನಡುವೆ ಬಿರುಕು ಉಂಟಾಯಿತು. ಐತಾಳರ ಮರು ಮದುವೆಯ ಜವಾಬ್ದಾರಿಯನ್ನು ವಹಿಸಿಕೊಂಡು ನಿರ್ವಹಿಸಿದ ಶೀನಮಯ್ಯಕೊನೆಯಲ್ಲಿ ಆಸ್ತಿಯ ವಿಚಾರದಲ್ಲಿ ಇಬ್ಬರ ಮಧ್ಯೆ ಬಿರುಕು ಉಂಟಾಗುತ್ತದೆ. ಶೀನಮಯ್ಯ ಮೂಲತಹ ಒಳ್ಳೆಯ ಮನುಷ್ಯನೆ ಹಣ ಬಂದಾಗ ಎಂತಹ ವ್ಯಕ್ತಿಯು ಕೂಡ ಬದಲಾಗುತ್ತಾನೆ ಎನ್ನುವುದಕ್ಕೆ ಶೀನಮಯ್ಯ ಸಾಕ್ಷಿ. ಶೀನಮಯ್ಯನಿಗೆ ತಾನು ಇಷ್ಟು ದಿನ ಐತಾಳರ ಮೇಲೆ ದ್ವೇಷ ಸಾಧಿಸಿದ್ದು ತಪ್ಪು ಎಂದು ಐತಾಳರ ಸಾವಿನ ಕೊನೆ ಕ್ಷಣಗಳಲ್ಲಿ ಶೀನಮಯ್ಯ ಇಷ್ಟು ದಿನ ನನ್ನಿಂದಾದ ತಪ್ಪುಗಳನ್ನು ಕ್ಷಮಿಸು ಎಂದು ಹೇಳುತ್ತಾನೆ. ದುಡ್ಡಿನ ಮದವನ್ನು ಬಿಟ್ಟು ಒಳ್ಳೆಯ ಮನುಷ್ಯನಾಗುತ್ತಾನೆ.

ಒರಟ

ಶೀನಮಯ್ಯನ ಮಗ ಹೆಸರಿಗೆ ತಕ್ಕಂತೆ ಇರುವವನು. ಲಚ್ಚ ಮತ್ತು ಒರಟರು ಸಮವಯಸ್ಕರು. ಲಚ್ಚ ಇಂಗ್ಲೀಷ್ ಶಾಲೆಯಲ್ಲಿ ಓದಿದರೆ ಒರಟ ಕೋಡಿಯ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ಲಚ್ಚನ ಕೆಟ್ಟ ಚಟಗಳಲ್ಲಿ ಇವನು ಪಾಲುದಾರನು ಶೀನಮಯ್ಯನ ಮಕ್ಕಳೆಲ್ಲ ಪಟ್ಟಣದಲ್ಲಿ ಹೋಟೆಲ್ ಇಟ್ಟುಕೊಂಡು ಹಣವನ್ನು ಸಂಪಾದನೆ ಮಾಡುತ್ತಿರುತ್ತಾರೆ.ಒರಟನನ್ನು ಹೋಟೆಲ್ ಉದ್ಯೋಗಕ್ಕೆ ಕಳುಹಿಸಿದಾಗ ಒರಟನು ಆಧುನಿಕತೆಯ ಕೆಟ್ಟ ವಿಷಯಗಳನ್ನು ಮಾತ್ರ ಮೈಗೂಡಿಸಿಕೊಳ್ಳುತ್ತಾನೆ. ಲಚ್ಚ ಇಂಗ್ಲೀಷ್ ಬಲ್ಲವನು, ಒರಟ ವ್ಯವಹಾರ ಬಲ್ಲವನು ಲಚ್ಚನು ಊರಿಗೆ ಬಂದರೆ ತಮ್ಮ ಮನೆಯಲ್ಲಿ ಉಳಿಯುವುದಕ್ಕಿಂತ ಹೆಚ್ಚಿಗೆ ಒರಟನ ಮನೆಯಲ್ಲಿಯೆ ಉಳಿಯುತ್ತಿದ್ದನು.

ಒರಟನು ತಾನು ತನ್ನ ಅಣ್ಣಂದಿರ ವಿರುದ್ದವೆ ಹೋಟೆಲ್ ಉದ್ಯಮ ಪ್ರಾರಂಭಿಸಿ ಅವರನ್ನು ಸಂಕಷ್ಟಕ್ಕೆ ಈಡುಮಾಡುತ್ತಾನೆ. ನಂತರ ಹೋಟೆಲ್ ಉದ್ಯಮದಲ್ಲಿ ಸೋಲನ್ನು ಅನುಭವಿಸಿ ಎಲ್ಲರಿಂದ ದೂರದಲಿದ್ದು ಕೆಟ್ಟ ಚಟಗಳಿಗೆ ಒಡೆಯನಾಗಿ ಜೀವನ ನಡೆಸುತ್ತಿರುತ್ತಾನೆ.

ಒರಟನ ದುರ್ವರ್ತನೆಯಿಂದ ಶೀನಮಯ್ಯ ಕೊರಗಿ ಸಾಯುತ್ತಾನೆ. ಒರಟನು ತಮ್ಮ ಮನೆಯ ಯಾವ ಕಷ್ಟ ಸುಖಗಳಿಗೆ ಬಾಗಿಯಾಗದೆ ತನ್ನಷ್ಟಕ್ಕೆ ತಾನು ಸಂಸಾರದಿಂದ ದೂರ ಉಳಿಯುತ್ತಾನೆ. ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಒರಟನು ಪಟ್ಟಣದಲ್ಲಿ ಇಸ್ಪೀಟು, ಸಿಗರೇಟು ಅಂತ ಕೆಟ್ಟ ಚಟಗಳಲ್ಲಿ ಮೈಮರೆಯುತ್ತಾನೆ. ಒರಟ ಲಚ್ಚನ ಪ್ರಾಣ ಸ್ನೇಹಿತ ಪಟ್ಟಣದಲ್ಲಿ ಇಬ್ಬರು ತಮ್ಮ ಕೆಟ್ಟ ಚಟಗಳಿಗೆ ದಾಸರಾಗಿ ಮೈ ಮೇಲೆ ಪರಿವೆ ಇಲ್ಲದ ಹಾಗೆ ಜೀವನ ನಡೆಸುತ್ತಾರೆ.

ನಾರಾಯನಯ್ಯ

ನಾಗವೇಣಿಯ ಚಿಕ್ಕಪ್ಪ ನಾಗವೇಣಿಯನ್ನು ಕೋಡಿಯ ಲಚ್ಚನಿಗೆ ಮದುವೆ ಮಾಡಿಕೊಟ್ಟ ಮೇಲೆ ಜವಾಬ್ದಾರಿಯನ್ನು ತಂದೆಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ನಾಗವೇಣಿಯ ಕಷ್ಟಗಳಲ್ಲಿ ಭಾಗವಾಗುತ್ತಿದ್ದರು. ನಾಗವೇಣಿಯು ಮದುವೆಯಾದ ದಿನದಿಂದ ಬರಿ ಕಷ್ಟಗಳನ್ನು ಅನಿಭವಿಸುತ್ತಿದ್ದಳು. ಅವಳಿಗೆ ಕಷ್ಟದಲ್ಲೂ ಬದುಕ ಬೇಕು ಎಂಬ ಬರವಸೆ ಬಂದದ್ದು ಆಕೆಯ ಚಿಕ್ಕಪ್ಪನಿಂದ. ರಾಮ, ಐತಾಳರು ತೀರಿಕೊಂಡ ನಂತರ ಮನೆಯ ಹೆಂಗಸರೆ ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡಾಗ ನಾರಾಯನಯ್ಯನವರು ಇವರ ಕಷ್ಟಗಳಿಗೆ ಹೆಗಲು ಕೊಟ್ಟರು. ನಾಗವೇಣಿಯ ಮನೆಯಲ್ಲಿ ಅನ್ನಕ್ಕೆ ಸಂಚಾಕಾರವಾದಾಗ ತಮ್ಮ ಮನೆಯಿಂದ ತಂದುಕೊಡುತ್ತಿದ್ದರು.

ಸಾಲಿಗ್ರಾಮದ ಜಾತ್ರೆ ಎಂದರೆ ಸುತ್ತ ಮುತ್ತಲಿನ ಜನರು ಬಂದು ಸೇರುವ ಜಾತ್ರ. ಆ ಜಾತ್ರೆಗೆ ಎಲ್ಲರೂ ಹೊಸ ಬಟ್ಟೆಗಳನ್ನು ಧರಿಸಿ ಬರುತ್ತಿದ್ದರು. ನಾಗೇಣಿಯ ಮನೆಯವರು ಆ ಜಾತ್ರೆಗೆ ಹೊರಟರು. ಮನೆಯಲ್ಲಿ ಕಷ್ಟ ಇದ್ದರು ಹಳೆಯ ಬಟ್ಟೆಗಳನ್ನು ಹಾಕಿಕೊಂಡು ನಾಗವೇಣಿ ಮಗು ಮತ್ತು ಅತ್ತೆಯನ್ನು ಕರೆದುಕೊಂಡು ಜಾತ್ರೆಗೆ ಹೋದಳು. ಆ ಜಾತ್ರೆಗೆ ನಾಗವೇಣಿಯ ಚಿಕ್ಕಪ್ಪ ಬಂದಿದ್ದರು. ನಾಗವೇಣಿ ಚಿಕ್ಕಪ್ಪನನ್ನು ನೋಡಿ ತಮ್ಮ ಬಡತನ ಅವರಿಗೆ ತಿಳಿಯಬಾರದೆಂದು ಅವರನ್ನು ನೋಡಿದರು ನೋಡದಂತೆಯೆ ಓಡಾಡುತ್ತಿದ್ದಳು. ನಾಗವೇಣಿಯ ಈ ವರ್ತನೆ ನಾರಾಯಣಯ್ಯರವರಿಗೆ ತಿಳಿಯಿತು. ಅವರೆ ಹೋಗಿ ನಾಗವೇಣಿಯನ್ನು ಮಾತನಾಡಿಸಿದರು. ಅವರ ಸ್ಥಿತಿಯನ್ನು ನೋಡಿ ಅವರ ಚಿಕ್ಕಪ್ಪನಿಗೆ ಸಂಕಟವಾಯಿತು. ನಾಗವೇಣಿಯ ಮಗುವನ್ನು ಎತ್ತಿಕೊಂಡು ಹೋಗಿ ಅದಕ್ಕೆ ಹೊಸ ಅಂಗಿಯನ್ನು ಕೊಡಿಸಿದರು. ನಂತರ ಅವರಿಗೆಲ್ಲ ಹಬ್ಬದ ಊಟವನ್ನು ಹಾಕಿಸಬೇಕೆಂದು ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅಡಿಗೆ ಮಾಡಿಸಿ ಊಟ ಹಾಕಿದರು. ಕಷ್ಟ ಪಟ್ಟ ಜೀವಗಳು ಒಂದು ದಿನವಾದರು ರುಚಿಯಾದ ಊಟವನ್ನು ಹೊಟ್ಟೆ ತುಂಬಾ ತಿನ್ನಲಿ ಎಂದು ಆಶಿಸಿದರು.

ಊರಿನಲ್ಲಿ ಯಾವುದೋ ರೀತಿಯ ಜ್ವರ ಬಂದಿದ್ದಾಗ ನಾಗವೇಣಿಯ ಮನೆಯವರೆಲ್ಲ ಜ್ವರದಿಂದ ಬಳಲುತ್ತಿರುವಾಗ ಯಾರಿಂದಲೊ ವಿಷಯ ತಿಳಿದು ಅವರ ಉಪಚಾರಕ್ಕೆ ನಿಂತರು. ನಾಗವೇಣಿಗೆ ಎಚ್ಚರವಾಗುವವರೆಗೂ ರಾಮನನ್ನು ತಮ್ಮ ಮನೆಯಲ್ಲಿ ಇರಿಸಿ ನೋಡಿಕೊಂಡರು. ನಾಗವೇಣಿಯು ಜ್ವರದಿಂದ ಎಚ್ಚರವಾಗುವಷ್ಟರಲ್ಲಿ ಸತ್ಯಭಾಮೆಯು ಜ್ವರದಿಂದ ಸಾವನ್ನಪ್ಪಿದ್ದಳು. ಎಲ್ಲಾ ಕಾರ್ಯಗಳನ್ನು ನಾರಾಯಣಯ್ಯರವರೆ ಮಾಡಿ ಮುಗಿಸಿದರು. ನಾರಾಯಣಯ್ಯನವರ ಪಾತ್ರ ಚಿಕ್ಕದಾದರೂ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ

ಲಚ್ಚ (ಲಕ್ಷ್ಮೀನಾರಾಯಣ)

ಐತಾಳ ಮತ್ತು ಸತ್ಯಭಾಮೆಯರ ಮಗ.ಪಾರೋತಿಗೆ ಹಲವು ವರ್ಷಗಳು ಕಳೆದರು ಮಕ್ಕಳಾಗದಿದ್ದಾಗ ಐತಾಳರು ಸತ್ಯಭಾಮೆಯನ್ನು ಎರಡನೆ ಮದುವೆ ಮಾಡಿಕೊಳ್ಳುತ್ತಾರೆ.ಆಗ ಐತಾಳರಿಗೆ ಲಚ್ಚ ಮತ್ತು ಸುಬ್ಬಿ ಎಂಬ ಇಬ್ಬರು ಮಕ್ಕಳು ಹುಟ್ಟುತ್ತಾರೆ. ಮಕ್ಕಳೆ ಇಲ್ಲದ ಮನೆಯಲ್ಲಿ ಲಚ್ಚ ಹುಟ್ಟಿದಾಗ ಮನೆಯಲ್ಲಿ ಸಂತೋಷ, ಸಂಭ್ರಮ ಮನೆ ಮಾಡಿತ್ತು. ಲಚ್ಚ ಮನೆಯವರ ಎಲ್ಲರ ಪ್ರೀತಿಗೆ ಪಾತ್ರನಾಗಿ ಬೆಳೆಯತೊಡಗುತ್ತಾನೆ. ಲಚ್ಚನು ಬೆಳೆದು ಶಾಲೆಗೆ ಸೇರುವ ವಯಸ್ಸಾದಾಗ ಮನೆಯಲ್ಲಿ ಚರ್ಚೆ ನಡೆಯುತ್ತದೆ. ಲಚ್ಚನನ್ನು ಮಠದ ಶಾಲೆಗೆ ಸೇರಿಸಬೇಕೊ ಅಥವಾ ಇಂಗ್ಲೀಷ್ ಶಾಲೆಗೆ ಸೇರಿಸಬೇಕೊ ಎಂದು ಪಾರೋತಿ ಸರಸೋತಿಯರು ಅವರ ಮಕ್ಕಳು ಅವರ ಇಷ್ಟ

ಎಲ್ಲಿಗಾದರು ಸೇರಿಸಲಿ ಎಂದು ಸುಮ್ಮನಾಗುತ್ತಾರೆ.ಐತಾಳರಿಗೆ ಮಗನು ತನ್ನಂತೆ ಬರಿ ಪೌರೋಹಿತಿಕೆಯನ್ನು ಮಾಡಿಕೊಂಡು ಜೀವನ ನಡೆಸುವುದು ಇಷ್ಟವಿರಲಿಲ್ಲ. ಮಗನು ಇಂಗ್ಲೀಷ್ ಶಿಕ್ಷಣ ಕಲಿತು ಒಬ್ಬ ದೊಡ್ಡ ಆಫೀಸರ್ ಆಗಬೇಕು ಎನ್ನುವ ಕನಸನ್ನು ಹೊಂದಿದರು.

ಪೌರೋಹಿತಿಕೆ ಮಾಡುವ ಐತಾಳರಿಗೆ ಎಲ್ಲಿಯೂ ಹೆಚ್ಚಿಗೆ ಮರ್ಯಾದೆ ಸಿಗುತ್ತಿರಲಿಲ್ಲ. ಆದ್ದರಿಂದ ತನ್ನ ಮಗನನ್ನು ದೊಡ್ಡ ಆಫೀಸರ್ ಮಾಡಬೇಕೆಂಬ ಬಯಕೆಯನ್ನು ಹೊಂದಿದರು.ಅದರಂತೆ ಅವರ ತಾತನ ಮನೆಯಲ್ಲಿ ಇರಿಸಿ ಲಚ್ಚನಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡಿಸುತ್ತಾರೆ. ಲಚ್ಚನು ಬಹಳ ಚೆನ್ನಾಗಿ ಓದುತ್ತಿರುತ್ತಾನೆ. ಪ್ರಾಯಕ್ಕೆ ಬಂದಾಗ ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಹೋಗುತ್ತಾನೆ ಆತನಿಗೆ ಸಿಗುವ ಸ್ನೇಹಿತರು ಜೂಜು, ಸಿಗರೇಟು ಇವುಗಳಲ್ಲೆ ಪ್ರತಿದಿನ ಕಳೆಯುವ ಸ್ನೇಹಿತರು ಸಿಗುತ್ತಾರೆ.ಎಲ್ಲರು ಇವನಿಗಿಂತ ದೊಡ್ಡವರು ಲಚ್ಚನಿಗೆ ಆ ವಯಸ್ಸಿನಲ್ಲಿ ಆಕರ್ಷಣೆಗಳು ಹೆಚ್ಚಾಗಿ ಆತನೂ ಅವುಗಳಿಗೆ ದಾಸನಾಗುತ್ತಾನೆ. ವಿದ್ಯಾಭ್ಯಾಸದ ಮೇಲಿನ ಗಮನ ಕಡಿಮೆಯಾಗುತ್ತಾ ಹೋಗುತ್ತದೆ.

"ಕಾರಂತರಿಗೆ ಇಂಗ್ಲೀಷ್ ಕೇವಲ ಬದುಕನ್ನು ಉತ್ತಮ ಮಾಡಿಕೊಳ್ಳಲು ಇರುವ ಒಂದು ಸಾಧನ ಮಾತ್ರ ಅದು ವಿಮೋಚನೆಯ ಅಸ್ತ್ರವಲ್ಲ."[5]

ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಲಚ್ಚನು ತಂದೆಯ ಬಳಿ ಮತ್ತು ತಾತನ ಬಳಿ ಹಣವನ್ನು ಸುಳ್ಳು ಹೇಳಿ ಪಡೆಯುತ್ತಿರುತ್ತಾನೆ. ಈ ವಿಷಯ ಐತಾಳರಿಗೆ ತಿಳಿಯುತ್ತದೆ. ಮಗನು ಇಬ್ಬರ ಬಳಿಯಲು ಹಣವನ್ನು ಪಡೆಯಲು ಕಾರಣವೇನು ಎಂದು ಪತ್ತೆ ಅಚ್ಚಿದಾಗ ಮಗನು ವಿದ್ಯಾಭ್ಯಾಸ ಮರೆತು ಕೆಟ್ಟ ಚಟಗಳಿಗೆ ದಾಸನಾಗಿರುವುದು ತಿಳಿಯುತ್ತದೆ. ಐತಾಳರು ಮನಸ್ಸಿನಲ್ಲಿ ಮಗನ ಬಗೆ ಕಟ್ಟಿದ ಕನಸಿನ ಗೋಪುರ ಒಡೆಯುತ್ತದೆ. ಮಗನಿಗೆ ಬೈದು ಬುದ್ದಿ ಹೇಳಿ ಅವರೂರಿನ ಹೋಟೆಲಿನಲ್ಲಿ ಬಂದು ಇರುವಂತೆ ಜೊತೆಗೆ ಅಲ್ಲಿಯೆ ಊಟ ಮಾಡುವಂತೆ ತಿಳಿಸಿ ಊರಿಗೆ ಬರುತ್ತಾರೆ. ಊರಿಗೆ ಹಿಂದಿರುಗುವಾಗ ಹೋಟೆಲಿನ ಹುಡುಗನಿಗೆ ಲಚ್ಚನ ಮೇಲೆ ಗಮನ ಅರಿಸುವಂತೆ ಹೇಳಿ ಹೊರಡುತ್ತಾರೆ.

ಲಚ್ಚನ ಸ್ನೇಹಿತರು ದೂರವಾಗುತ್ತಾರೆ. ಲಚ್ಚನು ಆ ವರ್ಷ ಪರೀಕ್ಷೆಯಲ್ಲಿ ಪಾಸಾಗುತ್ತಾನೆ. ವಯಸ್ಸಿನ ಮದದಲ್ಲಿರುವ ಲಚ್ಚನಿಗೆ ಹೋಟೆಲಿನ ಯಜಮಾನಿ ಮೀನಾಕ್ಷಿಯ ಮೇಲೆ ಮನಸ್ಸಾಗುತ್ತದೆ. ಈ ವಿಷಯ ಆಕೆಯ ಗಂಡನಿಗೆ ತಿಳಿದು ಐತಾಳರಿಗೆ ಪತ್ರ ಬರೆಯುತ್ತಾನೆ. ರಜೆಗೆ ಲಚ್ಚನು ಊರಿಗೆ ಹೋಗುತ್ತಾನೆ. ಮನೆಯವರ ಮೇಲೆ ಪ್ರೀತಿಯಿಂದ ಹೋಗುವುದಿಲ್ಲ. ಹೋಗದಿದ್ದರೆ ಬೈಯುತ್ತಾರೆ ಎನ್ನುವ ಸಂಕಟಕ್ಕೆ ಹೋಗುತ್ತಾರೆ. ಊರಿಗೆ ಹೋದರು ಯಾರ

5. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ, ಡಾ॥ ಎಂ ಎನ್ ನಂದೀಶ್ ಹಂಚಿ. ಪು.ಸಂ 288. ಮುದ್ರಣ 2014

ಬಳಿಯೂ ಮಾತನಾಡುವುದಿಲ್ಲ. ಶೀನಮಯ್ಯನ ಮಗ ಒರಟನ ಜೊತೆಯಲ್ಲಿ ಇವನ ಮಾತುಕತೆಗಳು ನಡೆಯುತ್ತವೆ.

ಒಮ್ಮೆ ಹೊನ್ನೆತೋಪಿನಲ್ಲಿ ಸರಸೋತಿಯು ಅಡ್ಡಾಡುವಾಗ ಅವಳ ಕಣ್ಣಿಗೆ ಲಚ್ಚ ಕಾಣಿಸುತ್ತಾನೆ. ಯಾರ ಜೊತೆಯಲ್ಲೊ ಮಾತನಾಡುತ್ತಿರುವುದನ್ನು ಗಮನಿಸಿ ಯಾರೆಂದು ತಿಳಿಯಲು ಹತ್ತಿರ ಹೋದಾಗ ಯಾವುದೋ ಹೆಂಗಸು ಅಲ್ಲಿಂದ ಹೋದಂತೆ ಅನಿಸಿ ಮುಂದೆ ಹೋಗಿ ನೋಡಿದಾಗ ಅದು ಈ ಊರಿನ ಸೊಸೆ ವೀನಾಕ್ಷಿ. ಲಚ್ಚನು ಅಡ್ಡದಾರಿ ಹಿಡಿದಿರುವುದು ತಿಳಿದು ಈ ವಿಷಯವನ್ನು ಐತಾಳರಿಗೆ ತಿಳಿಸುತ್ತಾಳೆ. ಅಣ್ಣ ಲಚ್ಚನಿಗೆ ಬಹಳ ಬೇಗ ಮದುವೆಯನ್ನು ಮಾಡಬೇಕು ಇಲ್ಲವಾದರೆ ಅವನು ಯಾರ ಕೈಗು ಸಿಗುವುದಿಲ್ಲ. ಇಂದು ಲಚ್ಚನ ಲೀಲೆಯನ್ನು ನನ್ನ ಕಣ್ಣುಗಲಿಂದಲೆ ನಾನೆ ನೋಡಿದೆ ಎಂದಾಗ ಐತಾಳರು ಲಚ್ಚನನ್ನು ಕೇಳಿದಾಗ ಯಾವ ಉತ್ತರವನ್ನು ನೀಡುವುದಿಲ್ಲ ಐತಾಳರಿಗೆ ಲಚ್ಚನ ವಿದ್ಯಾಭ್ಯಾಸದ ಚಿಂತೆ.

ಮದುವೆ ಮಾಡಿದರೆ ಮಗನು ಸಂಸಾರದ ತಾಪತ್ರಯದಲ್ಲಿ ಮುಳುಗುತ್ತಾನೆ. ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲುತ್ತದೆ ಮಗನು ಆಪೀಸರ್ ಆಗೋದಿಕ್ಕೆ ಆಗೋದಿಲ್ಲ ಎಂಬ ಯೋಚನೆಯಿಂದ ಲಚ್ಚನ ಮದುವೆಯನ್ನು ಮುಂದೂಡುತ್ತ ಬಂದರು. ಐರೋಡಿಯಲ್ಲಿಯ ವಾಸುದೇವಯ್ಯನವರು ವಕೀಲರು ಲಚ್ಚನ ಮುಂದಿನ ವಿದ್ಯಾಭ್ಯಾಸ ಕುರಿತು ಮಾತನಾಡಲು ಲಚ್ಚನನ್ನು ಜೊತೆಯಲ್ಲಿ ಕರೆದುಕೊಂಡು ವಕೀಲರ ಮನೆಗೆ ಹೋಗುತ್ತಾರೆ. ವಕೀಲರು ಲಚ್ಚನ ಇಂಗ್ಲೀಷ್ ಜ್ಞಾನವನ್ನು ನೋಡಿ ತಮ್ಮ ಮಗಳನ್ನು ಈತನಿಗೆ ಕೊಟ್ಟು ಮದುವೆ ಮಾಡುವ ಮನಸ್ಸಿನ ಹಿಂಗಿತವನ್ನು ಹೇಳುತ್ತಾರೆ. ನಿಮ್ಮ ಮಗನನ್ನು ವಕೀಲನನ್ನಾಗೊ, ಆಫೀಸರಾಗೋ ಮಾಡಬಹುದು ಮುಂದೆ ಬಿ.ಎ. ಓದಲಿ ನನ್ನ ಮಗಳನ್ನು ನಿಮ್ಮ ಮಗನಿಗೆ ಮದುವೆ ಮಾಡುವ ಅಂದುಕೊಂಡೆವು ಎಂದಾಗ ಐತಾಳರಿಗೆ ತಾಳದ ಆನಂದವಾಯಿತು. ಮದುವೆ ಮುಗಿಯುತು. ಲಚ್ಚನನ್ನು ತಾನೆ ಓದಿಸುವುದಾಗಿ ವಕೀಲರು ತಿಳಿಸಿದರು. ಕೆಲವು ದಿನಗಳ ನಂತರೆ ಐತಾಳರಿಗೆ ಪತ್ರ ಬಂದಿತ್ತು. ನಿಮ್ಮ ಮಗನಿಗೆ ಬೇರೆ ಮದುವೆಯನ್ನು ಮಾಡಬಹುದು ಎಂದು ಇದನ್ನು ಕಂಡು ಗಾಬರಿಯಾಗಿ ಏನೆಂದು ಸರಿಯಾಗಿ ವಿಚಾರಿಸಿದಾಗ ನಾಗವೇಣಿಗೆ ಗರ್ಭಪಾತವಾಗಿತ್ತು, ಲಚ್ಚನಿಗೆ ಕೆಟ್ಟ ಚಟಗಳಿಂದ ಅಂಟಿದ ಕಾಯಿಲೆಯಿಂದ. ಇದನ್ನು ತಿಳಿದು ಐತಾಳರು ಮಗನ ಮೇಲಿನ ಆಸೆಯನೆ ಬಿಟ್ಟರು.

ಲಚ್ಚನನ್ನು ನಂಬದೆ ಐತಾಳರು ಆಸ್ತಿಯಲ್ಲಿ ಮುಕ್ಕಾಲು ನಾಗವೇಣಿಯ ಹೆಸರಿಗೆ ಬರೆದರು. ಇದರಿಂದ ಇನ್ನೂ ಕೋಪಿಷ್ಟನಾದ ಲಚ್ಚ. ಎಂಥ ಪ್ರಕೃತಿಯನ್ನು ಎದುರಿಸಿ ಬಾಳಿದ ಐತಾಳ ಪಾರೋತಿಯರು ಲಚ್ಚನ ದುರ್ವರ್ತನೆಯಿಂದ ಕೊರಗಿ ಮರಣ ಹೊಂದುತ್ತಾರೆ. ನಾಗವೇಣಿಯು ಲಚ್ಚನನ್ನು ಒಬ್ಬ ಮನುಷ್ಯನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾಳೆ. ಆದರೆ ಆಕೆಯು ನಂಬಿ

ಎಂದು ಒಪ್ಪಿಕೊಂಡರು.ಅವನು ಕೊಡುವ ಹಣವನ್ನು ಅವನಿಗೆ ತಿಳಿಯದಂತೆ ನಾಗವೇಣಿಗೆ ಕಳುಹಿಸುತ್ತಿದ್ದಳು ಅವನ ಚಿಕ್ಕಮ್ಮ.

ರಾಮನು ವಿದ್ಯಾಭ್ಯಾಸದ ಜೊತೆಗೆ ಮನೆಪಾಠದ ಕೆಲಸವನ್ನು ಹುಡುಕಿಕೊಂಡು ಹಣವನ್ನು ಸಂಪಾದಿಸಿಕೊಂಡು ಓದನ್ನು ಮುಂದುವರಿಸಿದ. ಹೀಗೆ ಕೆಲವು ದಿನಗಳು ಕಳೆದವು. ವಿದ್ಯಾಭ್ಯಾಸ ಮುಗಿಯುತ್ತಾ ಬಂದಿತ್ತು. ಮನೆ ಪಾಠದ ಕೆಲಸವು ಕೈತಪ್ಪಿತು. ಪರೀಕ್ಷೆ ಹತ್ತಿರ ಬರುತ್ತಿತ್ತು, ತಾನು ಪರೀಕ್ಷೆಗೆ ಓದಿಕೊಳ್ಳಲು ಮನೆ ಪಾಠಗಳನ್ನೆಲ್ಲ ಬಿಟ್ಟನು. ಓದುತ್ತಿರುವಾಗಲೆ ಸ್ವಾತಂತ್ರ್ಯ ಚಳುವಳಿಗೆ ದುಮುಕಿದನು. ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸದ್ದರಿಂದ ರಾಮನು ಪೋಲೀಸರಿಂದ ಪೆಟ್ಟು ತಿಂದು ಆಸ್ಪತ್ರೆಯನ್ನು ಸೇರಿದನು. ನಂತರ ಆತನಿಗೆ ಸೆರೆಮನೆಯನ್ನು ಸೇರುತ್ತಾನೆ. ಅಲ್ಲಿ ಆತನಿಗೆ ರಾಜಕೀಯ ಪ್ರತಿಕೂಲದ ಕೆಲವು ಅನುಭವಗಳು ಆಗುತ್ತವೆ. ಆಗ ರಾಮನು ತನ್ನ ಭವಿಷ್ಯವನ್ನು ನಾನೇ ಹಾಳು ಮಾಡಿಕೊಳ್ಳುತ್ತಿದ್ದೇನಲ್ಲ ಎಂದು ಜಗತ್ತಿನ ಉದ್ದಾರಕ್ಕೆ ಕೈ ಹಾಕಲು ಬಯಸುವುದಿಲ್ಲ. ಊರಿಗೆ ಮರಳುತ್ತಾನೆ ಅಲ್ಲಿ ಕಾಂಗ್ರೆಸ್ ಪಕ್ಷದ ಕಛೇರಿಯನ್ನು ತೆರೆಯುತ್ತಾನೆ. ಕೆಲವು ದಿನಗಳಲ್ಲಿ ಅದು ಮುಚ್ಚಿ ಹೋಗುತ್ತದೆ. ರಾಮನು ಬಿ.ಎ. ಮುಗಿಸಿದ ನಂತರ ತನ್ನ ತಾಯಿಯ ದುಃಖ ಸ್ಥಿತಿಯನ್ನು ಕಂಡು ಮರುಗಿದ.ನರಸಿಂಹಯ್ಯನವರ ಸಲಹೆಯ ಮೇರೆಗೆ ಬೆಂಗಳೂರಿನಲ್ಲಿ ಅವರ ಹೋಟೆಲಿಗೆ ಕೆಲಸಕ್ಕೆ ಸೇರುತ್ತಾನೆ. ವಿಶ್ರಾಂತಿಯೆ ಇಲ್ಲದಷ್ಟು ಕೆಲಸದಿಂದ ರಾಮನಿಗೆ ಬೇಸರವಾಗುತ್ತದೆ. ಅದೆ ಸಂದರ್ಭದಲ್ಲಿ ನರಸಿಂಹಯ್ಯನವರ ಮೈಸೂರಿನಲ್ಲಿರುವ ಹೋಟೆಲಿಗೆ ಹುಡುಗನ ಅವಶ್ಯಕತೆ ಇರುತ್ತದೆ. ಆ ಸ್ಥಾನಕ್ಕೆ ರಾಮನೆ ಸರಿಯಾದವನೆಂದು ಆತನನ್ನು ಮೈಸೂರಿಗೆ ವರ್ಗ ಮಾಡುತ್ತಾರೆ. ಮೈಸೂರಿನ ಹೋಟೆಲಿನಲ್ಲಿದ್ದ ಕೇಶವನ ಸಹಾಯದಿಂದ ತನ್ನ ತಂದೆ ಇರುವ ಸ್ಥಳವನ್ನು ತಿಳಿದುಕೊಂಡ ತನ್ನ ತಂದೆಯನ್ನು ಕಾಣುವ ಹಂಬಲದಿಂದ ಕೇಶವನ ಜೊತೆಯಲ್ಲಿ ಹೋಗುತ್ತಾನೆ. ಅವರಿದ್ದ ಒಂದು ರೂಮ್ ತುಂಬಾ ಗಲೀಜಾಗಿತ್ತು. ಒರಟ ಮತ್ತು ಲಚ್ಚನು ಇಸ್ಪೀಟಾಡುತ್ತಿದ್ದರು.

ರಾಮ ಬಂದಿದ್ದನ್ನು ನೋಡಿದರು ರಾಮ ತನ್ನ ಮಗನೆಂದು ತಿಳಿದರು ಯಾವುದೇ ರೀತಿಯ ಪುತ್ರ ವಾತ್ಸಲ್ಯವು ಇಲ್ಲದೆ ಆತನನ್ನು ಮಾತನಾಡಿಸದೆ ತಮ್ಮಷ್ಟಕ್ಕೆ ತಾವೆ ಇಸ್ಪೀಟಾಡುತ್ತ ಕುಳಿತರು. ತುಂಬ ಹೊತ್ತಿನ ಬಳಿಕ ಲಚ್ಚನು ಒರಟನ ಮೂಲಕ 'ಅವನು ಯಾವಾಗ ಇಲ್ಲಿಗೆ ಬಂದಿದ್ದಂತೆ? ಎಲ್ಲಿದ್ದಾನಂತೆ?' 13 (ಪು.377) ಎಂದು ಮಾತನಾಡಿಸುತ್ತಾನೆ. ಮಗನೊಡನೆ ಮಾತನಾಡದ ಆ ದೊಡ್ಡಸ್ತಿಕೆಯು ಅವನಿಗೆ ಅಸಹ್ಯವಾಗುತ್ತದೆ. ತಂದೆಯ ಬೇಜವಾಬ್ದಾರಿತನ ಪ್ರೀತಿ ಮಮತೆಯಿಲ್ಲದ ಬರಡು ವಿಲಾಸಿ ಬದುಕು ರಾಮನಿಗೆ ಅಸಹ್ಯ ತರಿಸುತ್ತದೆ.

ರಾಮನು ಒಂದು ಒಳ್ಳೆಯ ಕೆಲಸವನ್ನು ನಿರೀಕ್ಷಿಸಿ ಮುಂಬಯಿಗೆ ತೆರಳುತ್ತಾನೆ. ಅಲ್ಲಿ ಫ್ರೆಂಡ್ಸ್ ರೂಮಿನಲ್ಲಿ ಉಳಿಯುತ್ತಾನೆ. ಎಷ್ಟು ಹುಡುಕಿದರು ಕೆಲಸ ಸಿಗದೆ ನಿರುದ್ಯೋಗಿಯಾಗಿಯೇ ಉಳಿಯಬೇಕಾಗುತ್ತದೆ ಕೊನೆಗೆ ಸಂಗೀತದ ಮನೆ ಪಾಠಗಳನ್ನು ಆಯ್ಕೆ ಮಾಡಿಕೊಂಡು ಕೆಲವು ದಿನಗಳನ್ನು ಕಳೆಯುತ್ತಾನೆ. ರಾಮ ಕಿಸೆಯಲ್ಲಿದ್ದ ಹಣವು ಬರಿದಾಗಲು ಬಲುದೂರವಿರಲಿಲ್ಲ. ಸಂಗೀತದ ಮನೆ ಪಾಠವು ಸಹ ನಿಂತು ಹೋಯಿತು. ಕೆಲವು ದಿನಗಳ ನಂತರ ರಾಮನ ತಾಯಿಯಿಂದ ಪತ್ರ ಬಂದಿತ್ತು ಕೋಡಿಯಲ್ಲಿರುವ ಮನೆಯ ಗೋಡೆಯು ಬಿದ್ದು ಕರಡಿಗೆ ದೊರೆಯಿತು, ಅದರಲ್ಲಿ ಹಣ ಸಿಕ್ಕಿತು. ನೀನು ಅಲಿ ಕೆಲಸ ಹುಡುಕುವ ಅವಶ್ಯಕತೆ ಇಲ್ಲ ಇಲ್ಲಿಗೆ ಬಂದು ಬಿಡು ಗೇಣಿಗೆ ಸ್ವಲ್ಪ ಜಮೀನನ್ನು ತೆಗೆದುಕೊಂಡು ಇಲ್ಲೆ ನಟ್ಟು, ಬಿತ್ತಿ, ಕೊಯ್ದು ಬದುಕನ್ನು ಕಳೆಯುವ ಎಂದೂ ಬರೆದಿದ್ದಳು.

ರಾಮನು ಮೈಸೂರು, ಮುಂಬೈ ಅಲೆದಾಟದಲ್ಲಿ ಅಂತರಂಗ ಕದಡಿ ನಿರಾಶೆಗೊಂಡರು ಅವನು ಅನುಭವಗಳಿಂದ ಪಕ್ವತೆಯನ್ನು ಹೊಂದಿದ್ದನು. ನಗರದಲ್ಲಿ ವಿದ್ಯಾಭ್ಯಾಸ ಪಡೆಯುತ್ತಾನಾದರು ಅಲ್ಲಿಯ ವಿಲಾಸಿ ಜೀವನದಲ್ಲಿ ಮುಳುಗುವುದಿಲ್ಲ. ಅಲ್ಲಿನ ವ್ಯವಸ್ಥೆ ಅವನ ಓದಿಗೆ ತಕ್ಕ ಉದ್ಯೋಗವನ್ನು ನೀಡದಿದ್ದರು ನಿರಾಶೆಗೊಳ್ಳುವುದಿಲ್ಲ. ತನ್ನ ತಾಯಿ ಅನುಭವಿಸಿದ ನೋವುಗಳು ರಾಮನಿಗೆ ಸದಾ ನೆನಪಿನಲ್ಲಿದ್ದವು.

ತಾನು ಮಾವನ ಮನೆಯಲ್ಲಿದ್ದಾಗ ಅವನನ್ನು ನಡೆಸಿಕೊಳ್ಳುತ್ತಿದ್ದ ರೀತಿ ಅವನಿಗೆ ಒಂದು ತರಹದ ಅನುಭವವನ್ನು ನೀಡಿದವು. ಅನುಭವದಲ್ಲಿ ಬೆಂದ ವ್ಯಕ್ತಿ ಯಾವುದೆ ಕಾರಣಕು ತಪ್ಪುದಾರಿಯನ್ನು ಹಿಡಿಯುವುದಿಲ್ಲ ಅದೆ ರೀತಿ ರಾಮನ ಜೀವನದಲು ಆಗಿರುವುದ.ರಾಮನು ಆಧುನಿಕ ಪ್ರಭಾವಗಳಿಂದ ಬಿಡುಗಡೆಗೊಂಡು ತನ್ನ ನಿಸರ್ಗಕ್ಕೆ ಮರಳುತ್ತಾನೆ. "ರಾಮ ಲಘು ಮನಸ್ಸಿನವನು ಅಲ್ಲದೆ ಕೋಡಿಯ ನೆಲ ಕಡಲದಂಡೆ ಮತ್ತು ಇವು ಯಾವಾಗಲೂ ಅವನ ಪಾಲಿಗೆ ಸಮಾಧಾನದ ನೆಲೆಯಾಗಿವೆ."[6] ಹೀಗೆ ರಾಮನು ತನ್ನ ತಾತನ ಹೆಸರನ್ನು ಉಳಿಸುತ್ತಾನೆ.

ಸ್ತ್ರೀ ಪಾತ್ರಗಳು

ಪಾರೋತಿ

ಪಾರೋತಿ ರಾಮಐತಾಳರ ಹೆಂಡತಿ. ಈಕೆಯು ಐತಾಳರಿಗಿಂತ ಸಾಗುವಳಿಯಲ್ಲಿ ನಿಪುಣೆಯಾಗಿದ್ದಳು. ಮನೆಯ ಎಲ್ಲರ ಹೊರೆ ತನ್ನದೆಂದು ಭಾವಿಸುವ ಭಾವಜೀವಿ. ಮದುವೆಯಾಗಿ ಇಷ್ಟು ವರ್ಷವಾದರು ತನಗೆ ಮಕ್ಕಳಿಲ್ಲವೆಂಬ ಕೊರಗು ಆಕೆಯನ್ನು ಕಾಡುತ್ತಿತ್ತು.

6. ವಿಮರ್ಶೆಯ ವಿನಯ,ಕಾದಂಬರಿ,ಕೀರ್ತಿನಾಥ ಕುರ್ತಕೋಟಿ ಪುಸಂ–53 ಮುದ್ರಣ 1996.

'ಮನುಷ್ಯನಾಗಿ ಹುಟ್ಟಿ ಫಲವೇನು'14 (ಪು. 11) ಎಂದು ಅವಳ ಕಣ್ಮುಂದೆ ಪ್ರಶ್ನೆ ಕಾಣಿಸುತ್ತದೆ. ಇದರ ಮಧ್ಯೆ ಹಗಲು ರಾತ್ರಿಗಳೂ ದುಡಿಯುವುದು ಬಿತ್ತುವುದು ಬೆಳೆಯುವುದರಲ್ಲೆ ದಣಿದಳು. ಆ ಕೆಲಸ ಈ ಕೆಲಸ ಇವುಗಳಲ್ಲಿ ಆಕೆಗೆ ರಾಮ ರಾಮ ಎಂದು ಭಜನೆಯನ್ನು ಮಾಡಲು ಸಮಯ ಸಾಲುತ್ತಿರಲಿಲ್ಲ. ಈಕೆಯು ಸಹ ಒಂದು ಕೂಸನ್ನು ಪಡೆದು ಸುಖವಾಗಿರಬೇಕೆಂಬ ಬಯಕೆಯು ಈಡೇರಲಿಲ್ಲ. "ಸಂಸಾರಕ್ಕೆ ಬಂದು ಬಂಜೆಯಾಗಿ ಸಾಯಬೇಕೆ?"15 (ಪು. 11) ಎಂಬ ವಿಷಯ ಮನಸ್ಸಿಗೆ ಬಂದರೆ ಜೀವನ ಬೇಡವೆನಿಸುವಷ್ಟು ನೋವನ್ನು ಅನುಭವಿಸುವಳು.

ಮಕ್ಕಳಾಗಲೆಂದು ಹರಕೆಗಳನ್ನು ಮಾಡಿಕೊಂಡಳು, ಅದರಿಂದ ಏನು ಪ್ರಯೋಜನವಾಗಲಿಲ್ಲ. ಐದಾರು ವರ್ಷ ಹಾಗೆಯೇ ಕನಸಿನಲ್ಲಿ ಕಳೆದಳು. ಇಂದಲ್ಲನಾಳೆ ನನಗು ಮಕ್ಕಳಾಗುತ್ತವೆಂದು, ಹತ್ತು ವರ್ಷವಾದರು ಮಕ್ಕಳಾಗದಿದ್ದಾಗ ಬಹಳ ಸಂಕಟವನ್ನು ಅನುಭವಿಸಿದಳು. ಅವಳ ನೆರೆಕೆರೆಯ ತಂಗಿಯರು ಅವಳಿಗೂ ಕಿರಿಯರಾಗಿ ಬೆತ್ತಲೆ ತಿರುಗಿದವರು ಇಂದು ತಮ್ಮ ತಮ್ಮ ಕೂಸುಗಳನ್ನು ಎತ್ತಿ ತಿರುಗಾಡುತ್ತಿದ್ದಾರೆ. ತಾನು ಪಾಪಿ ತನ್ನ ಪೂರ್ವ ಜನ್ಮದ ಕರ್ಮದ ಫಲದಿಂದ ನನಗೆ ಮಕ್ಕಳಾಗಿಲ್ಲ ಎಂದು ತನ್ನನ್ನು ತಾನೆ ಶಪಿಸಿಕೊಳ್ಳುತ್ತಾಳೆ.

ಹೊಟ್ಟೆಯಲ್ಲಿ ತುಂಬಿದ ತನ್ನೆಲ್ಲ ಪ್ರೀತಿಯನ್ನು, ಮಮತೆಯನ್ನು ಅವಳು ಯಾರಮೇಲೆ ಕಳೆಯಬೇಕು, ಐತಾಳರೋ ಹಗಲು ಮನೆಯಲ್ಲಿರುವುದೇ ಕಡಿಮೆ, ಇದ್ದರೂ ಹೆಂಡತಿಯೊಡನೆ ಪ್ರೀತಿಯಿಂದ ಮಾತನಾಡಿ ಲಲ್ಲೆ ಹೊಡೆಯುವವರಲ್ಲ. ಗಂಡಸು ಹೇಗೆ ಬಿಗುವರಿತು ಇರಬೇಕು ಎಂಬುದನ್ನು ಬಲ್ಲವರು. ಹಗಲಿನಲ್ಲಿ ದಾಂಪತ್ಯ ಈ ರೀತಿಯಾದರೆ ರಾತ್ರಿ ಹಗಲೆಲ್ಲ ದುಡಿದ ಜೀವಕ್ಕೆ ಕರೆಯುವ ಮೊದಲೆ ನಿದ್ರೆ ಬರುತ್ತದೆ. ಅಂತು ಅವರ ಸಾಂಪ್ರದಾಯಿಕ ಸಂಸಾರದಲ್ಲಿ ಆಚಾರ, ಕಟ್ಟಲೆ ರಿವಾಜುಗಳ ಮಿತಿಯಲ್ಲೇ ಮಮತೆಯು ಸರಿಯಬೇಕು. ಇತ್ತ ತನ್ನಂತೆ ಕೊರಗಿಗೂ ಮನೆಯಲ್ಲಿ ಭಾಗಿಯಾಗಿರುವ ಸರಸೋತಿಯೆಂದರೆ ಅವಳಿಗೆ ಆದರ, ಸಹನೆ, ಮರ್ಯಾದೆ. ಅವಳ ಮೇಲೆ ಮುದ್ದು ಹಾಗೆ ನೈವೇದ್ಯಕೆ ಹಾಲನ್ನು ಕೊಡುವ ಕೌಳಿ ಬಣ್ಣದ ದನ ಗೋಪಿಯನ್ನು ಆದರಿಸಿದಷ್ಟು ಸಾಲದು, ಅದರ ಕರುಗಳನ್ನು ಮುದ್ದಿಸಿದಷ್ಟು ತೀರದು, ಮಾತನಾಡಿದಷ್ಟು ಸಾಲದು, ತಾಯ್ತನದ ತುಡಿತವನ್ನು ಆಕೆಯು ಈ ಮೂಕ ಪ್ರಾಣಿಗಳ ಜೊತೆಹಂಚಿಕೊಳ್ಳುವ ಬಗೆ ಮನಸ್ಸನು ಕಲುಕುವಂತಹುದು. ತನಗೆ ಮಕ್ಕಳಿಲ್ಲ ಎಂಬ ಕೊರಗನು ಹಸು-ಕರುಗಳನ್ನು ಮುದ್ದಾಡಿ ಮಾತನಾಡಿಸಿ ತೀರಿಸಿಕೊಳ್ಳುವಳು. ದತ್ತು ಮಕ್ಕಳನ್ನು ತೆಗೆದುಕೊಳ್ಳುವಂತೆ ಸರಸೋತಿ ಪಾರೋತಿಗೆ ತಿಳಿಸುತ್ತಾಳೆ. ಈ ವಿಷಯ ಐತಾಳರಿಗೆ ತಿಳಿಯುತ್ತದೆ. ಐತಾಳರು ಪಾರೋತಿಗೆ ಮಕ್ಕಳೆ ಆಗುವುದಿಲ್ಲವೆಂದು ತಿಳಿದಾಗ ಮನೆಯಲ್ಲಿ ಯಾರಿಗೂ ತಿಳಿಯದಂತೆ ಎರಡನೆ ಮದುವೆಯನ್ನು ನಿಶ್ಚಯಿಸಿಕೊಂಡು ಬಂದಿರುತ್ತಾರೆ. ಈ ವಿಚಾರವು ಪಾರೋತಿಗೆ ತಿಳಿಯುತ್ತದೆ. ಕೆಲಸದ ಮೇಲೆ

ಮೂರು ದಿನ ಬೇರೆ ಊರಿಗೆ ಹೋಗಿದ್ದ ಐತಾಳರು ಮನೆಗೆ ಬಂದು ಕಾಲನ್ನು ತೊಳೆಯುತ್ತ ಶೀನಮಯ್ಯನ ಜೊತೆ ಮಾತನಾಡುವಾಗ ಪಾರೋತಿಯು ಕೇಳಿಸಿಕೊಳ್ಳುತ್ತಾಳೆ. ಶೀನಮಯ್ಯ "ಐತಾಳರೆ ಹೆಣ್ಣು ಮಾತ್ರ ಯಾರ್‍ಯಾರು ಶಿವಳ್ಳಿ ಎಂದು ಹೇಳಲಿಕ್ಕಿಲ್ಲ. ಹೇಟು ಕೋಟದ್ದೇ" 16 (ಪು. 57) ಗೀರು ಕುಂಕುಮವನ್ನು ಇಡುವ ಬದಲು ಅಡ್ಡ ಕುಂಕುಮ ಇಟ್ಟರೆ ಸಾಕು ಎಂದು ಶೀನಮಯ್ಯ ಐತಾಳರು ಎರಡನೆ ಮದುವೆಯಾಗುವ ಹುಡುಗಿಯ ಬಗ್ಗೆ ಎಂದು ಪಾರೋತಿಗೆ ತಿಳಿಯಿತು. ನಿಮ್ಮಿಂದಾಗಿ ನನಗು ಸಹ ಸನ್ಮಾನ ಗಡದ್ದಾಗಿ ಆಯಿತು ಎಂದು ಇಬ್ಬರು ಮಾತನಾಡಿಕೊಳ್ಳುವಾಗ ಪಾರೋತಿ ಮನೆಯ ಒಳಗಿನಿಂದ ಎಲ್ಲವನ್ನು ಕೇಳಿಸಿಕೊಂಡಳು.

ಪಾರೋತಿಯು ದತ್ತು ಮಗುವನ್ನು ಬೇಕು ಎಂದು ಕೇಳಿದ್ದು ಆದರೆ ಐತಾಳರು ದತ್ತು ಮಕ್ಕಳು ಯಾವ ಜಾತಿಯೋ ಯಾವ ಕುಲವೋ ಅವುಗಳನ್ನೆಲ್ಲ ನಮ್ಮ ಮನೆಯ ಮಾಣಿ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಐತಾಳರು ಹೆಂಡತಿಯ ಭಾವನೆಗೆ ಬೆಲೆಯನ್ನು ಕೊಡುವುದಿಲ್ಲ ಹೆಂಗಸರು ಮನೆಯಲ್ಲಿ ಕೆಲಸವನ್ನು ಮಾಡಿಕೊಂಡಿರಬೇಕು. ಗಂಡಸರು ಮನೆಯ ಯಜಮಾನರು ಅವರ ಮಾತೆ ಕೊನೆಯಮಾತು ಎಂಬ ಧೋರಣೆಯನ್ನು ಹೊಂದಿದ್ದರು.ಪಾರೋತಿಯು ಮೂಕ ಪ್ರಾಣಿಯ ಹಾಗೆ ಯಾವುದನ್ನು ಪ್ರಶ್ನಿಸದೆ ಎಲ್ಲವನ್ನು ಒಪ್ಪಿಕೊಳ್ಳುತ್ತಾ ಜೀವನ ನಡೆಸುತ್ತಿದ್ದಳು. "ರಾಮೈತಾಳರ ಎರಡನೆಯ ಮದುವೆ ಪಾರೋತಿಯ ಸಹನೆ-ಅಭಿಮಾನಗಳನ್ನು ಕೆಣಕುತ್ತವೆ. ಭವಿಷ್ಯದ ಬಗ್ಗೆ ಆತಂಕಗಳನ್ನು ಹುಟ್ಟಿಸುತ್ತವೆ. ಆದರೆ ಅವಳು ಹೋರಾಟಕ್ಕಿಳಿಯಲಾರಳು. ಇದಕ್ಕೆ ಕಾರಣ ಕೇವಲ ಆರ್ಥಿಕ ಅವಲಂಬನವಷ್ಟೇ ಇರದೆ ಸಾಂಸ್ಕೃತಿಕ ಶರಣಾಗತಿಯು ಕಾರಣವಾಗಿದೆ."[7] ಮನೆಗೆ ಬಂದ ಸವತಿಯ ಮೇಲೆ ಕೋಪ ಮಾಡಿಕೊಳ್ಳದೆ ಪ್ರೀತಿ, ವಿಶ್ವಾಸದಿಂದ ಕಾಣುತ್ತಾಳೆ. ತನ್ನ ಸ್ವಂತ ತಂಗಿಯಂತೆ ನೋಡಿಕೊಳ್ಳುತ್ತಾಳೆ. ಸವತಿಯ ಮಕ್ಕಳನ್ನು ತನ್ನ ಮಕ್ಕಳಂತೆ ಪ್ರೀತಿಯಿಂದ ಬೆಳೆಸುತ್ತಾಳೆ. ಕೊನೆಗೆ ಪಾರೋತಿಯು ಸಾಯುವ ಸಂದರ್ಭದಲ್ಲಿ ಗಂಡನ ತೊಡೆಯ ಮೆಲೆ ತಲೆ ಇಟ್ಟು ನಾರಾಯಣ ಸ್ಮರಣೆ ಮಾಡುವ ಐತಾಳರ ಮುಖವನ್ನು ಚೆನ್ನಾಗಿ ನೋಡಿದಳು. ಸರಸೋತಿಯು ಗಂಗಾಜಲವನ್ನು ಅವಳ ಬಾಯಿಗೆ ಎರೆದಳು.ಪಾರೋತಿಯ ಮುಖದಲ್ಲಿ ಶಾಂತಿ ಉದಯಿಸಿತ್ತು. ತುಟಿ ನಿಷ್ಕಲ್ಮಷ ಎಳೆನಗುವಿನಿಂದ ನನಗೇನು ಬೇಕಿನ್ನು ಎನ್ನುವ ತೃಪ್ತಿಯು ಸಾಯುವ ಕ್ಷಣದಲ್ಲಿ ಪಾರೋತಿಯ ಮುಖದಲ್ಲಿ ಕಾಣಿಸಿತು. ಯಾರಿಗೂ ಕೇಡನ್ನು ಬಯಸದ ಶಾಂತ ರೂಪಳು.

---

7. ಕನ್ನಡ ಕಥನ ಸಾಹಿತ್ಯ ಕಾದಂಬರಿ. ಜಿಎಸ್ ಆಮೂರ್ ಪುಸಂ-119 ಮುದ್ರಣ 1994.

ಸರಸೋತಿ

ಸರಸೋತಿ ರಾಮೈತಾಳರ ತಂಗಿ ಗಂಡನನ್ನು ಕಳೆದುಕೊಂಡು ತವರು ಮನೆಯಲ್ಲಿ ಇದ್ದಾಳೆ.ಈಕೆಗೆ ತನ್ನ ಅತ್ತಿಗೆ ಪಾರೋತಿ ಎಂದರೆ ಬಹಳ ಪ್ರೀತಿ.ಇಬ್ಬರು ಒಂದೇ ದೋಣಿಯ ಮೇಲೆ ಪ್ರಯಾಣ ಮಾಡುವವರು.ಪಾರೋತಿಗೆ ಮಕ್ಕಳಿರಲಿಲ್ಲ ಸರಸೋತಿ ಗಂಡನನ್ನು ಕಳೆದುಕೊಂಡವಳು "ವೈಧವ್ಯ ಎಂದು ಆಕೆಯ ಆತ್ಮಾಭಿಮಾನವನ್ನು ಕಡಿಮೆ ಮಾಡಲಿಲ್ಲ. ಕೊನೆಗೆ ಐತಾಳರೆ ಆಕೆಗೆ ಮಣಿಯಬೇಕಾಯಿತು.ಬದುಕಿನ ಬಗ್ಗೆ ಇರುವ ಉತ್ಸಾಹ ಲವಲವಿಕೆ ಹುಮ್ಮಸ್ಸು ಅಮಿತವಾದ ಆಕಾಂಕ್ಷೆಯನ್ನು ಹೊತ್ತು ಸರಸೋತಿ ಶರಣರನ್ನು ಮರಣದಲ್ಲಿ ನೋಡು ಎಂಬಂತೆ ಮರಣದ ಸನ್ನಿವೇಶದಲ್ಲೂ ಇವಳ ಭವ್ಯ ವ್ಯಕ್ತಿತ್ವ ತನ್ನದೇ ಆದ ರೀತಿಯಲ್ಲಿ ಶೋಭಿಸುತ್ತದೆ."[08] ಸರಸೋತಿ ಪಾರೋತಿ ಸಾಗುವಳಿಯಲ್ಲಿ ನಿಪುಣರಾಗಿದ್ದರು.

ಮನೆಯ ಜವಾಬ್ದಾರಿಯನ್ನು ಇವರು ಹೊರುವಷ್ಟು ಐತಾಳರೆ ಹೊರುತ್ತಿರಲಿಲ್ಲ. ಸರಸೋತಿಯು ಸರಳ ಜೀವಿ. ಐತಾಳರ ಕೆಲವು ನಿರ್ಧಾರಗಳು ಸರಸೋತಿಗೆ ಹಿಡಿಸುತ್ತಿರಲಿಲ್ಲ. ಅದನ್ನು ಪ್ರಶ್ನಿಸುತ್ತಿದ್ದಳು. ಹೆಣ್ಣುಮಕ್ಕಳು ಮನೆಯಯಾವ ವಿಷಯದಲ್ಲೂ ತಲೆಯಾಕಬಾರದು. ಕೆಲಸವನ್ನು ಮಾಡಿಕೊಂಡು ಇರಬೇಕು. ಯಜಮಾನಿಕೆಯನ್ನು ಮನೆಯ ಗಂಡಸು ಮಾಡಬೇಕು ಎನ್ನುವ ಐತಾಳರ ಮನೋಭಾವವನ್ನು ವಿರೋಧಿಸುತ್ತಿದ್ದಳು. ಹೆಚ್ಚು ಪ್ರಬುದ್ಧತೆಯನ್ನು ಪಡೆದ ಜೀವ.

ಗದ್ದೆಯಲ್ಲಿ ಆ ವರ್ಷ ಚೆನ್ನಾಗಿ ಬೆಳೆಯಾಗಿತ್ತು.ಐತಾಳರು ಯಾರಿಗೂ ತಿಳಿಯದಂತೆ ಭತ್ತ ವನ್ನು ಅಳೆದಿದ್ದರು. ಸರಸೋತಿಯು ಮನೆಗೆ ಬಂದಾಗ ಐತಾಳರು ಭತ್ತವನ್ನು ಅಳೆದಿರುವ ವಿಷಯ ತಿಳಿದು, ಈ ವರ್ಷ ಹೋದ ವರ್ಷಕ್ಕಿಂತ ಹೆಚ್ಚಿಗೆ ಭತ್ತ ಬಂದಿರಬೇಕೆಂದು ಕೇಳಿದಾಗ ನಿಮ್ಮ ಹರಕು ಬಾಯಿಂದ ಕಡಿಮೆಯೆ ಬಂದಿದೆ ಎಂದು ಬೈಯುತ್ತಾರೆ. ಸರಸೋತಿಗೆ ಅದನ್ನು ನಂಬಲು ಸಾಧ್ಯವಾಗುವುದಿಲ್ಲ. ಗದ್ದೆಯಲ್ಲಿದ್ದ ಭತ್ತವನ್ನು ನೋಡಿ ಅನಿಸಿತ್ತು ಈ ವರ್ಷ ಹೆಚ್ಚು ಬಂದಿದೆ ಎಂದು. ಐತಾಳರು ಮನೆಯಲ್ಲಿ ಇಲ್ಲದಾಗ ಭತ್ತವನ್ನು ಅಳೆದು ನೋಡುತ್ತಾಳೆ. ಭತ್ತ ಹೆಚ್ಚಿದುದ್ದನ್ನು ಕಂಡು ಅಣ್ಣನ್ನ ಬಳಿ ಸುಳ್ಳು ಯಾಕೆ ಹೇಳಿದ ಎಂದು ಬೇಜಾರು ಮಾಡಿಕೊಳ್ಳುತ್ತಾಳೆ. ಐತಾಳರು ಮತ್ತು ಸರಸೋತಿಯು ಮಾತನಾಡುವಾ ಮಾತಿಗೆ ಮಾತು ಬೆಳೆದು ಐತಾಳರು ಕಡಲಿನ ತೆರೆಯಿಂದ ಸುಂದರ ಶ್ಯಾನಬೋಗರ ತೋಟ ಪೂರ್ಣಕೊರೆದು ಹೋಗಿತ್ತು ಅವನು ಯಾರ್ಯಾರ ತಲೆ ಹೊಡೆದು ಮಾಡಿದ ದುಡ್ಡು ಅದು ಎಂದು ಹೇಳುವಾಗ ಸರಸೋತಿಯು ರೇಗಿ ನಿನಗೇನು ಈ ವರ್ಷ 15 ಕಳಸೆ ಭತ್ತ ಹೆಚ್ಚಿಗೆ ಬಂದಿದೆ ಎಂಬ ಸೊಕ್ಕೆ ಎಂದು ಕೋಪದಿಂದ

---

೦೮. ಶಿವರಾಮ ಕಾರಂತರ ಕಾದಂಬರಿಗಳು ಸ್ತ್ರೀ ಸಂಕಥನದ ಸ್ವರೂಪ ಡಾ॥ ಟಿ ರಾಜೇಂದ್ರ ಶಾಸ್ತ್ರಿ ಪು.ಸ 72 ಮುದ್ರಣ 2009

ಹತ್ತು ವರ್ಷದ ಹಿಂದೆ ನಿನ್ನ ತೋಟಾನು ಸಹ ಹೋಯಿತಲ್ಲ ಅದು ಅಕ್ಕಟೆ ಬಂದದ್ದೆ ಎಂದು ತನ್ನ ಮನಸ್ಸಿನ ಕೋಪವನ್ನು ಹೊರಹಾಕಿದಳು.

ಐತಾಳರಿಗೆ ಮನೆಯ ಹೆಂಗಸರು ತಾವು ಇಲ್ಲದ ಸಮಯದಲ್ಲಿ ಭತ್ತವನ್ನು ಅಳೆದಿರುವುದು ತಿಳಿಯಿತು. ತನ್ನ ಮಾತನ್ನು ಇವರ್‍ಯಾರು ನಂಬಲಿಲ್ಲವಲ್ಲ ಎಂಬ ಬೇಸರವು ಅವರನ್ನು ಕಾಡುತ್ತಿತ್ತು. ಮನೆಯಲ್ಲಿ ಸರಿಯಾಗಿ ಊಟ ಮಾಡದೆ ಐತಾಳರು ಅವರ ಬೇಸರವನ್ನು ತೋರಿಸುತ್ತಿದ್ದರು. ಪಾರೋತಿಯು ನಿಮ್ಮಣ್ಣ ನೀನು 15 ಕಳಸೆ ಭತ್ತದ ಸುದ್ದಿ ಮಾತಾಡಿದ್ದರಿಂದ ಊಟ ಬಡಿಸಿದರು ಊಟ ಮಾಡದೆ ಸಿಟ್ಟು ಮಾಡಿಕೊಂಡು ಹೊರಟುಹೋದರು. ಅವರಿಗೆ ಯಾರ ಮೇಲೆ ಸಿಟ್ಟು ಬಂದಿದೆಯೋ ಎಂದು ಪಾರೋತಿಯು ಹೇಳಿದಾಗ ಸರಸೋತಿಯು "ಬಂದರೆ ಬರಲಿ ಬಡವನ ಸಿಟ್ಟು ಹೊಟ್ಟೆಗೆ ಮಾರಿ"17 (ಪು. 31) ಇವನ ಅವತಾರಕ್ಕೆ ನಾನು ಹೆದರುವುದಿಲ್ಲ ನಾನು ಎಲ್ಲಿಯಾದರು ಬದುಕುತ್ತೇನೆ. ಸರಸೋತಿಯು ಬಹಳ ಚಿಕ್ಕವಯಸ್ಸಿನಲ್ಲಿಯೆ ಗಂಡನನ್ನು ಕಳೆದುಕೊಂಡು ಜೀವನದ ನೋವು, ಸಂಕಟಗಳನ್ನು ಅನುಭವಿಸಿದವಳು. ತನ್ನ ಅನುಭವದ ಮಾತನ್ನು ಹೇಳುತ್ತಾಳೆ.

ಸರಸೋತಿಯು ಕೊನೆಯವರೆಗೂ ಪಾರೋತಿಯ ಜೊತೆಗೆ ಇರುತ್ತಾಳೆ. ಸರಸೋತಿಯನ್ನು ಅನುಭವದ ಜೀವಿ ಎಂದು ಕರೆಯಬಹುದು. ಸಂಸಾರದ ನೋವು ನಲಿವುಗಳನ್ನು ಅರಿತವಳು ಸರಳ ಜೀವಿ ಹಾಗೂ ನೇರನುಡಿಯನ್ನು ಹೊಂದಿದ್ದವಳು. ಮಹಾಲಯ ಅಮವಾಸೆಯ ದಿನದಂದು ಸಾವನ್ನಪ್ಪುತ್ತಾಳೆ. ಕೊನೆಯ ತನಕ ಮನೆ ಏಳಿಗೆಗಾಗಿ ಜೀವವನ್ನು ಗಂಧದ ಕೊರಡಿನ ಹಾಗೆ ತೇದವಳು.

ಸತ್ಯಭಾಮೆ

ಸತ್ಯಭಾಮೆಯು ಐತಾಳರ ಎರಡನೆಯ ಹೆಂಡತಿ. ಪಾರೋತಿಗೆ ಮಕ್ಕಳಾಗದಿದ್ದಾಗ ಐತಾಳರು ದತ್ತು ಮಗುವನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಯಾರ-ಯಾರ ಮನೆಯ ಮಕ್ಕಳನ್ನು ನಮ್ಮ ಮನೆಯ ಮಾಣಿ ಮಾಡಲು ಸಾಧ್ಯವಿಲ್ಲ ಎಂದು ತಮ್ಮ ಜಾತಕದಲ್ಲಿ ಮಕ್ಕಳ ಫಲ ಇದೆ ಎಂದು ಹೇಳಿ ಸತ್ಯಭಾಮೆಯನ್ನು ಮದುವೆಯಾಗುತ್ತಾರೆ. ಸತ್ಯಭಾಮೆಯು ಬಂದ ಹೊಸತರಲ್ಲಿ ಪಾರೋತಿಯ ಮೇಲೆ ಬೇಸರವಿತ್ತು. ಸಹಜವಾಗಿ ಸವತಿ ಮತ್ಸರ. ಸತ್ಯಭಾಮೆಗೆ ಗಂಡುಮಗುವಾದಾಗ ಮನೆಯಲ್ಲಿ ಎಲ್ಲಿಲ್ಲದ ಆನಂದ ಉಂಟಾಯಿತು. ಇಷ್ಟು ವರ್ಷ ಯಾವ ಪುಟ್ಟ ಮಕ್ಕಳು ಮನೆಯಲ್ಲಿ ಇರಲಿಲ್ಲ ಹಾಗೂ ವಂಶೋದ್ಧಾರಕ ಜನಿಸಿದನೆಂದು ಎಲ್ಲರ ಮನಸ್ಸಿನಲ್ಲಿ ಸಂತೋಷ ಉಂಟಾಯಿತು. ಆ ಮಗುವಿಗೆ ಲಚ್ಚನೆಂದು ನಾಮಕರಣ ಮಾಡಲಾಯಿತು. ಲಚ್ಚನು

ಬೆಳೆಯುತ್ತ ಹೆಚ್ಚು ದೊಡ್ಡಮ್ಮನನ್ನೆ ಅಚ್ಚಿಕೊಳ್ಳುತ್ತಾ ಹೋದನು. ಇದನ್ನು ಗಮನಿಸಿದ ಸತ್ಯಭಾಮೆಗೆ ಇದನ್ನು ಸಹಿಸಲು ಆಗುತ್ತಿರಲಿಲ್ಲ. ಯಾವಾಗಲು ಲಚ್ಚನು ದೊಡ್ಡಮ್ಮ ದೊಡ್ಡಮ್ಮ ಎಂದು ಅವಳ ಹಿಂದೆನೆ ತಿರುಗುತಿರುತ್ತಾನೆ. ಪಾರೋತಿಗೆ ತಿನ್ನಲು ತಿಂಡಿಯನ್ನು ಕೊಟ್ಟರೆ ತಾನು ತಿನ್ನದೆ ಬಚ್ಚಿಟ್ಟು ಲಚ್ಚನಿಗೆ ತಿನಿಸುತ್ತಿದ್ದಳು.

ಒಂದು ದಿನ ಲಚ್ಚನು ಸರಸೋತಿ ಪಾರೋತಿಯರಿಗೆ ತಿಳಿಯದೆ ಅವರ ಹಿಂದೆ ಹುರುಳಿ ಗದ್ದೆಗೆ ಹೋಗಿದ್ದ ಹಿಮ ಸುರಿಯುತ್ತಿದ್ದರಿಂದ ಮಗುವಿಗೆ ಜ್ವರ ಬಂದಿತು. ಇದರಿಂದ ಬೇಸರಗೊಂಡ ಸತ್ಯಭಾಮೆಯು "ಹೇಳುವವರ ಮಕ್ಕಳು ಹೇಳೋದಂತೆ: ಕೇಳುವವರ ಮಕ್ಕಳು ಕೇಳೋದಂತೆ"18 (ಪು. 105) ಎಂದು ಸತ್ಯಭಾಮೆಯು ಸರೋಸತಿ ಮತ್ತು ಪಾರೋತಿಯ ಮೇಲಿನ ಕೋಪವನ್ನು ಹೊರಹಾಕಿದಳು. ತಾನು ಹೊರಗಿನಿಂದ ಬಂದವಳು ಇಲ್ಲಿರುವವರು ತನ್ನ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಮಗುವನ್ನು ಗದ್ದೆಗೆ ಕರೆದುಕೊಂಡು ಹೋಗಿದ್ದಕ್ಕೆ ಹೀಗೆ ಆಗಿದ್ದು ಎಂದರೆ ನನ್ನ ಮೇಲೆ ಜೋರು ಮಾಡುತ್ತಾರೆ ಎಂದು ಐತಾಳರಿಗೆ ಚಾಡಿಯನ್ನು ಹೇಳುತ್ತಾಳೆ. ಒಮ್ಮೆ ಲಚ್ಚನು ದೊಡ್ಡಮ್ಮನ ತೊಡೆಯ ಮೇಲೆ ಮಲಗಬೇಕೆಂದು ಹಠ ಹಿಡಿಯುತ್ತಾನೆ. ಇದನ್ನು ಗಮನಿಸಿದ ಸತ್ಯಭಾಮೆಯು ಬಾರೋ ನನ್ನ ತೊಡೆಯ ಮೇಲೆ ಮಲಗು ಎಂದು ಕರೆಯುತ್ತಾಳೆ. ಆದರೆ ಲಚ್ಚನು ದೊಡ್ಡಮ್ಮನ ತೊಡೆಯ ಮೇಲೆ ಮಲಗಬೇಕೆಂದು ಹಠ ಮಾಡುತ್ತಾನೆ.

ಕೊನೆಗೆ ಪಾರೋತಿಗೆ ಉಪಾಯ ಕಾಣದೆ ಅವನನ್ನು ಎತ್ತಿ ಕಾಲಮೇಲೆ ಒರಗಿಸಿಕೊಂಡು ಗೋಡೆಗೆ ತಾನು ಒರಗಿ ಕುಳಿತುಕೊಳ್ಳುತ್ತಾಳೆ. ಇದನ್ನು ನೋಡಿದ ಸತ್ಯಭಾಮೆಯು ಅಲ್ಲಿಂದ ಐತಾಳರಿದ್ದ ಕಡೆಗೆ ಬಂದು "ಹೆರಲಿಕ್ಕೆ ನಾನು ಹೊರಲಿಕ್ಕೆ ಅವರು"19 (ಪು. 105) ಎಂದು ತನ್ನ ದು:ಖವನ್ನು ಐತಾಳರಲ್ಲಿ ಹೇಳಿಕೊಳ್ಳುತ್ತಾಳೆ. ತಾನು ಎತ್ತ ಮಗ ತನ್ನನ್ನೆ ಬೆಡವೆನ್ನುತ್ತಾನೆ. ದೊಡ್ಡಮ್ಮನೆ ಬೇಕು ಎನ್ನುತ್ತಾನೆ ಅಲ್ಲಿ ನಾನು ಹೆರಲಿಕ್ಕೆ ಮಾತ್ರ ದೊಡ್ಡಮ್ಮನ ಮೇಲೆ ತೋರಿಸುವ ಪ್ರೀತಿಯನ್ನು ತನ್ನ ಮೇಲೆ ಯಾಕೆ ತೋರಿಸುತ್ತಿಲ್ಲ ಎಂದು ತನ್ನ ಮನಸ್ಸಿನ ನೋವನ್ನು ತಿಳಿಸುತ್ತಾಳೆ. ಹೀಗೆ ಸತ್ಯಭಾಮೆ ಮತ್ತು ಪಾರೋತಿಯ ನಡುವೆ ಬಿರುಕು ದೊಡ್ಡದಾಗುತ್ತಾ ಹೋಗುತ್ತದೆ. ಕಾಲಕಳೆದಂತೆ ಸತ್ಯಭಾಮೆಗೆ ಪಾರೊತಿಯ ಒಳ್ಳೆಯತನ ಅರ್ಥವಾಗುತ್ತಾ ಹೋಗುತ್ತದೆ. ಸತ್ಯಭಾಮೆಗೆ ತಾನು ಪಾರೋತಿಯ ಮೇಲೆ ಅಸೂಹೆ ಪಟ್ಟಿದ್ದು ತಪ್ಪೆಂದು ತಿಳಿಯುತ್ತದೆ. ಪ್ರಕೃತಿ ಸಹಜವಾಗಿ ಹುಟ್ಟುವಂತಹ ಅಸೂಹೆಗಳು ಸಂಸಾರದಲ್ಲಿ ಸಹಜ ಅದನ್ನು ತಿಳಿದು ಬಾಳಿದರೆ ಬದುಕು ನಂದನವನ.

ನಾಗವೇಣಿ

ಐರೋಡಿಯ ವಾಸುದೇವಯ್ಯನವರ ಮಗಳು ಲಚ್ಚನ ಹೆಂಡತಿ ತಂದೆ ವಕೀಲರಾಗಿದ್ದರಿಂದ ಬೆಳೆದದ್ದೆಲ್ಲ ಪಟ್ಟಣದಲ್ಲಿ. ಲಚ್ಚನನ್ನು ಮದುವೆಯಾಗಿ ಯಾವ ಸುಖವನ್ನು ಕಾಣುವುದಿಲ್ಲ. ಬರಿ ಕಣ್ಣೀರೆ. ಲಚ್ಚನನ್ನು ಮನುಷ್ಯನನ್ನಾಗಿ ಬದಲಾಯಿಸುತ್ತೇನೆ ಎಂಬ ಪ್ರಯತ್ನವು ವಿಫಲವಾಯಿತು. ಗಂಡನಲ್ಲಿ ಯಾವುದೇ ನಿರ್ಲಕ್ಷ್ಯವಿದ್ದರೂ ಒಂದೊಂದು ಸಲ ಕೈಹಿಡಿದ ಗಂಡನಿಗೆ ಸೋಲುತ್ತಾಳೆ. "ಕುಟುಂಬದ ಚೌಕಟ್ಟಿನೊಳಗೆ ಹಾಗೂ ಹೊರಗೆ ನಡೆಯುವ ಯಜಮಾನಿಕೆ ಪ್ರವೃತ್ತಿ ನಾಗವೇಣಿ ಪಾಲಿಗದು ದಾಂಪತ್ಯ ವೀಕ್ಷಣೆಯ ಕೇಂದ್ರ ಶಕ್ತಿಯಾಗುತ್ತದೆ."[9]

ಇದರ ಪರಿಣಾಮ ಮೂರನೆಯ ಸಲಕ್ಕೆ ಬಸಿರಾಗಿ ಮಗುವನ್ನು ಹಡೆಯಲು ಕಾರಣವಾಗುತ್ತದೆ.ಲಚ್ಚನು ನಾಗವೇಣಿಯನ್ನು ನಂಬಿಸಿ ಆಕೆಯ ಹೆಸರಿನಲ್ಲಿರುವ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳುತ್ತಾನೆ. ನಾಗವೇಣಿಯು ಗಂಡುಮಗುವಿಗೆ ಜನ್ಮ ಕೊಡುವಳು.ಆ ಮಗುವಿಗೆ ಆತನ ತಾತನ ಹೆಸರನ್ನೆ ಇಡುತ್ತಾರೆ. ರಾಮ ಐತಾಳ ಎಂದು ನಾಮಕರಣ ಮಾಡುತ್ತಾರೆ. ಇದು ಲಚ್ಚನಿಗೆ ಇಡಿಸಲಾಗದು ಆದರು ಸುಮ್ಮನಿರುತ್ತಾನೆ. ಮಗು ಚಿಕ್ಕವನಿದ್ದಾಗ ಕೆಲಸಕ್ಕೆಂದು ಪಟ್ಟಣಕ್ಕೆ ಹೋದವನು ಮನೆಗೆ ಪುನಹ ಬರುವ ಪ್ರಯತ್ನ ಮಾಡಲಿಲ್ಲ. ಹೋಗುವಾಗ ತನ್ನ ಹೆಸರಿನಲ್ಲಿದ್ದ ಆಸ್ತಿಯನ್ನು ಬೇರೆಯವರಿಗೆ ಮಾರಿ ಯಾರಿಗೂ ಹೇಳದಂತೆ ಹೊರಟುಹೋಗಿದ್ದ. ಸ್ವಲ್ಪ ದಿನದ ನಂತರ ಮನೆಯವರಿಗೆಲ್ಲ ಆಸ್ತಿಯು ಬೇರೆಯವರ ಪಾಲಾಗಿರುವುದು ತಿಳಿಯಿತು.

ಮನೆಯಲ್ಲಿ ಬಡತನ ಇನ್ನು ಹೆಚ್ಚಾಯಿತು ತಂದೆಯ ಆರೈಕೆಯಲ್ಲಿ ಕಷ್ಟವನ್ನು ತಿಳಿಯದೆ ಬೆಳೆದ ನಾಗವೇಣಿ ಲಚ್ಚನನ್ನು ಮದುವೆಯಾಗಿ ಬಡತನದ ಕಷ್ಟವನ್ನು ಅನುಭವಿಸುತ್ತಾಳೆ. ಸರಸೋತಿ ಸತ್ಯಭಾಮೆಯರು ತೀರಿಕೊಂಡ ನಂತರ ತಂದೆಯ ಮನೆಗೆ ಹೋಗುತ್ತಾಳೆ. ಬೇರೆಯವರ ಹಂಗಿನ ಅನ್ನ ನರಕವೆನಿಸುತ್ತದೆ. ತನ್ನ ಮಗನ ವಿದ್ಯಾಭ್ಯಾಸದ ದೃಷ್ಟಿಯಿಂದ ನಾಗವೇಣಿ ತನ್ನ ತಂದೆಯ ಮನೆಯನ್ನು ಸೇರುತ್ತಾಳೆ. ತಾನು ಎಂದೋ ಕಲಿತು ಬಿಟ್ಟ ಸಂಗೀತವನ್ನೆ ಪುನಃ ಎತ್ತಿಕೊಂಡು ಬೇಸರವನ್ನು ಹಗುರ ಮಾಡಿಕೊಂಡಳು. ತನ್ನ ತಂದೆ ವಿಧಿವಶರಾದ ನಂತರ ತಾಯಿಯನ್ನು ಕರೆದುಕೊಂಡು ಐರೋಡಿಯ ಮನೆಗೆ ಬಂದಳು. ಇಲ್ಲೆ ಇರಲು ನಿರ್ಧರಿಸಿದಳು.

ತಾಯಿ ತೀರಿಕೊಂಡ ಬಳಿಕ ನಾಗವೇಣಿ ಒಕ್ಕಲಾಗಿ ಒಂಟಿಯಾದಳು. ಇಂಥ ಸಂದರ್ಭದಲ್ಲಿ ನಾಗವೇಣಿ ಅನಾಥೆಯಾದರೂ ಚಿಕ್ಕಪ್ಪನ ನೆರವಿನಿಂದ ತನ್ನ ಊರಲ್ಲೆ ಉಳಿಯುತ್ತಾಳೆ.ಬಹಳ ಕಷ್ಟ

9. ಶಿವರಾಮ ಕಾರಂತರ ಕಾದಂಬರಿಗಳು ಸ್ತ್ರೀ ಸಂಕಥನದ ಸ್ವರೂಪ. ಡಾ॥ ಟಿ ರಾಜೇಂದ್ರತಗಡ್ಡಿ ಪು-72 ಮುದ್ರಣ 2009

ಪಟ್ಟು ರಾಮನನ್ನು ಬೆಳೆಸುತ್ತಾಳೆ. ಲಚ್ಚನಿಂದ ಕಳೆದುಹೋದ ಸಂತೋಷವನ್ನು ಮಗನಿಂದ ಪಡೆಯುತ್ತಾಳೆ. ವಿದ್ಯಾವಂತೆಯಾದ ನಾಗವೇಣಿಯು ಗಂಡನ ಮೋಸಕ್ಕೆ ಒಳಗಾಗುತ್ತಾಳೆ. ಬಡತನದಲ್ಲಿ ಒಕ್ಕಲು ಮಾಡಿ ಸ್ವಾವಲಂಬಿಯಾಗಿ ಜೀವನ ನಡೆಸುತ್ತಾಳೆ. ಮಗನಿಗೆ ಒಳ್ಳೆಯ ನಡವಳಿಕೆಯನ್ನು ರೂಪಿಸಿರುತ್ತಾಳೆ. ಕಷ್ಟದ ನಂತರ ಸುಖವಿರುತ್ತದೆ ಎಂಬ ನಾಗವೇಣಿಯ ಮಾತು ಕಾದಂಬರಿಯ ಕೊನೆಯಲ್ಲಿ ಸತ್ಯವಾಗುತ್ತದೆ.

ಅಧ್ಯಾಯ–5

ಶೈಲಿ

ಮರಳಿ ಮಣ್ಣಿಗೆ ಕಾದಂಬರಿಯನ್ನು ರಚಿಸಿರುವ ಲೇಖಕರು ನವೋದಯ ಸಾಹಿತ್ಯದ ತಂತ್ರ ಮತ್ತು ಭಾಷೆಯನ್ನು ಬಳಸಿಕೊಂಡಿದ್ದು ನವೋದಯ ಸಾಹಿತ್ಯದ ಮೂಲ ಪ್ರವೃತ್ತಿಗಳ ಸಮರ್ಥ ಅವಿಷ್ಕಾರ ಕಾದಂಬರಿಯಲ್ಲಿದೆ. ಭವಿಷ್ಯದಲ್ಲಿ ನಂಬಿಕೆ, ಕಷ್ಟಗಳನ್ನು ಸಹಿಸಿಕೊಂಡರೆ ಸುಖ, ಆಗೋಚರ ಶಕ್ತಿಯಲ್ಲಿ ಅಚಲನಂಬಿಕೆ, ವರ್ತಮಾನವನ್ನು ಸಹಿಸಿಕೊಂಡರೆ ಭವಿಷ್ಯದಲ್ಲಿ ಸುಖ, ಸುಖಾಂತ್ಯವನ್ನು ಮೆಚ್ಚಿಕೊಂಡ ಸಾಹಿತ್ಯ, ಇವುಗಳ ಚಿತ್ರಣ ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಕಾದಂಬರಿಕಾರರು ಈ ಕಾದಂಬರಿಯನ್ನು ನಿರೂಪಣೆ ಮಾಡಿರುವ ತಂತ್ರ ಅಮೋಘ.ಈ ಕಾದಂಬರಿಯಲ್ಲಿ ಬಳಸಿರುವ ಭಾಷೆ, ಗಾದೆ ನುಡಿಗಟ್ಟುಗಳ ಬಳಕೆ, ಪ್ರಕೃತಿಯ ವರ್ಣನೆ ವ್ಯಕ್ತಿಯ ವರ್ಣನೆ ಇವುಗಳ ನಿರೂಪಣಾ ಶೈಲಿಯನ್ನು ಕಾದಂಬರಿಕಾರರು ಬಹಳ ಬುದ್ದಿವಂತಿಕೆಯಿಂದ ನಿಭಾಯಿಸಿದ್ದಾರೆ. ಕಾರಂತರಂತೆ ಪ್ರಕೃತಿಯನ್ನು ವರ್ಣನೆ ಮಾಡುವವರು ಯಾರು ಇಲ್ಲವೆಂಬ ರೀತಿಯಂತೆ ಕಾದಂಬರಿಕಾರರು ಪ್ರಕೃತಿಯನ್ನು ವರ್ಣನೆ ಮಾಡಿದ್ದಾರೆ. "ಕಾರುತಿಂಗಳು ಮೊದಲಿಗೆ ವಿಶಾಲ ಕೆರೆಯಂತೆ ಕಾಣಿಸುತ್ತಿದ್ದ ಪಡುವಣ ಬಯಲು ನಟ್ಟಿ ಮುಗಿದ ಮೇಲೆ ಹಚ್ಚ ಹಸುರಾಗಿಬಿಟ್ಟಿದೆ. ಕಡಲಿನಗಾಳಿ, ತೆಂಕುಗಾಳಿಗಳು ಆ ವಿಶಾಲ ಬಯಲಿನಲ್ಲಿ ಮೈಲು ಮೈಲುಗಳ ತನಕವೂ ಹೊಲದ ಹಸಿರನ್ನು ತೆರೆಗಳಂತೆ ತೂಗಿಸುವ ನೋಟ, ಕಡಲನ್ನೇ ನಾಚಿಸುವಂತ ನೋಟದಾಗಿತ್ತು. ಐತಾಳರ ಮನೆಯ ಆರಾಲಿನಲ್ಲಿ ನಿಂತುಕೊಂಡರೆ ಮೂಡುಪಡುಗಳೆರಡು ಕಾಣಿಸುತ್ತವೆ"20 (ಪು. 27) ಕಾದಂಬರಿಕಾರರು ಕಡಲು, ತೆರೆಗಳು ಕಡಲಿನಗುಳಿ ಇವುಗಳನ್ನುಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿದ್ದಾರೆ. ಪ್ರಕೃತಿ ಮತ್ತು ಮನುಷ್ಯನ ಸಂಬಂಧವನ್ನು ತಿಳಿಸಿದ್ದಾರೆ. ಕಾದಂಬರಿಕಾರರು ನಿರೂಪಕರಾಗಿ ಉತ್ತಮ ಕೆಲಸವನ್ನು ಮಾಡಿದ್ದಾರೆ. ಕಾಡಲಿನೊಂದಿಗೆ ಮೂರು ತಲೆಮಾರಿನ ಜನರ ನಂಟು ಬೇರೆ ಬೇರೆಯಾಗಿದೆ. ಪರೋತಿಯ ನಿಸರ್ಗದ ಒಂದು ಭಾಗವೇ ಆಗಿರುವುದರಿಂದ ಅವಳಿಗೆ ಪ್ರತ್ಯೇಕತೆ ಇಲ್ಲ. "ಮಾನವನ ಸಹಜವಾದ ಸೌಂದರ್ಯ ಪ್ರೀತಿ ಅವಳಲ್ಲಿದೆಯಾದರೂ ಅದು ಸೌಂದರ್ಯ ಪ್ರಜ್ಞೆಯಾಗಿ ಅಭಿವ್ಯಕ್ತಿ ಪಡೆಯುವುದಿಲ್ಲ"[10] ಆಕಡಲು, ಆ ಅಳುವೆ, ಆನದಿ, ಆಮರಳಿನ ದಂಡೆ, ಇವೆಲ್ಲ ಅವಳ ಜೀವನದ ಪ್ರತಿ ನಿಮಿಷದ ಒಡವೆಗಾಗಿದ್ದವು. ಕಡಲಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಳು.

---

10. ಕನ್ನಡ ಕಥನ ಸಾಹಿತ್ಯ ಜಿಎಸ್ ಆಮೂರ್ ಪು–124 ಮುದ್ರಣ 1994.

ಲಚ್ಚನಿಗೆ ಕಡಲು ಬೇಸರ ಕಳೆಯುವ ವಸ್ತುವಾಗಿತ್ತು. ಚಿಕ್ಕವನಿದ್ದಾಗ ಶೀನಮಯ್ಯನ ಮಗ ಬರುವ ಇವನ ಜೊತೆಗೂಡಿ ಹೊನ್ನೆ ಮರಗಳ ತೋಪಿನಲ್ಲಿ ಬೇಸರ ಕಳೆಯಲು ಆಡುತ್ತಿದ್ದರು. ಅಲ್ಲೂ ಬೇಸರವಾದರೆ ಕಡಲಿನ ದಂಡೆಗೆ ಹೋಗುತ್ತಿದ್ದರು.ಬಣ್ಣ ಬಣ್ಣದ ಚಿಪ್ಪುಗಳನ್ನು ಹೆಕ್ಕುತ್ತ ಅಲ್ಲಿ ಆಡುತ್ತಿದ್ದರು. ಮರಳಿನಲ್ಲಿ ಸುರಂಗವನ್ನು ಕೊರೆಯುತ್ತಾನೆ ಬೇಸರವಾದರೆ ಕಡಲಿನ ಅಲೆಗಳನ್ನು ಎಣಿಸುವನಂತೆ ಪಡುವಣ ಮುಖಮಾಡಿ ಕುಳಿತುಬಿಡುತ್ತಾನೆ. "ಸಮುದ್ರದ ಸಾನಿಧ್ಯದಲ್ಲಿಯೂ ಲಚ್ಚ ತನ್ನ ಜಗತ್ತಿನಿಂದ ಹೊರಗೆ ಬರುವುದಿಲ್ಲ. ಅಲ್ಲಿಯೂ ಅವನಿಗೆ ಪರೀಕ್ಷೆಯ ಕಾಟದ ಚಿಂತೆಯೇ"[11] ಲಚ್ಚನಿಗೆ ಕಡಲು ಎಂದರೆ ಬರಿ ಬೇಸರ ಕಳೆಯುವ ಒಂದು ವಸ್ತು ಅಷ್ಟೆ. ಮೂರನೇ
ತಲೆಮಾರಿನ ರಾಮ ಸಮುದ್ರದೊಡನೆ ಬೆಳೆಸಿಕೊಂಡು ಬರುವ ಸಂಬಂಧದಲ್ಲಿ ಸಜೀವತೆ-ಅನ್ಯೋನ್ಯತತೆಗಳಿರುವುದು ಹೊಸ ಬೆಳವಣಿಗೆ. ಈ ಗುಣ ರಾಮನಲ್ಲಿ ಮೊದಲಿನಿಂದಲು ಕಂಡು ಬರುತ್ತದೆ. ರಾಮ ಮರಳಿ ಮಣ್ಣಿಗೆ ಬಂದ ನಂತರ ಸಮುದ್ರದ ಸಾನಿಧ್ಯದಲ್ಲಿ ಅವನು ತನ್ನ ಸೃಜನಶೀಲತೆಯನ್ನು ಕಂಡುಕೊಳ್ಳುತ್ತಾನೆ ಕಡಲಿನ ವರ್ಣನೆಯನ್ನು ಕಾದಂಬರಿಕಾರರು ಬಹಳ ಅದ್ಭುತವಾಗಿ ಮಾಡಿದ್ದಾರೆ. ಕಾದಂಬರಿಕಾರರು ಕರಾವಳಿ ತೀರದ ಭಾಷೆಯನ್ನು ಬಳಸಿದ್ದಾರೆ. ಐತಾಳ ಮತ್ತು ಸರಸೋತಿಯರು ಹಿರಿಯ ಜೀವಗಳು ಇವರು ಜೀವನದಲ್ಲಿ ಕಷ್ಟ, ಸುಖಗಳನ್ನು ನೋಡಿ ಬೆಳೆದವರು. ಆದರೆ ಮನೆಯಲ್ಲಿ ಯಜಮಾನಿಕೆ ಗಂಡಸರದ್ದೆ ಇರಬೇಕೆಂಬುದು ಐತಾಳರ ಭಾವನೆ ಅವರು ಕೂಡ ಹಾಗೆಯೇ ನಡೆದುಕೊಳ್ಳುತ್ತಿದ್ದರು. ಮನೆಯ ಎಲ್ಲರು ಸೇರಿ ಭತ್ತವನ್ನು ಬೆಳೆದರು. ಭತ್ತ ಎಷ್ಟಿದೆ ಎಂದು ಮನೆಯ ಹೆಂಗಸರಿಗೆ ತಿಳಿಸಲಿಲ್ಲ. ಹೆಂಗಸರು ಭತ್ತ ಎಷ್ಟಿದೆ ಎಂದು ತಿಳಿದುಕೊಂಡುತನ್ನ ಮಾತಲ್ಲಿ ನಂಬಿಕೆ ಇಲ್ಲದೆ ತಾನೂ ಇಲ್ಲದ ಸಮಯದಲ್ಲಿ ಪತ್ತೆಹಚ್ಚಿದ್ದಾರೆಂದು ಗೊಣಗುತ್ತ 'ಆಗದ ಅಜ್ಜಿಗೆ ಅರವತ್ತು ಊರಿನ ಪಾರುಪತ್ಯ'[20](ಪು125) ಎಂದು ಹೇಳಿದರು, ಕಾದಂಬರಿಕಾರರು ಭಾಷೆಯ ಜೊತೆಗೆ ನುಡಿಗಟ್ಟಿನ ತಂತ್ರವನ್ನು ಬಳಸಿದ್ದಾರೆ. ನುಡಿಗಟ್ಟುಗಳು ಪಾತ್ರದ ಪ್ರಬುದ್ಧತೆಯನ್ನು ತಿಳಿಸುತ್ತವೆ. ರಾಮ ಐತಾಳರು ಊಟ ಮಾಡದೆ ಮುನಿಸಿಕೊಂಡು ಹೊರಗಡೆ ಹೋಗುತ್ತಾರೆ ಆಗ ಸರಸೋತಿಯು 'ಬಂದರೆ ಬರಲಿ ಬಡವನ ಸಿಟ್ಟು ಹೊಟ್ಟೆಗೆ ಮಾರಿ'[21] (ಪು125) ಎಂದು ಹೇಳುತ್ತಾಳೆ. ಚಿಕ್ಕವಯಸ್ಸಿನಲ್ಲೆ ಗಂಡನನ್ನು ಕಳೆದುಕೊಂಡ ಸರಸೋತಿಯು ಜೀವನದಲ್ಲಿ ಆಕೆಯು ಅನುಭವಿಸಿದ ನೋವುಗಳಿಂದ ಆಕೆ ಪರಿಪಕ್ವಳಾಗಿರುವುದನ್ನು ಈ ನುಡಿಗಟ್ಟಿನಲ್ಲಿ ತಿಳಿಯಬಹುದು. ನುಡಿಗಟ್ಟುಗಳು ಜೀವನದ ಸಾತ್ವಿಕತೆಯನ್ನು ತಿಳಿಸುತ್ತವೆ.

ಕಷ್ಟವನ್ನು ಸಹಿಸಿಕೊಂಡು ಜೀವನ ನಡೆಸುತ್ತಿದ್ದವರು ಪಾರೋತಿ ಸರಸೋತಿ ಸತ್ಯಭಾಮ, ನಾಗವೇಣಿ, ಪಾರೋತಿಯು ರಾಮ ಐತಾಳರ ಮೊದಲ ಹೆಂಡತಿ. ಐತಾಳರನ್ನು ಮದುವೆಯಾಗಿ

11. ಕನ್ನಡ ಕಥನ ಸಾಹಿತ್ಯ ಜಿಎಸ್ ಆಮೂರ್ ಪು-124 ಮುದ್ರಣ 1994.

ಬಂದಾಗಿನಿಂದ ಗಾಣದ ಎತ್ತಿನಹಾಗೆ ದುಡಿದು ದುಡಿದು ಜೀವ ಸಾಕಾಗಿತ್ತು.ಜೊತೆಗೆ ಮದುವೆಯಾಗಿ ವರ್ಷಗಳು ಕಳೆದರು ಇನ್ನೂ ಮಕ್ಕಳಾಗದ ಕೊರಗು ಆಕೆಯನ್ನು ಕಾಡುತ್ತಿತ್ತು. ಆದರೆ ಬಂದ ಎಲ್ಲಾ ಆಕಷ್ಟವನ್ನು ಮೌನವಾಗಿ ಸಹಿಸಿಕೊಂಡಿದ್ದಳು. ಐತಾಳರು ಪಾರೋತಿಗೆ ಮಕ್ಕಳಿಲ್ಲದಾಗ ವಂಶವನ್ನು ಬೆಳೆಸಲು ಒಂದು ಗಂಡುಮಗು ಬೇಕು. ಮನೆಯಲ್ಲಿರುವ ಹೆಂಗಸರಿಗೆ ಯಾವಸುಳಿವನ್ನು ಕೊಡದೆ ಐತಾಳರೆ ಹೋಗಿ ಮದುವೆ ನಿಶ್ಚಯಿಸಿಕೊಂಡು ಬರುತ್ತಾರೆ. ಆದರೆ ಈ ವಿಷಯ ಪಾರೋತಿಗೆ ತಿಳಿಯುತ್ತದೆ. ಆದರೆ ಪಾರೋತಿಗೆ ಪ್ರಶ್ನೆ ಮಾಡುವ ಧೈರ್ಯವಿಲ್ಲದೆ ಎಲ್ಲವನ್ನು ಮೂಖ ಪ್ರಾಣಿಯ ಹಾಗೆ ಒಪ್ಪಿಕೊಳ್ಳುತ್ತಾಳೆ. ಇಂದು ಕಷ್ಟವನ್ನು ಅನುಭವಿಸಿದರೆ ಮುಂದೆ ಸುಖ ಸಿಗುತ್ತದೆ ಎಂದು ತಿಳಿಯುವ ಪಾತ್ರ ಈ ಕಾದಂಬರಿಯಲ್ಲಿದೆ. ಸರಸೋತಿ ಐತಾಳರ ತಂಗಿ ಮದುವೆಯಾಗಿ ಕೆಲವೆ ತಿಂಗಳಲ್ಲಿ ಗಂಡನ್ನು ಕಳೆದುಕೊಂಡು ತಂದೆಯ ಮನೆಯಲ್ಲಿ ಜೀವನವನ್ನು ನಡೆಸುತ್ತಿದ್ದಾಳೆ. ಸರಸೋತಿಯು ಪಾರೋತಿಯ ಜೊತೆ ಸೇರಿ ವ್ಯವಸಾಯದಲ್ಲಿ ಐತಾಳರಿಗೆ ನೆರವಾಗುತ್ತಾರೆ. ತಮ್ಮ ಜೀವನದಲ್ಲಿ ಕಳೆದುಕೊಂಡ ಪ್ರೀತಿ ಮಮತೆ ಎಲ್ಲವನ್ನು ಮರೆತು ಕೆಲಸದಲ್ಲಿ ಮುಳುಗುತ್ತಾರೆ. ಸರಸೋತಿಗೂ ಎಲ್ಲರಂತೆ ತಾನು ಸಹ ಗಂಡನಮನೆಯಲ್ಲಿ ಮಕ್ಕಳೊಂದಿಗೆ ಇರಬೇಕು ಎನ್ನುವ ಆಸೆಯನ್ನು ಹೊಂದಿದ್ದರು ಅದು ಸಾಧ್ಯವಾಗುವುದಿಲ್ಲ ಎಂಬ ಸತ್ಯವು ಗೊತ್ತಿದೆ. ಆದರೂ ಮುಂದೆ ಒಂದಲ್ಲ ಒಂದು ದಿನ ಒಳ್ಳೆಯದಾಗುವುದೆಂಬ ಅಚಲ ನಂಬಿಕೆಯನ್ನು ಈ ಪಾತ್ರದಲ್ಲಿ ನೋಡಬಹುದು.

ನಾಗವೇಣಿಯು ಹುಟ್ಟಿದಾಗ ಸಿರಿವಂತರ ಮನೆಯಲ್ಲಿ ಜನಿಸಿದವಳು. ಲಚ್ಚನ್ನು ಮದುವೆಯಾಗಿ ಕೋಡಿಗೆ ಬರುತ್ತಾಳೆ. ಮದುವೆಯಾಗಿ ಬಂದ ಕ್ಷಣದಿಂದ ನಾಗವೇಣಿಯ ಬರಿಯ ನೋವನ್ನೆ ಅನುಭವಿಸಿದ್ದಳು. ಪ್ರಥಮ ಬಾರಿಗೆ ಬಸುರಿಯಾಗಿದ್ದಾಗ ನಾಗವೇಣಿಗೆ ಕಾಯಿಲೆ ಬಂದು ಗರ್ಭಪಾತವಾಯಿತು. ಆದರೂ ಸಹ ನಾಗವೇಣಿಯು ಗಂಡನ ಕೆಟ್ಟ ನಡವಳಿಕೆ ದುಷ್ಟಟಗಳನ್ನು ಸಹಿಸಿಕೊಳ್ಳುತ್ತಾಳೆ.

ನಂತರ ಗಂಡನಿಂದ ನಿರಂತರ ನೋವನೆ ಅನುಭವಿಸುತ್ತಾಳೆ, ನಿರಾಶೆಯಿಂದ ಕೊರಗುತ್ತಾಳೆ, ಗಂಡನಿಂದ ಅಲ್ಲದಿದ್ದರು ಮಗನಿಂದ ಮುಂದೆ ಭವಿಷ್ಯದಲ್ಲಿ ಸುಖ ಕಾಣುವನೆಂಬ ನಂಬಿಕೆಯಿಂದ ಜೀವನ ನಡೆಸುತ್ತಿದ್ದಳು. ವರ್ತಮಾನದ ಕಹಿಯನ್ನು ಸಹಿಸಿಕೊಂಡರೆ ಭವಿಷ್ಯದಲ್ಲಿ ಸುಖವಿದೆ ಎಂಬುದನ್ನು ಈ ಪಾತ್ರದ ಮುಖಾಂತರ ಕಾಣಬಹುದಾಗಿದೆ. ನಾಗವೇಣಿಯು ಏನೆ ಕಷ್ಟಗಳು ಬಂದರು ಆಗೋಚರ ಶಕ್ತಿಯಲ್ಲಿ ನಂಬಿಕೆ ಇತ್ತು.ಮುಂದೆ ಎಂದಾದರೊಂದು ದಿನ ಒಳ್ಳೆಯದಾಗಬಹುದು ಎಂದು ನಂಬಿಕೆಯನ್ನು ಹೊಂದಿದ್ದಳು.

ಐತಾಳರು ಕೋಡಿಯ ಬ್ರಾಹ್ಮಣರಾಗಿದ್ದು, ಆಚಾರ ವಿಚಾರದಲ್ಲಿ ನಂಬಿಕೆಯನ್ನು ಹೊಂದಿದ್ದರು, ಪೌರೋಹಿತ್ಯವನ್ನು ಮಾಡಿ ಜೀವನ ನಡೆಸುತ್ತಿದ್ದರು. ಮಗನನ್ನು ವಿದ್ಯಾವಂತನನ್ನಾಗಿ ಮಾಡುವ ಹಠವನ್ನು ಹೊಂದಿದ್ದರು. ಐತಾಳರು ಮನೆಯವರಿಗೆ ಲಚ್ಚನನ್ನು ಶಾಲೆಗೆ ಸೇರಿಸುವಾಗ ಇಂಗ್ಲೀಷ್ ಶಿಕ್ಷಣವನ್ನು ಕೊಡಿಸುವ ಇವನನ್ನು ದೊಡ್ಡ ಆಫೀಸರ್ ಮಾಡುವ ಎಂಬ ಕನಸನ್ನು ಹೊಂದಿದ್ದರು. ವಿದ್ಯಾಭ್ಯಾಸದ ಜೊತೆಗೆ ಲಚ್ಚನು ದುರಾಭ್ಯಾಸಗಳನ್ನು ಮೈಗೂಡಿಸಿಕೊಂಡ ಆಗಿದ್ದರು ಐತಾಳರ ಮನಸ್ಸಿನಲ್ಲಿ ಮಗನು ಮುಂದೆ ಒಳ್ಳೆಯ ಮಾರ್ಗದಲ್ಲಿ ನಡೆಯುತ್ತಾನೆ ಎಂಬ ನಂಬಿಕೆಯನ್ನು ಹೊಂದಿರುತ್ತಾರೆ. ಈ ಪಾತ್ರದಲ್ಲಿ ನಾವು ನವೋದಯದ ತಂತ್ರವನ್ನು ತಿಳಿಯಬಹುದು.

ನಾಗವೇಣೀಯು ಮದುವೆಯಾದ ದಿನದಿಂದ ಬರಿಯ ಕಷ್ಟವನ್ನೆ ಅನುಭವಿಸುತ್ತಿದ್ದಳು ಭವಿಷ್ಯದಲ್ಲಿ ನಂಬಿಕೆಯನ್ನು ಹೊಂದಿದ್ದ ನಾಗವೇಣಿಯ ನಂಬಿಕೆಗಳು ಸುಳ್ಳಾಗುವುದಿಲ್ಲ. ಕಾದಂಬರಿಯ ಕೊನೆಯ ಹಂತದಲ್ಲಿ ನವೋದಯದ ತಂತ್ರವನ್ನು ಬಳಸಿದ್ದಾರೆ.

ಈ ಕಾದಂಬರಿಯಲ್ಲಿ ಎಲ್ಲಿಯೂ ಕೂಡ ಓದುಗರಲ್ಲಿ ಮುಜುಗರ ತರುವಂತ ಬರವಣಿಗೆ ಇಲ್ಲ. ಕಾದಂಬರಿಯಲ್ಲಿ ಲೇಖಕರು ಓದುಗರ ಭಾವಸ್ಪಂದನೆಗೆ ಹೆಚ್ಚು ಒತ್ತು ಕೊಟ್ಟು ಆಧುನೀಕರಣದಿಂದ ಆಗುವ ತೊಂದರೆ ಅದಕ್ಕಾಗಿ ಕಾದಂಬರಿಯ ಪಾತ್ರಗಳು ಯಾವ ರೀತಿ ಹೊಂದಿಕೊಂಡು ಹೋಗುತ್ತವೆ ಎನ್ನುವುದನ್ನು ಕಾಣಬಹುದು.

ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಬಳಸಿರುವ ಭಾವ ನವೋದಯ ಸಾಹಿತ್ಯದಲ್ಲಿನ ಭಾಷೆಯಾಗಿದೆ. ಓದುಗರಿಗೆ ಬೇಗ ಅರ್ಥೈಸುವ ಹಾಗೆ ಚಿತ್ರಿಸಿದ್ದಾರೆ. ಮೂರು ತಲೆ ಮಾರುಗಳು ಓದುಗರ ಕುತೂಹಲವನ್ನು ಕೆರಳಿಸುತ್ತದೆ. ಇದನ್ನು ತಂತ್ರವಾಗಿ ಬಳಸಿಕೊಂಡಿದ್ದಾರೆ. ಈ ಮೂರು ತಲೆಮಾರಿನ ಕಾದಂಬರಿಯಲ್ಲಿ ಪ್ರಾಯೋಗಿಕತೆಯನ್ನು ಕಾಣಬಹುದು.

ಉಪಸಂಹಾರ

ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಅಭ್ಯಸಿಸಿದಾಗ ಅಧ್ಯಯನ ವ್ಯಾಪ್ತಿಯ ಹಿನ್ನೆಲೆಯಲ್ಲಿ ಗಮನಿಸಿದಂತೆ ಕಾದಂಬರಿಗಳಲ್ಲಿ ಮುಖ್ಯವಾಗಿ ಮಾನವನ ಮನಸ್ಸು ವಿಕಾಸವಾದಂತೆ ಪ್ರಕೃತಿ ಮತ್ತು ಮಾನವನಿಗೆ ಇರುವ ಸಂಬಂಧದ ಶೋಧನೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಪ್ರಕೃತಿ ಮನುಷ್ಯನ ಬದುಕನ್ನು ಹೇಗೆ ರೂಢಿಸುತ್ತದೆ ಎಂಬುದು ಮುಖ್ಯವಾಗುತ್ತದೆ. ಮನುಷ್ಯನ ಜೀವನದ ಸಾರ್ಥಕತೆ ಪ್ರಕೃತಿಯಲ್ಲಿಯೇ ಕಂಡು ಬರುವಂಥಾಗಿದ್ದು, ಪ್ರಕೃತಿ ದರ್ಶನದ ಜೊತೆಗೆ ಅಂಟಿಕೊಂಡ ಮಾನವನ ಜೀವನ ದರ್ಶನವೂ ಕಾರಂತರ ಕಾದಂಬರಿಯಲ್ಲಿ ರೂಪ ತಾಳಿದಂತೆ ಕಾಣುತ್ತದೆ.

ಕಾರಂತರು ತಮ್ಮ ಕಾದಂಬರಿಯಲ್ಲಿ ಪ್ರಾದೇಶಿಕ ಮತ್ತು ಚಾರಿತ್ರಿಕ ಸನ್ನಿವೇಶನಗಳು ಒಟ್ಟಾಗುವ ನೆಲೆಯಲ್ಲಿ ಅನ್ನದ ಕಾರಣಕ್ಕಾಗಿ ಎಂದರೆ ಎಲ್ಲಿಯವರೆಗೆ ಅನ್ನವನ್ನು ಬೇಯಿಸುವ ಉರುವಲಿನ ಸಂಪಾದನೆಯವರೆಗೆ ಆಗುವ ನಿಸರ್ಗ ಮತ್ತು ಮನುಷ್ಯ ಮುಖಾಮುಖಿಯ ಹಲವು ನೆಲೆಗಳನ್ನು ಕಾಣಿಸುತ್ತಾರೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಮುಖ್ಯವಾಗುವುದು. ಕೃಷಿ ಜೀವನದ ಸಂದರ್ಭದಲ್ಲಿ ಮನುಷ್ಯ ನಡೆಸುವ ದುಡಿಮೆ, ನೆಲದ ಒಡೆತನ, ಬೆಳೆಯ ಮೇಲಿನ ಯಜಮಾನಿಕೆ ಪ್ರಶ್ನೆ, ಇವೆಲ್ಲಾ ಅಲ್ಲಿನ ಸರಸೋತಿ, ಪಾರೋತಿ, ರಾಮೈತಾಳ, ನೀನಮಯ್ಯ ಮೊದಲಾದ ಪಾತ್ರಗಳು ತಮ್ಮ ವಿಭಿನ್ನ ನೆಲೆಗಳಿಂದ ಅವುಗಳಿಗೆ ಮುಖಾಮುಖಿಯಾಗುತ್ತಾರೆ. ಅಲ್ಲಿನ ಜನರ ಜೀವನದಲ್ಲಿ ಮಹತ್ವದ ಬದಲಾವಣೆಯಾಗುವಲ್ಲಿ ಪಟ್ಟಣದಿಂದ ಹರಿದು ಬಂದ ಹಣದಿಂದ ಆಸ್ತಿಯ ಒಡೆತನದಲ್ಲಿ ಉಂಟಾಗುವ ಸ್ಥಿತ್ಯಂತರವು ಒಂದುಕಾರಣವಾಗಿದೆ. ಪ್ರಧಾನವಾಗಿ ಈ ಕಾದಂಬರಿಯಲ್ಲಿ ಶೀನಮಯ್ಯ ಮತ್ತು ಆತನ ಮಕ್ಕಳು ಕಾಣಿಸುತ್ತಾರೆ. ಆದರೆ ಇಲ್ಲಿ ಕಾರಂತರಿಗೆ ಪ್ರಧಾನವಾಗಿ ಕಾಣುವುದು ಹೆಣ್ಣು ಯಾವುದಕ್ಕೂ ಸಾಟಿ ಇಲ್ಲವೆಂಬಂತೆ ರಾಮೈತಾಳರ ತಂಗಿ ಸರಸೋತಿ ಹಾಗೂ ಈತನ ಮೊದಲ ಹೆಂಡತಿ ಪಾರ್ವತಿಯರ ದುಡಿಮೆಯ ಜೀವನ.

ಕಾರಂತರದ್ದು ಅನುಭವ ಪ್ರಧಾನವಾದಂತಹ ಕಾದಂಬರಿಯಾದ್ದರಿಂದ ಅದರ ವಸ್ತು ವಾಸ್ತವಾದುದಾಗಿದೆ. ಒಟ್ಟು ಜೀವನದ ಸಾರ ಹುಡುಕುವ ಪ್ರಯತ್ನವನ್ನು ಕಾಣಬಹುದು. ನಮ್ಮ ದೇಶದಲ್ಲಿ ಬೇಸಾಯ ರಕ್ಷಕ ಪರಕೀಯವಾದ ವಿದ್ಯಾಭ್ಯಾಸಕ್ಕಿಂತಲೂ ಮುಖ್ಯವಾಗಿ ಭಾರತೀಯರು ಬೇಸಾಯದಿಂದ ಬದುಕಬೇಕಾಗುತ್ತದೆ ಎನ್ನುವುದನ್ನು ಕಾರಂತರು ಕಾದಂಬರಿಗಳ ರಚನೆಗೆ ಆಧಾರವಾಗಿಸಿಕೊಂಡಿದ್ದು ಜೀವನದ ಮುಖ್ಯ ಅವಶ್ಯಕತೆಯನ್ನು ಕುರಿತು ಹೇಳುವಂತೆ ಕಂಡುಬರುತ್ತದೆ.ಬದುಕಿನ ಹಲವು ಹತ್ತು ಹರಹುಗಳನ್ನು ಗುರುತಿಸುವ ಪ್ರಯತ್ನವು ಇದಾಗಿದೆ.

ಮನುಷ್ಯ ನೆಲವನ್ನು ಎಷ್ಟು ಪ್ರೀತಿಸುತ್ತಾನೆ, ನೆಲವನ್ನು ಉಳಿಸಿಕೊಳ್ಳಲು ಹೇಗೆ ಹೋರಾಡುತ್ತಾನೆ. ನೆಲದೊಂದಿಗೆ ಹೋರಾಟ ನಡೆಸಿಕೊಂಡು ಹೇಗೆ ಯಶಸ್ವಿಯಾಗುತ್ತಾನೆ ಎಂಬುದು ಕ್ರಮವಾಗಿ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕಂಡು ಬರುತ್ತದೆ. ಈ ಕಾದಂಬರಿ ಕಾರಂತರ ಜೀವನ ದೃಷ್ಟಿಯನ್ನು ಸಮರ್ಥಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಅರ್ಥವತ್ತಾದ ಬದುಕಿನ ಲಕ್ಷಣವು ಗಮನಾರ್ಹವಾದುದಾಗಿದ್ದು ಜೀವನದ ಸಿದ್ಧಾಂತವನ್ನು ಕಾಣುವುದರಲ್ಲೂ ಕೂಡ ದಕ್ಷಿಣ ಕನ್ನಡದ ವ್ಯಕ್ತಿಯಾಗುತ್ತಾರೆ. ಮನುಷ್ಯ ಮತ್ತು ಬದುಕುಆದರಿಸಿ ಈ ಕಾದಂಬರಿಯನ್ನು ಬರೆದಿದ್ದಾರೆ. ಬದುಕು ದುರಂತದಲ್ಲಿ ಮಂಗಳಾಂತ್ಯವಾದ ಹೋರಾಟ ಎಂಬುದನ್ನು ಸ್ಪಷ್ಟವಾಗಿಸುತ್ತಾರೆ.

ವಾಸ್ತವವಾದದಂತಹ ವಸ್ತುವನ್ನು ಹೊಂದಿದ ಕಾರಂತರ ಈ ಕಾದಂಬರಿ ದಾಖಲಾತಿಯಂತೆ ಕಂಡು ಬರುತ್ತದೆಯಾದರೂ, ಪಾಶ್ಚಾತ್ಯ ಕಾದಂಬರಿಗಳ ಸ್ವರೂಪವನ್ನು ಕಾರಂತರು ಅನುಸರಿಸದೆ ತಮ್ಮದೇ ಆದ ರೀತಿಯಲ್ಲಿ ಕಾದಂಬರಿ ರಚನೆಯಲ್ಲಿ ತೊಡಗಿದ್ದು ಕನ್ನಡ ಕಾದಂಬರಿ ಸ್ವರೂಪಕ್ಕೆ ಹೊಸ ಆಯಾಮ ನೀಡಿದಂತಾಗಿದೆ. ಭಾಷೆಗೆ ಸಂಬಂಧಿಸಿದಂತೆ ಇತರ ಕಾದಂಬರಿಯಲ್ಲಿ ನಿರೂಪಣೆ ಸಾಮಾನ್ಯರ ಭಾಷೆಯಂತೆ ಕಂಡುಬರುತ್ತದೆ. ಪಾತ್ರಗಳ ಸ್ವಂತ ಮಾತಿನ ಶೈಲಿಯು ಬೇರೆಯ ಆಯಾಮವಾಗಬಹುದು ಎನ್ನುವ ಹಾಗೆ ಭಾಷೆ ಕಂಡುಬರುತ್ತದೆ.ಇರುವ ಘಟನೆಯನ್ನು ನೇರವಾಗಿ ಓದುಗನ ಅನುಭವಕ್ಕೆ ಕೊರತೆಯಾಗದಂತೆ ವಿವರಿಸುವ ಕ್ರಮ ಕನ್ನಡ ಕಾದಂಬರಿ ನಿಶ್ಚಿತ ಸ್ವರೂಪ ದೊರಕಿಸಿದ ಹಾಗೆ ಕಂಡು ಬರುತ್ತದೆ.

ಕಾರಂತರಲ್ಲಿ "ಸಾಮಾಜಿಕ ಕಾಳಜಿ" ಮತ್ತು "ಪರಿಸರ ಪ್ರಜ್ಞೆ" ಪ್ರತ್ಯೇಕಿಸಲ್ಪಟ್ಟ ಎರಡು ದಡಗಳಲ್ಲ! ಇವು ಒಂದರೊಳಗೊಂದು ಬೆರೆತುಹೋದ 'ಅಖಂಡ ದರ್ಶನವಾಗಿರುವುದನ್ನು ಈ ಕಾದಂಬರಿಯಲ್ಲಿ ಮನಗಾಣಬಹುದು.

"ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಕಡಲು ಕೂಡ ಒಂದು ವ್ಯಕ್ತಿತ್ವದಂತೆ ನಿರೂಪಿತವಾಗಿರುವುದನ್ನು ರಾಮನಿಗೂ ಕಡಲಿಗೂ ಇರುವ ಭಾವನಾತ್ಮಕ ಸಂಬಂಧವನ್ನು ಎಲ್ಲರೂ ಗಮನಿಸಿದ್ದಾರೆ. ಈ ಕುರಿತ ಸಂಭ್ರಮವೇ ಶಿವರಾಮ ಕಾರಂತರಿಗೆ "ಕಡಲ ತೀರದ ಭಾರ್ಗವ" ಎಂಬ ಖ್ಯಾತಿ ತಂದಿರಬಹುದೆನಿಸುತ್ತದೆ. ಆದರೆ ಕಡಲಿಗೆ ಸಂಬಂಧಿಸಿದಂತೆ "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿರುವ ಸೂಕ್ಷ್ಮ ವಿಚಾರವೊಂದು ತುಂಬಾ ಪ್ರಸ್ತುತವೆನಿಸುತ್ತದೆ. ಈ ಕಾದಂಬರಿಯಲ್ಲಿರುವ ಕಡಲುಗಳ ವರ್ಣನೆ ಏಕರೂಪಾತ್ಮಕವಲ್ಲ! ಉದಾ: ಕೋಡಿಯ ಕಡಲು ಮದ್ರಾಸ್ ಕಡಲು ಇವುಗಳ ವರ್ಣನೆ ಗಮನಿಸ ಬೇಕು. ಕಡಲನ್ನೇ ಮೈದುಂಬಿಕೊಳ್ಳುವ ರಾಮ ಐತಾಳನಿಗೆ ಕೋಡಿಯ ಕಡಲು ಆಪ್ತವಾಗುವುದಿಲ್ಲ. ಈ ಕಡಲುಗಳ ಮೂಲಕ ಗ್ರಾಮ ಭಾರತ

ಮತ್ತು 'ನಗರ ಭಾರತ'ಗಳ ಸಂಘರ್ಷ ಮತ್ತು ವೈರುದ್ಯಗಳನ್ನು ಕಾರಂತರು ಈ ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಬಹಳ ಅರ್ಥಗರ್ಭಿತವಾಗಿ ಮನಗಾಣಿಸಿದ್ದಾರೆ.

ಆಕರ ಗ್ರಂಥ

1.	ಮರಳಿ ಮಣ್ಣಿಗೆ	ಶಿವರಾಮ ಕಾರಂತ ಮನೋಹರ ಗ್ರಂಥಮಾಲೆ ಧಾರವಾಡ ಮೊದಲ ಮುದ್ರಣ-1941 ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಮರುಮುದ್ರಣ ಸೆಪ್ಟಂಬರ್-2015

ಪರಾಮರ್ಶನ ಗ್ರಂಥಗಳು

1.	ಶಿವರಾಮ ಕಾರಂತ	ಮಾಲಿನಿ ಮಲ್ಯ ನವ ಕರ್ನಾಟಕ ಪ್ರಕಾಶನ ಬೆಂಗಳೂರು ಮರು ಮುದ್ರಣ 2014
2.	ಶಿವರಾಮ ಕಾರಂತರ ಕಾದಂಬರಿಗಳು (ಸ್ತ್ರೀ ಸಂಕಥನದ ಸ್ವರೂಪ)	ಡಾ.ಡಿ. ರಾಜೇಂದ್ರ ತಗಡ್ಲಿ ದೇಸಿ ಪುಸ್ತಕ ಪ್ರಕಾಶಕರು, ಎಂಎಲ್.ಸಿ. ಲೇಔಟ್ ಬೆಂಗಳೂರು ಮುದ್ರಣ-2009
3.	ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ	ಡಾ. ನಂದೀಶ ಹಂಚಿ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್-ಶಿವರಾಂಪೇಟೆ, ಮೈಸೂರು ಮೊದಲನೇ ಮುದ್ರಣ-2014
4.	ವಿಮರ್ಶೆಯ ವಿನಯ (ಕಾದಂಬರಿ)	ಕೀರ್ತಿನಾಥ ಕುರ್ತಕೋಟಿ ಪ್ರಕಾಶನ ಮನೋಹರ ಗ್ರಂಥಮಾಲಾ, ಧಾರವಾಡ ಮರು ಮುದ್ರಣ-1996
5.	ಕನ್ನಡ ಕಥನ ಸಾಹಿತ್ಯ ಕಾದಂಬರಿ	ಜಿ.ಎಸ್. ಅಮೂರ್ ಪ್ರಕಾಶನ ಸಪ್ನ ಬುಕ್ ಹೌಸ್ ಬೆಂಗಳೂರು ಮುದ್ರಣ-1994.

ಕಾದಂಬರಿಕಾರರ
ಭಾವಚಿತ್ರವನ್ನು
ಲಗತ್ತಿಸಲಾಗಿದೆ.